ಜನತೆಗೆ ಅಧಿಕಾರ

ಜನತೆಗೆ ಅಧಿಕಾರ

ಕುಂಬಡಾಜೆ ಗ್ರಾಮ ಪಂಚಾಯತ್
ಸಮಗ್ರ ವಿಕಸನ ವರದಿ

ಜನನ ಮರಣ ರಿಜಿಸ್ಟ್ರೇಷನ್

ಶಾಲಾ ಪ್ರವೇಶಕ್ಕೆ
ಉದ್ಯೋಗಕ್ಕೆ
ವಸ್ತುಗಳಲ್ಲಿ ಹಕ್ಕುಸ್ಥಾಪಿಸಲು
ಪೌರತ್ವ ಸ್ಥಾಪಿಸಲು
ಪಾಸ್‌ಪೋರ್ಟ್‌ಗೆ
ಮತದಾನದ ಹಕ್ಕು ಸ್ಥಾಪಿಸಲು
ರೇಶನ್ ಕಾರ್ಡಿನಲ್ಲಿ ಹೆಸರು ಸೇರಿಸಲು
ವಯಸ್ಸು ತಿಳಿಸುವ ಸರಿಯಾದ ದಾಖಲೆ ಬೇಕು

ಉತ್ತರಾಧಿಕಾರಿಗಳಿಗೆ ಸೊತ್ತುಗಳಲ್ಲಿ ಅವಕಾಶ ಸ್ಥಾಪಿಸಲು
ಜೀವ ವಿಮೆ ಹಣ ಲಭಿಸಲು
ಮರಣಾನಂತರ ಅನುಕೂಲತೆಗಳನ್ನು ಪಡೆಯಲು
ಮರಣ ತಿಳಿಸುವ ಸರಿಯಾದ ದಾಖಲೆ ಬೇಕು
ಮರಣವನ್ನು ಸರಿಯಾದ ಸಮಯದಲ್ಲಿ
ದಾಖಲಿಸಿದ್ದೇವೆ ಎಂಬುದನ್ನು ಖಾತರಿಪಡಿಸಿಕೊಳ್ಳಿರಿ.

ಜನನವನ್ನೂ ಮರಣವನ್ನೂ 21 ದಿವಸಗಳಲ್ಲಿ ದಾಖಲಿಸಲು ನೆನಪಿಸಿಕೊಳ್ಳಿರಿ. ಇದು ಕಡ್ಡಾಯವಾಗಿದೆ.

ಪಬ್ಲಿಸಿಟಿ ವಿಭಾಗ ಪಂಚಾಯತ್ ಇಲಾಖೆ.

149-2


KASARAGOD DISTRICT
Kumbadaje Panchayath
KASARAGOD TALUK
HOSDRUG TALUK
KASARAGOD MUNICIPALITY
KANHANGAD MUNICIPALITY
Arabian Sea
Kumbla R S
Kudlu R S
Kasaragod R S
Kalanad R S
Trikkanad R S
Kanhangad R S
Nileswar R S
Chandragiri River
Shiriya River
Uppala River
Manjeshwar R S
Kurchipal'a R S
Pattikere R S
Nileswar River
Kariangattar River
To Mangalore
To Vitla
To Cannanore
To Mercara
Vorkady
Pathur
Kunjthur
Badaje
Bayar
Manipadi
Paivalike
Adkastala
Shiriya
Angajimogaru
Bela
Pardal
Delampady
Parappa
Badiadka
Aduru
Madebettu
Muliyar
Bevinje
Udma
Periye
Bedadka
Kallar
Panathur
Panathady
Manjandaka
Iriyal
Edethot
Malothu
Anjasuram
Hosdrug
Kammadam
Kanonagi
Chimeni
Pilicode
REFERENCE
State Boundary
District Boundary
Taluk Boundary
Panchayat Boundary
Municipal Boundary
National Highway
State Highway
Other Roads
Railway Line
Lakes & Rivers
Taluk Head Quarters
District Head Quarters

Ex - President's

Kumbdaje Village Panchayath



Late Kumbdaje Santha Alva

Sri B. Thimmanna Alva



Sri Y. Venkatramana Bhat

Ubrangala Village Panchayath

Late Vishnu Bhat

Sri U. Gopalakrishna Kunikullaya

Kumbdaje Panchayath



Late Paika Narayana Bhat
(Advocate)

Sri U. Gopalakrishna Kunikullaya



Sri K. Thimmappa Rai

Dr. Y. K. Keshava Bhat

Manjeshwara Block Panchayath Member, Kumbdaje Constituency

Smt. Latha H. Kunikullaya

Present President, Vice President & Members

Smt. S. Saraswathi
President.

Smt. Mallika P. Rai
Vice President.

Dr. Y. K. Keshava Bhat

Smt. Vishalakshi



Sri M. Balakrishna Rai



Sri Goliyadi Kunhali



Sri B. M. Muhammed Shafi



Sri Ramakrishna

ಅನುಕ್ರಮಣಿಕೆ

1.	ಮುನ್ನುಡಿ	6
2.	ಪಂಚಾಯತಿನ ಸಾಂಸ್ಕೃತಿಕ ಸಾಮಾಜಿಕ ಇತಿಹಾಸ	7
3.	ಭೂಪ್ರಕೃತಿ	11
4.	ಕೃಷಿಯೂ ನೀರಾವರಿಯೂ	16
5.	ಮೃಗಸಂರಕ್ಷಣೆ ಮತ್ತು ಮೀನುಗಾರಿಕೆ	22
6.	ವಿದ್ಯಾಭ್ಯಾಸ	24
7.	ಕುಡಿನೀರು ಮತ್ತು ಸಾರ್ವಜನಿಕ ಆರೋಗ್ಯ	30
8.	ಕೈಗಾರಿಕೆ	33
9.	ಸಾರಿಗೆ ಚೈತನ್ಯ ಮತ್ತು ಮಾರುಕಟ್ಟೆ	35
10.	ಸಾಮಾಜಿಕ ಕ್ಷೇಮ ಮತ್ತು ಗೃಹನಿರ್ಮಾಣ	40
11.	ಸಾಂಸ್ಕೃತಿಕ	43
12.	ವನಿತಾ	46
13.	ಸಹಕಾರೀ ರಂಗ	48
14.	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ	50
15.	ಸಂಪನ್ಮೂಲ	53
16.	ಉಪಸಂಹಾರ	55

ಪಂಚಾಯತಿನ ಮಾಹಿತಿ

ಪಂಚಾಯತಿನ ಹೆಸರು	:	ಕುಂಬಡಾಜೆ ಗ್ರಾಮ ಪಂಚಾಯತು
ಒಳಗೊಂಡ ಗ್ರಾಮಗಳು	:	ಕುಂಬಡಾಜೆ, ಉಬ್ರಂಗಳ.
ಬ್ಲೊಕ್ ಪಂಚಾಯತ್ ವಿಭಾಗ	:	ಕುಂಬಡಾಜೆ
ತಾಲೂಕು	:	ಕಾಸರಗೋಡು
ಜಿಲ್ಲಾ ಪಂಚಾಯತ್ ವಿಭಾಗ	:	ಕಾರಡ್ಕ
ಎಸೆಂಬ್ಲಿ ಮಂಡಲ	:	ಕಾಸರಗೋಡು
ವಿಸ್ತೀರ್ಣ	:	31.039 ಚ. ಕಿಲೋಮೀಟರ್
ಗಡಿಗಳು	:	ಪೂರ್ವಕ್ಕೆ ಆದೂರು ಗ್ರಾಮ, ಕಾರಡ್ಕ ಗ್ರಾಮ ಪಂಚಾಯತ್ ಪಶ್ಚಿಮಕ್ಕೆ ಬದಿಯಡ್ಕ ಗ್ರಾಮ ಪಂಚಾಯತ್ ದಕ್ಷಿಣಕ್ಕೆ ನೆಕ್ರಾಜೆ, ಚೆಂಗಳ ಗ್ರಾಮ ಪಂಚಾಯತ್ ಉತ್ತರಕ್ಕೆ ಪಡ್ರೆ ಗ್ರಾಮ, ಬೆಳ್ಳೂರು ಗ್ರಾಮ.
ಅಕ್ಷಾಂಶ	:	12.34 N
ರೇಖಾಂಶ	:	72.10 E
ಒಟ್ಟು ಜನಸಂಖ್ಯೆ	:	12,545 (ಗಂಡು : 6335. ಹೆಣ್ಣು : 6210)
ಜನಸಾಂದ್ರತೆ	:	404/ ಚ. ಕಿಲಾಮೀಟರ್
ಸಾಕ್ಷರತೆ	:	79%
ವಾರ್ಡುಗಳು	:	8
ಆಧ್ಯಕ್ಷರು	:	ಶ್ರೀಮತಿ. ಯಸ್. ಸರಸ್ವತಿ
ಉಪಾಧ್ಯಕ್ಷರು	:	ಶ್ರೀಮತಿ. ಮಲ್ಲಿಕಾ. ಪಿ. ರೈ.

ಮುನ್ನುಡಿ

ಕೇರಳ ಸರಕಾರವು ಜನರ ಸಹಭಾಗಿತ್ವದಿಂದ ಒಂಭತ್ತನೆಯ ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ಒಂದು ಸಾಹಸಪೂರ್ಣವಾದ ಪ್ರಯೋಗ ನಡೆಸುತ್ತಾ ಇದೆ. ಪದ್ಧತಿಗಳ ರೂಪೀಕರಣ, ಕಾರ್ಯಗತಗೊಳಿಸುವಿಕೆ ಮುಂತಾದ ಮೌಲ್ಯಿಕ ವಿಚಾರಗಳಲ್ಲಿ ಸಾರ್ವಜನಿಕರ ಪಾತ್ರ ಮಹತ್ತರವಾದುದು. ಜನಕೀಯ ಯೋಜನೆ, ಸಾಧನೆ, ಕಾರ್ಯಪ್ರಾಪ್ತಿ, ಯೋಜನೆಗಳ ಹಿಂದಿರುವ ಸದಭಿರುಚಿ, ಜನತೆಯಲ್ಲಿ ಜಾಗೃತಿಯನ್ನೂ, ಆತ್ಮವಿಶ್ವಾಸವನ್ನೂ ತುಂಬುವ ಅರ್ಪಣಾ ಮನೋಭಾವದಲ್ಲಿ ಸರಕಾರಕ್ಕೆ ಅತಿಯಾದ ನಂಬುಗೆ ಇದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ವಿಶ್ವವಿಖ್ಯಾತರಾದ ಕೇರಳದ ಜನತೆಯಲ್ಲಿ; ಸರಕಾರವು "ಅಧಿಕಾರ ಜನತೆಗೆ" ಎಂದು ಪ್ರಕಟಿಸುವುದರ ಮೂಲಕ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ನೆರವಾಗಿದೆ ಎಂಬುದು ಸ್ತುತ್ಯರ್ಹ. ಈ ಪಂಥಾಹ್ವಾನದ ಕರೆಗೆ ಓಗೊಟ್ಟು ಸ್ಫೂರ್ತಿಯಿಂದ ಮುಂದೆ ಬರುವ ಸ್ವಯಂ ಸೇವಕರಿಗೆ ನಮ್ಮಲ್ಲಿ ಕೊರತೆಯಿರಲಾರದು.

ಈ ತನಕದ ಎಂಟು ಯೋಜನೆಗಳು ಸರಿಯಾದ ರೀತಿಯಲ್ಲಿ ಕಾರ್ಯಗತವಾಗದಿರಲು ಅನೇಕ ಕಾರಣಗಳು ಇರಬಹುದು. ಬಳಕೆದಾರರನ್ನು ಯೋಗ್ಯತೆಗನುಸಾರವಾಗಿ ಗುರುತಿಸದಿರುವುದು ಈ ಯೋಜನೆಗಳ ವೈಫಲ್ಯಕ್ಕೆ ಕಾರಣವಾಯಿತು ಎನ್ನಬಹುದು. ಯೋಜನೆಗಳ ರೂಪೀಕರಣ ಮತ್ತು ಧ್ಯೇಯ ಸಾರ್ವಜನಿಕ ಅವಶ್ಯಕತೆಗಳಿಗೆ ಹೊಂದಿಕೆಯಾಗಿರಲಿಲ್ಲ. ಇಲಾಖೆಗಳಿಂದ ಕಳುಹಿಸಲ್ಪಟ್ಟ ಮಾಹಿತಿಗಳೂ ಲೆಕ್ಕಾಚಾರಗಳೂ ತಪ್ಪು ಗ್ರಹಿಕೆಗೆ ಕಾರಣವಾದುವು. ಈ ರೀತಿಯ ಪರಿಸ್ಥಿತಿಯುಂಟಾಗಿ ಅಗತ್ಯಗಳ ಮತ್ತು ಆರೋಪಗಳ ಅವ್ಯಕ್ತತೆ ಹೆಚ್ಚಾಯಿತು. ಇದರಿಂದಾಗಿ ಯೋಜನೆಗಳ ಉದ್ದೇಶ, ಧ್ಯೇಯ ಮುಂತಾದುವುಗಳು ನಿಜಸ್ಥಿತಿಗೆ ಹೊಂದಾಣಿಕೆಯಾಗದಿರಲು ಇದೂ ಕೂಡಾ ಕಾರಣವಾಗಿರಬೇಕು.

ಒಂಭತ್ತನೇ ಪಂಚವಾರ್ಷಿಕ ಯೋಜನೆಗೆ ಶ್ಲಾಘನೀಯವಾದ ಅನೇಕ ಪ್ರತ್ಯೇಕತೆಗಳಿವೆ. ಭಾರತವು ತನ್ನ ಸ್ವಾತಂತ್ರ್ಯೋತ್ಸವದ ಸುವರ್ಣ ಮಹೋತ್ಸವವನ್ನು ಆಚರಿಸುತ್ತದೆ. ಸ್ವತಂತ್ರ ಭಾರತದಲ್ಲಿ ಚುನಾವಣೆಯ ನಂತರ ಮತದಾರರಿಗೆ ಅಧಿಕಾರ ಇಲ್ಲಿದಿರುವುದು (Post Election Right) ನಮ್ಮ ಗಮನಕ್ಕೆ ಬಂದ ಆರೋಪಗಳಲ್ಲಿ ಮಹತ್ವಪೂರ್ಣವಾದುದಾಗಿದೆ. ಅಂದರೆ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ಮಾತ್ರ ಮತದಾರರದ್ದಾಗಿದ್ದು, ಯೋಜನೆಗಳ ರೂಪೀಕರಣದಲ್ಲಿ ಯಾವುದೇ ಅಧಿಕಾರಗಳು ಈ ತನಕ ಜನತೆಗೆ ಇರಲಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಆದರೆ ಈ ಪಂಚವಾರ್ಷಿಕ ಯೋಜನೆಯ ಆರಂಭದಿಂದ ನಮ್ಮ ವಿಶ್ವಾಸಕ್ಕೇ ಪುಷ್ಟಿ ದೊರೆತಿದೆ. ಸಾಮಾನ್ಯನೂ, ನಿರ್ಗತಿಕನೂ, ಅನಕ್ಷರಸ್ಥನೂ ಆದ ಪ್ರತಿಯೊಬ್ಬನ ಮಾತಿಗೂ ನಾವಿಂದು ಬೆಲೆಯಿರಿಸಬೇಕಾಗಿದೆ.

ಯೋಜನೆಯ ರೂಪೀಕರಣದಲ್ಲಿ ಜನತೆಗೆ ಕೊಟ್ಟ ಆದ್ಯತೆ ಮತ್ತು ಪ್ರಾಧಾನ್ಯ, ನಿರ್ವಹಣಾ ಹಂತದಲ್ಲಿ ನೀಡಿರುವುದು ಅಭಿನಂದನೀಯ. "We decide, we do" ಎಂಬ ಉಕ್ತಿಯಂತೆ ನಾವೇ ತೀರ್ಮಾನಿಸಿದ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಿ ಅದರ ಫಲಪಡೆಯುವ ಅವಕಾಶ ನಮಗೆ ಸಿಗುತ್ತದೆ. ಇದು ನಮ್ಮಲ್ಲಿ ಹೆಚ್ಚಿನ ಪ್ರಾಮಾಣಿಕತೆಯನ್ನೂ, ಆತ್ಮವಿಶ್ವಾಸವನ್ನೂ, ಆತ್ಮಗೌರವವನ್ನೂ ಬೆಳೆಸುವುದು. ತನ್ನದೇ ಮನೆಯ ಕಾರ್ಯಕಲಾಪಗಳಲ್ಲಿ ಯಜಮಾನನ ಜವಾಬ್ದಾರಿಕೆಯಂತೆ, ಜನರಲ್ಲಿ ಈ ಭಾವನೆ, ಶ್ರದ್ಧೆ ಬೆಳೆದು ಬರುವುದು. ಸಮಾಜದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಲಾಗುವುದಿಲ್ಲ ಎಂಬ ಸತ್ಯವನ್ನು ತಿಳಿಸುವುದರೊಂದಿಗೆ "ಜನತೆಯ ಸಹಭಾಗಿತ್ವದಿಂದ ಪರಮಾವಧಿ ಪ್ರಯತ್ನಿಸಬಹುದು" ಎಂಬ ತತ್ವವನ್ನು ಈ ಯೋಜನೆಯಿಂದ ಯೋಜಿಸಲಾಗಿದೆ. ಯೋಜನೆಗಳ ನಿರ್ವಹಣೆಯಲ್ಲಿ ಅವುಗಳ ರೂಪೀಕರಣಕ್ಕಿಂತಲೂ ಹೆಚ್ಚಿನ ಶ್ರದ್ಧೆ, ಜಾಗರೂಕತೆಯನ್ನು ಪಾಲಿಸಬೇಕಾಗಿದೆ. ಪ್ರತಿಯೊಂದು ಕಾರ್ಯವನ್ನೂ ಫಲಪ್ರದವಾಗಿ ಕಾರ್ಯಗತಗೊಳಿಸಿ, ಉಳಿಸಿ ಬೆಳೆಸಲು ಜನತೆಯ ಪೂರ್ಣ ಸಹಾಯ ಸಹಕಾರಗಳನ್ನು ನಾವು ನಿರೀಕ್ಷಿಸುತ್ತೇವೆ.

"ಮೌಲ್ಯಮಾಪನ"- ಇದು ಪ್ರತಿಯೊಂದು ಯೋಜನೆಯ ಪ್ರಧಾನ ಸವಾಲು. ಉದ್ದೇಶವಿರಿಸಿಕೊಂಡು ಯೋಜಿಸಿದ ಯಾವೆಲ್ಲಾ ಕಾರ್ಯಕ್ರಮಗಳು ಕಾರ್ಯರೂಪಕ್ಕಿಳಿದು ಫಲಕೊಟ್ಟಿತು ಎಂಬುದರಲ್ಲಿ ನಮ್ಮ ಸಾಮರ್ಥ್ಯವನ್ನು ನಾವೇ ಹೆಮ್ಮೆಯಿಂದ ಅಳೆಯಬಹುದು. ಆಗ Social Auditing ಎಂಬ ಪದದ ಅರ್ಥ ನಮಗೆ ಅರಿವಾಗುವುದು.

ಉಗ್ರಾಣಗಳು ಬರಿದಾದಾಗ, ಕಣಜಗಳಲ್ಲಿ ಧಾನ್ಯವು ಶೂನ್ಯವಾದಾಗ ಎಲ್ಲಾ ಪದ್ಧತಿಗಳಿಗೂ ಪ್ರಾಶಸ್ತ್ಯ ಬಂದು, ತುರ್ತು ಯೋಜನೆಗಳು ರೂಪುಗೊಳ್ಳುತ್ತವೆ. ಇಂದಿನ ಪ್ರಯತ್ನಗಳಿಂದ ನಾಳಿನ ಧನ್ಯತೆಯನ್ನು ಸಾಧಿಸಲು, ಜಾಡ್ಯತೊರೆದು ನಾವು ಕಾರ್ಯ ಪ್ರವೃತ್ತರಾಗಲೇಬೇಕು. ಉತ್ತು, ಬಿತ್ತಿ, ಪಡೆದ ಫಲದಿಂದ ಕಣಜಗಳನ್ನು ತುಂಬಿಸಿ ಭವಿಷ್ಯದ ದಾರಿದ್ರ್ಯವನ್ನು ನಿವಾರಿಸಲು ನಾವಿಂದು ಕರ್ಮ ಯೋಗಿಗಳಾಗಬೇಕು. ನಮ್ಮ ಅತಿಯಾಸೆಗೂ, ದುಂದುವೆಚ್ಚಕ್ಕೂ ಅನಿವಾರ್ಯ ಕಡಿವಾಣ ಹಾಕಲೇ ಬೇಕು. ಈ ಎಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ನಡೆಸಲಾದ ವಿಶೇಷ ಗ್ರಾಮಸಭೆಗಳ ಮೂಲಕ ಹೊರಹೊಮ್ಮಿದ ಉದಾತ್ತ ಆಕಾಂಕ್ಷೆಗಳೇ ಕುಂಬ್ಡಾಜೆ ಪಂಚಾಯತಿನ ಪ್ರಗತಿ ರಿಪೋರ್ಟ್‌ನ ಸಾರಾಂಶವಾಗಿದೆ.

ಸ್ವಯಂ ಸೇವಾ ಸಂಘಗಳ ಮತ್ತು ಔದ್ಯಮಿಕ ವಿಚಾರಗಳಲ್ಲಿ ನಮ್ಮ ಕುಂಬ್ಡಾಜೆ ಪಂಚಾಯತ್ ಅತ್ಯಂತ ಹಿಂದುಳಿದಿದೆ. ಈ ಹಿಂದುಳಿಯುವಿಕೆಯನ್ನು ನೀಗಿಸಲು ಸಾಧ್ಯವಾದರೆ, ನಮ್ಮ ಯೋಜನೆಗಳು ಸಫಲವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಗ್ರಾಮಸಭೆಗಳ ನಿರ್ವಹಣೆಯ ವೈಫಲ್ಯ, ಅದಕ್ಕೆ ಪೂರಕವಾದ ಕಾರ್ಯಗಳಲ್ಲಿ ನಮ್ಮ ಸೇವಾ ಮನೋಭಾವದ ಅಭಾವ ಅತ್ಯಂತ ಖೇದಕರ. ಹೀಗಿದ್ದರೂ ಪಂಚಾಯತಿನ ಪೂರ್ಣ ಚಿತ್ರ ಅಚ್ಚೊತ್ತಿ ತೆಗೆಯುವುದರಲ್ಲಿ ನಾವು ಹಿಂದೆ ಬಿದ್ದಿಲ್ಲ. ಯೋಜನಾ ಸಮಿತಿಯ ನಿರ್ದೇಶನದ ಎಲ್ಲಾ ಸೀಮಾರೇಖೆಗಳ ಪರಿಮಿತಿಯಲ್ಲಿ ಇದನ್ನು ತಯಾರಿಸಲಾಗಿದೆ.

ಸ್ಥಿತಿ ವಿವರಗಳ ಸಂಗ್ರಹ ಕಾರ್ಯದಲ್ಲಿ, ವಿಶ್ಲೇಷಣಾ ಕಾರ್ಯದಲ್ಲೂ ಹೆಚ್ಚಿನವರ ಸಹಾಯ ನಮಗೆ ದೊರೆತಿದೆ. ಸಮಯಕ್ಕೆ ಸರಿಯಾಗಿ ಈ ಕಾರ್ಯ ಪೂರ್ತಿಯಾಗಲು ಊರವರ ಸಹಕಾರವೇ ಮುಖ್ಯ ಕಾರಣ ಎಂಬುದು ಇಲ್ಲಿ ಗಮನಾರ್ಹವಾಗಿದೆ. ಸರ್ವಾಂಗೀಣ ಸೇವಾಮನೋಭಾವಕ್ಕೆ ಗ್ರಾಮಸಭೆ ನಾಂದಿಯಾಯಿತು. ನಂಬಿಕೆ ಮತ್ತು ವಿಶ್ವಾಸದಿಂದ ಕೂಡಿದ ಈ ಆರಂಭವು ಶೀಘ್ರ ಬೆಳೆದು ಕುಂಬಡಾಜೆಯ ಮುಂದಿನ ಪೀಳಿಗೆಗೆ ಧೀ ಶಕ್ತಿಯಾಗಿ ನೆಲೆ ನಿಲ್ಲುವಂತಾಗಲಿ - ಎಂದು ಹಾರೈಕೆ.

ಈ ಸೆಮಿನಾರುಗಳು ಜಾತಿ, ಮತ, ರಾಜಕೀಯ ಚಿಂತನೆಗಳಿಂದ ಮುಕ್ತವಾಗಿ, ಜನಕೀಯ ಯೋಜನೆಗಳ ಕಡೆಗೆ ಅಂಬೆಗಾಲಿಕ್ಕುವ ಒಂದು ಇಣುಕು ನೋಟವಾಗಿದೆ.

ಸಾಮಾಜಿಕ - ಸಾಸ್ಕೃತಿಕ ಚರಿತ್ರೆ

ದಕ್ಷಿಣದಲ್ಲಿ ಪಯಸ್ವಿನಿ, ಉತ್ತರದಲ್ಲಿ ಸೀರಾನದಿ (ಸೀರೆ ಹೊಳೆ), ಪೂರ್ವದಲ್ಲಿ ಅಡೂರು, ಪಶ್ಚಿಮದಲ್ಲಿ ಸಿಂಧೂಸಾಗರ ಈ ಮೇರೆಯೊಳಗಿನ ಭೂಭಾಗಕ್ಕೆ ಕುಂಬಳೆಸೀಮೆಯೆಂದು ಪುರಾತನ ಹೆಸರು. ಸಾವಿರಾರು ವರ್ಷಗಳ ಹಿಂದೆ ಕದಂಬ ವಂಶದ ರಾಜರು ಕುಂಭಿಲಾ ನದಿಯ ದಡದಲ್ಲಿ ಅರಮನೆಯನ್ನು ಕಟ್ಟಿಕೊಂಡು ರಾಜ್ಯವಾಳುತ್ತಿದ್ದರು. ಮಾಯಿಪ್ಪಾಡಿ ವಂಶದವರೂ ಅದೇ ರಾಜವಂಶಕ್ಕೆ ಸೇರಿದವರಾಗಿದ್ದರು. ಕುಂಬಳೆಯು ತುಳುದೇಶದ ರಾಜಧಾನಿಯಾಗಿತ್ತು. ಕುಂಬಳೆ ಸೀಮೆಗೆ 'ಸತ್ಯದ ಸೀಮೆ' ಎಂದು ಬಿರುದಿತ್ತು. ಅಶೋಕನ ಶಿಲಾ ಶಾಸನಗಳಲ್ಲಿ ಸಹ ನಮ್ಮ 'ತುಳುದೇಶವನ್ನು' ಸತ್ಯಪುತ್ರ ದೆಶವೆಂದು ಕರೆಯಲಾಗಿದೆ. (ಕ್ರಿ.ಪೂ. 263ರ ಸಿದ್ಧಾಪುರ ಶಾಸನ) ಆ ಕಾಲದಲ್ಲಿ ಈ ಪ್ರದೇಶವು ಕುಂಬಳೆ ಸೀಮೆಯ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ನಮ್ಮೀ ಗ್ರಾಮವು ಹಳೆಯ ಮದರಾಸು ಸಂಸ್ಥಾನದ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗವಾಗಿತ್ತು. ಬ್ರಿಟಿಷರ ಆಗಮನದಿಂದ ಉಂಟಾದ ಚಾರಿತ್ರಿಕ ಬದಲಾವಣೆಯಲ್ಲಿ ಈ ಪ್ರದೇಶವು ಬ್ರಿಟಿಷರ ಮದರಾಸು ಪ್ರಾಂತದ ಅಧೀನವಾಯಿತು. ಕುಂಬಡಾಜೆ ಬೀಡಿನ ಬಲ್ಲಾಳರ ಆಡಳಿತಕ್ಕೆ ಈ ಗ್ರಾಮವು ಒಳಪಟ್ಟಿದ್ದು ಕಾಲಕ್ರಮೇಣ ಇವರಿಂದ ಅಧಿಕಾರವು ಬಂಟರ ಮನೆತನಕ್ಕೆ ಹಸ್ತಾಂತರವಾಯಿತೆಂದು ತಿಳಿಯಲಾಗಿದೆ.

ಸುಮಾರು ಐವತ್ತು ವರ್ಷಗಳ ಹಿಂದೆ ಆಧುನಿಕ ರೀತಿಯ ಯಾವುದೇ ವ್ಯವಸ್ಥೆಗಳಿಲ್ಲದ ಕಾಲದಲ್ಲಿ ಇಲ್ಲಿನ ಜನರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿರಿಸಿಕೊಂಡು ಸೌಹಾರ್ದದಿಂದ ಜೀವನ ನಡೆಸುತ್ತಾ ಇದ್ದರು. ಇಲ್ಲಿನ ಬಹ್ವಂಶ ಜನರು ಕೃಷಿ ಕಾಯಕ ನಡೆಸುತ್ತಾ ಬಂದಿರುವರು. ಪರಂಪರಾಗತವಾದ ಕುಶಲ ಕರ್ಮಿಗಳಿಗೆ ನಮ್ಮ ಪಂಚಾಯತಿನಲ್ಲಿ ಕೊರತೆಯಿರಲಿಲ್ಲ. ಸಾಸ್ಕೃತಿಕವಾಗಿಯೂ, ಆರ್ಥಿಕವಾಗಿಯೂ ಈ ಗ್ರಾಮದ ಜನರು ಮುಂದಿದ್ದರು. ಮಾತ್ರವಲ್ಲದೆ ವಿವಿಧ ಕಾಯಕಗಳಲ್ಲಿ ನಿರತರಾಗಿದ್ದು ಸ್ವಾಲಂಬಿಗಳಾಗಿದ್ದರು. ತೀರಾ ಬಡವರಾಗಿ ಕೂಲಿನಾಲಿ ಮಾಡಿ ಜೀವಿಸುತ್ತಿದ್ದ ಮಂದಿಯೂ ಇದ್ದು ನೆಮ್ಮದಿಯ ಬಾಳ್ವೆ ನಡೆಸುತ್ತಿದ್ದರು. ಫಲವತ್ತಾದ ಮಣ್ಣನ್ನೇ ನಂಬಿ ಸಂಪನ್ಮೂಲಗಳನ್ನು ಬಳಸಿ ಜೀವಿಸುತ್ತಿದ್ದರು. ವಾದವಿವಾದಗಳ ಪ್ರಶ್ನೆ ಜಟಿಲವಾದಾಗ ಊರಿನ ಪ್ರಮುಖರು ನ್ಯಾಯ ತೀರ್ಮಾನ ಮಾಡುತ್ತಿದ್ದರು. ಕುಂಬಡಾಜೆ ಬೀಡಿನ ಚಾವಡಿ (ಮಂಜಕೊಟ್ಟಿಗೆ) ಬಹಳ ಕಾರಣಿಕದ ಸ್ಥಳವಾಗಿದ್ದು ಇಲ್ಲಿ ಸತ್ಯದ ಪ್ರಮಾಣ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಕುಂಬಡಾಜೆ ಮನೆತನದವರೇ ಇಲ್ಲಿ ಇತ್ತೀಚೆಗಿನವರೆಗೆ ಪರಂಪರಾಗತ ಗ್ರಾಮಾಧಿಕಾರಿಗಳಾಗಿದ್ದರು. ಅವರಿಗೆ 'ವಿಲೇಜ್ ಮೆಜಿಸ್ಟ್ರೇಟರ ಅಧಿಕಾರವೂ ಇತ್ತು. ವಿದ್ಯಾಭ್ಯಾಸ, ಜಾನಪದ ಕಲೆ, ಗುಡಿಕೈಗಾರಿಕೆ, ಕೃಷಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಜನರು ಮುಂದುವರಿದಿದ್ದರು.

ಸ್ವಾತಂತ್ರ್ಯಪೂರ್ವದ ತಲೆಮಾರಿನ ಅನೇಕರು ಸಂಸ್ಕೃತಿ ಹಾಗೂ ಕನ್ನಡ ಭಾಷೆಗಳಲ್ಲಿ ಏಕಪ್ರಕಾರವಾಗಿ ಅಧ್ಯಯನಮಾಡಿ ಖ್ಯಾತಿ ಪಡೆದವರೂ ಈ ಗ್ರಾಮದಲ್ಲಿದ್ದರು. ಯಕ್ಷಗಾನ ಕ್ಷೇತ್ರದಲ್ಲೂ, ಕನ್ನಡನಾಡಿನ ಎಲ್ಲೆಡೆಗಳಲ್ಲಿ ಖ್ಯಾತಿಗಳಿಸಿದ ಕಲಾವಿದರೂ, ಭಾಗವತರೂ, ಅರ್ಥದಾರಿಗಳೂ ನಮ್ಮ ಪ್ರದೇಶದಲ್ಲಿ ಇದ್ದರು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ. ಜ್ಯೋತಿಶ್ಶಾಸ್ತ್ರದಲ್ಲೂ, ನಾಟಿವೈದ್ಯಕೀಯ ಕ್ಷೇತ್ರದಲ್ಲೂ, ವಿದ್ಯಾಭ್ಯಾಸ ರಂಗದಲ್ಲೂ ಇತರ ಕಲಾ ಕ್ಷೇತ್ರಗಳಲ್ಲೂ ಪ್ರಾವೀಣ್ಯವನ್ನೂ ಪಾಂಡಿತ್ಯವನ್ನೂ ಪಡೆದ ಅನೇಕ ಹಿರಿಯ ವಿದ್ವಾಂಸರು ಈ ಗ್ರಾಮದಲ್ಲಿದ್ದರು.

ಶ್ರೀ ಕಂಡೆತ್ತೋಡಿ ನಾರಾಯಣ ಕೇಕುಣ್ಣಾಯರು, ಶ್ರೀ ಮವ್ವಾರು ಕಿಟ್ಟಣ್ಣ ಭಾಗವತರು, ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು, ಮಠದಮೂಲೆ ಶ್ರೀ ಮಂಜಪ್ಪ ಶೆಟ್ಟರು, ಆಜಿಲ ಸುಬ್ಬಯ್ಯ ಶೆಟ್ಟಿ, ಅಗಲ್ಪಾಡಿ ಶ್ರೀ ಕು೦ಞಿಕೃಷ್ಣ ಮಣಿಯಾಣಿಗಳೇ ಮೊದಲಾದವರು ಯಕ್ಷಗಾನವನ್ನು ಕಲೆಯ ಉತ್ತುಂಗ ಶಿಖರಕ್ಕೇರಿಸಿದ ಕಲಾವಿದರಲ್ಲಿ ಅಗ್ರಗಣ್ಯರಾಗಿದ್ದಾರೆ. ಈ ಕ್ಷೇತ್ರದಲ್ಲಿ ಆನೆಪ್ಪಳ್ಳ ಶ್ರೀ ಸುಬ್ರಾಯ ಭಟ್ಟರನ್ನು ನಾವು ಮರೆಯುವಂತಿಲ್ಲ. ಸ್ವತಹ 'ಆನೆಪ್ಪಳ್ಳ ಯಕ್ಷಗಾನಮೇಳ'ವನ್ನು ಕಟ್ಟಿಕೊಂಡು ಯಕ್ಷಗಾನದ ಪ್ರಚಾರಕ್ಕಾಗಿ ದುಡಿದ ಧೀರ ಕರ್ಣಧಾರ. ಮಾತ್ರವಲ್ಲದೆ ಭಗಂಧರ, ವ್ರಣ ಹಾಗೂ ದೊಡ್ಡ ರೀತಿಯ ಬಾಪು, ಕುರು ಇತ್ಯಾದಿಗಳನ್ನು ಗುಣಪಡಿಸುವ ಏಕೈಕ ವಿಖ್ಯಾತ ನಾಟಿ ವೈದ್ಯರಾಗಿದ್ದರು. ಪರಂಪರಾಗತ ನಾಟಿ ವೈದ್ಯರಾಗಿದ್ದು ಶ್ರೀ ನೇರಪ್ಪಾಡಿ ಶ್ರೀ ಬಟ್ಯಪೂಜಾರಿ ಮತ್ತು ಅವರ ಅಳಿಯ ಪೂವ ಪೂಜಾರಿ ಶ್ರೀ ಕಜಮಲೆ ವೆಂಕಪ್ಪ ಭಟ್ಟರು ಬೆಳ್ಳಿಗೆ ಶ್ರೀ ಮೊಳೆಯಾರು ಚಂದು ಮಣಿಯಾಣಿಗಳು ರಾಮಚಂದ್ರ ಅಲೆವೂರಾಯರು, ಪುತ್ರಕಳ ಬೈಂಕಿ ಭಂಡಾರಿ ನಾಟಿ ವೈದ್ಯದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ವೈದ್ಯರಾಗಿದ್ದರು. ಅಲ್ಲದೆ ಕೆ. ಶ್ಯಾಂ ಭಟ್ ಅಳಕೆ ಎಂಬ ಪಶುವೈದ್ಯರೂ ದಿ| ಮಮುಂಞಿ ಚಟ್ಟಂಚಾಲ್ ಎಂಬ ವಿಷ ವೈದ್ಯರು ನಮ್ಮ ನಾಡನ್ನು ಸಂಸ್ಕೃತ ಭಾಷೆ, ವೇದಾಧ್ಯಯನ, ಪೌರೋಹಿತ್ಯ ಕ್ಷೇತ್ರಗಳಲ್ಲಿ ದಿ|ಬಳ್ಳಪದವು ವಾಸುದೇವ ಉಪಾಧ್ಯಾಯರ ಸೇವೆ ಚಿರಸ್ಮರಣಾಯವಾದುದು. ರಂಗ ಪರಿಕರಗಳ ರಚನೆ, ಮರದ ಕೆತ್ತನೆ ಹಾಗೂ ಚಿತ್ರ ರಚನೆಯಲ್ಲಿ ದಿ| ಶ್ರೀ ದೇಲಂಪಾಡಿ ಸುಬ್ರಾಯ ತಂತ್ರಿಗಳು ಅಭಿಜಾತ ಕಲಾವಿದರಾಗಿದ್ದರು. ತಿರುವನಂತಪುರದ ಸಂಸ್ಕೃತ ವಿದ್ಯಾಲಯದಿಂದ 'ಮಹಾಮಹೋಪಾಧ್ಯಾಯ' ಪದವಿಯನ್ನು ಪಡೆದು ಜ್ಯೋತಿಷ್ಯ ಶಿಲ್ಪಶಾಸ್ತ್ರ ಹಾಗೂ ಕೃಷಿಯನ್ನೂ ತಮ್ಮ ಕಸುಬಾಗಿ

ಕೈಗೊಂಡಿದ್ದ ಏತಡ್ಕ ಅಳಕೆ ಶ್ರೀ. ಕೆ. ಕೃಷ್ಣ ಭಟ್ಟರು ಈ ಗ್ರಾಮದ ಹಿರಿಯ ವಿದ್ಯಾಂಸರಾಗಿದ್ದರು. ಏತಡ್ಕ ಶಾಲೆಯ ಸ್ಥಾಪಕರೂ ಆಗಿದ್ದ ಇವರು ಅಲ್ಲಿನ ಅಧ್ಯಾಪಕರೂ ಆಗಿದ್ದರು.

ಕುಂಬಡಾಜೆ ಬೀಡು, ಉಬ್ರಂಗಳ ಕುಣಿಕುಳ್ಳಾಯರ ಮನೆತನ ಬಲೆಕ್ಕಳ ಮತ್ತು ಉಪ್ಪಂಗಳಗಳು ಈ ಪ್ರದೇಶದ ಪ್ರಧಾನ ಮನೆತನಗಳಾಗಿದ್ದುವು. ಅನೇಕ ಜಮೀನ್ದಾರರು ಈ ಗ್ರಮದಲ್ಲಿದ್ದು ತಮ್ಮ ಹೊಲಗದ್ದೆಗಳನ್ನು ರೈತಾಪಿ ಜನರಿಗೆ 'ಗೇಣಿ'ಗೆ ಕೊಡುತ್ತಿದ್ದರು. ಇತ್ತೀಚೆಗಿನ ಸರಕಾರದ ಭೂಸುಧಾರಣಾ ಕಾಯಿದೆಯಿಂದ ಇವರು ತಮ್ಮ ಹೊಲಗದ್ದೆಗಳನ್ನು ಕಳೆದುಕೊಳ್ಳುವಂತಾಯಿತು. ಸಮಾಜದಲ್ಲಿ ಜಾತಿ ವ್ಯವಸ್ಥೆ ಇತ್ತಾದರೂ ಯಾವುದೇ ಜಾತಿ ಕಲಹಗಳು ಇರದೆ ಜನರು ಸಾಮರಸ್ಯದ ಜೀವನ ನಡೆಸುತ್ತಿದ್ದರು.

ಕರ್ಹಾಡ, ಹವ್ಯಕ, ಶಿವಳ್ಳಿ ಮುಂತಾದ ಅನೇಕ ಬ್ರಾಹ್ಮಣ ಕುಟುಂಬಗಳು ಈ ಗ್ರಾಮದಲ್ಲಿದ್ದುಕೊಂಡು ಇವರು ವಿದ್ಯಾಭ್ಯಾಸ, ಕೃಷಿ ಮುಂತಾದ ಅನೇಕ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಬ್ರಾಹ್ಮಣರು, ಸ್ಥಾನಿಕರು, ಬಂಟರು, ಅಗಸರು, ಬಿಲ್ಲವರು, ಯಾದವರು, ಮುಖಾರಿಗಳು, ಚೆಟ್ಟಿಯಾರರು, ಗಾಣಿಗರು, ನಾಯರುಗಳು, ಪರಿಶಿಷ್ಟ ಜಾತಿಯ ಮೊಗೇರರು, ಬೈರರು ಕುಲಾಲರು ಮತ್ತು ನಲಿಕೆಯವರು, ಪರಿಶಿಷ್ಟ ಪಂಗಡದ ನಾಯ್ಕರು ಇನ್ನಿತರ ಅನೇಕ ಮಾರ್ಗದವರು, ಮುಸಲ್ಮಾನರು, ಕ್ರೈಸ್ತರೇ ಮೊದಲಾಗವರು ಹಿಂದಿನ ಕಾಲದಿಂದಲೇ ಈ ಪ್ರದೇಶದಲ್ಲಿ ನೆಲೆನಿಂತಿದ್ದು ಸಾಂಸ್ಕೃತಿಕ, ಸಾಮಾಜಿಕ ಏಕತೆಗೆ ತಮ್ಮ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕನ್ನಡ, ತುಳು, ಮಲೆಯಾಳಿ, ಮರಾಠಿ, ಕೊಂಕಣಿ ಭಾಷೆಗಳನ್ನು ಆಡುವ ವಿವಿಧ ವರ್ಗದ ಜನರು ಇಲ್ಲಿದ್ದರೂ ಕನ್ನಡ ಭಾಷೆಯು ಈ ಪ್ರದೇಶದ ಅಧಿಕೃತ ವ್ಯಾವಹಾರಿಕ ಭಾಷೆಯಾಗಿದೆ.

ಪಾಡ್ದನಗಳು, ಕಂಬಳ ಯಕ್ಷಗಾನ, ಕರ್ನಾಟಕ ಶಾಸ್ತ್ರೀಯ ಸಂಗೀತ, ಭೂತನೃತ್ಯ, ಆಟಿಕಳಂಜ, ಸೋಣದ ಜೋಗಿ, ಪಾಡ್ದನಗಳು, ಮಾಪಿಳ್ಳಾಪಾಟು ಮುಂತಾದುವುಗಳು ಪ್ರಧಾನ ಪರಂಪರಾಗತ ಕಲಾರೂಪಗಳಾಗಿವೆ. ಕೋಳಿ ಅಂಕವು ಈ ನಾಡಿನ ಪ್ರಧಾನವಾದ ಒಂದು ಕಲೆಯಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಈಗ್ರಾಮದ ನೇರಪ್ಪಾಡಿ, ಗೋಸಾಡ ಮೊದಲಾದ ಸ್ಥಳಗಳಲ್ಲಿ ವೈಭವೋಪೇತವಾಗಿ ಕಂಬಳ ನಡೆಯುತ್ತಿತ್ತು. ಅಗಲ್ಪಾಡಿ. ಉಬ್ರಂಗಳ, ಗೋಸಾಡ, ದೇಲಂಪಾಡಿ ಮೊದಲಾದ ದೇವಾಲಯಗಳಲ್ಲಿ ಪ್ರಾಚೀನ ಕಾಲದಿಂದಲೇ ಉತ್ಸವಗಳು ಜರಗುತ್ತಾ ಬಂದಿವೆ. ಬೆಳಿಂಜ ಪೂಮಾಣಿ - ಕಿನ್ನಿಮಾಣಿ ದೈವಸ್ಥಾನ ಕುಂಬಳೆ ಸೀಮೆಯ ಪ್ರಾಚೀನ ನಾಲ್ಕು ದೈವಸ್ಥಾನಗಳಲ್ಲಿ ಒಂದಾಗಿದೆ. ಅನೇಕ ಭೂತಾಲಯಗಳಲ್ಲಿ ಭೂತಾರಾಧನೆ, ಒತ್ತೆಕೋಲ, ಕಳಿಯಾಟಗಳೂ ನಡೆಯುತ್ತಾ ಬಂದಿವೆ. ಈ ಪ್ರದೇಶದ ವಿವಿಧ ಪ್ರದೇಶಗಳಲ್ಲಿರುವ ಬನಗಳಲ್ಲೂ ಆರಾಧನೆಗಳು ನಡೆಯುತ್ತಾ ಬಂದಿವೆ. ಕುಂಬಡಾಜೆ, ಅನ್ನಡ್ಕ, ಉಬ್ರಂಗಳ, ಬೆಳಿಂಜ ಮಸೀದಿಗಳಲ್ಲೂ ಪ್ರತಿವರ್ಷವೂ ಧಾರ್ಮಿಕ ಉತ್ಸವಗಳು ಜರಗುತ್ತಾ ಬಂದಿವೆ. ಕುಂಬ್ಡಾಜೆ ದರ್ಗಾಶರೀಫ್, ಕರ್ಕಟಗೋಳಿ ದರ್ಗಾ ಶರೀಫ್, ಇವುಗಳಲ್ಲಿ ಬಹಳ ಹಿಂದಿನಿಂದಲೇ ಧಾರ್ಮಿಕ ಉತ್ಸವಗಳು ನಡೆದು ಬಂದಿವೆ. ಗೋಂದೋಳು ಪೂಜೆ ಪರಿಶಿಷ್ಟ ಪಂಗಡದವರ ವಿಶೇಷ ಪೂಜೆಯಾಗಿದ್ದು ಅನೇಕ ಮನೆಗಳಲ್ಲಿ ಇದು ವಿಜೃಂಭಣೆಯಿಂದ ಜರಗುತ್ತಾ ಬಂದಿದೆ. ಗುಳಿಗನ ಕೋಲವು ಪ್ರಧಾನವಾದ ಆಚರಣೆಯಾಗಿದೆ.

ವಿಷು (ಸೌರಮಾನ ಯುಗಾದಿ) ಹಬ್ಬವನ್ನು ಇಲ್ಲಿ ಬಹಳ ಸಡಗರದಿಂದ ಆಚರಿಸುತ್ತಾ ಬಂದಿದ್ದಾರೆ. ಶಕ್ತಿ ಪೂಜೆ ಮತ್ತು ಭೂತಾರಾಧನೆಗಳೂ ಜರಗುತ್ತಾ ಬಂದಿದ್ದು ಎಲ್ಲಾ ಮತ ಧರ್ಮದವರೂ ಅವರವರ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದು ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ್ದಾರೆ. ಈ ಭಾಗದ ವಿವಿಧ ಜನಾಂಗದವರು ತಮ್ಮದೇ ಆದ ಆಚಾರ ವಿಚಾರಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಕುಂಬಡಾಜೆಯು ಮತಸೌಹಾರ್ದಕ್ಕೆ ಹೆಸರುವಾಸಿಯಾಗಿದೆ. ಕುಂಬಡಾಜೆ ಬೀಡಿನ ಸಮೀಪ ಬಹಳ ಪ್ರಾಚೀನವಾದ ಒಂದು ಮಸೀದಿಯಿದೆ. ವಿಷ್ಣುಮೂರ್ತಿ ದೈವದ ಭಂಡಾರವು ಈ ಮಸೀದಿಯ ಸಮೀಪದಲ್ಲೇ ವಾದ್ಯಘೋಷದೊಡನೆ ಸಾಗಿಬರುವ ಸಂದರ್ಭದಲ್ಲಿ ಈ ಮಸೀದಿಯಲ್ಲಿ ಎಣ್ಣೆದೀಪ ಬೆಳಗಿಸಿ ಇಡುವ ಸಂಪ್ರದಾಯ ಪುರಾತನ ಕಾಲದಿಂದಲೇ ಬೆಳೆದು ಬಂದಿರುವುದು ನಿಮ್ಮ ಸೌಹಾರ್ದಕ್ಕೆ ಜೀವಂತ ಸಾಕ್ಷಿಯಾಗಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಗ್ರಾಮದ ಜನರು ಸಕ್ರಿಯವಾಗಿ ಭಾಗವಹಿಸಿದ್ದರು. ಇತರ ಯಾವುದೇ ಸಾಮಾಜಿಕ ಕ್ರಾಂತಿಗಳು ಈ ಪ್ರದೇಶದಲ್ಲಿ ಸಕ್ರಿಯವಾಗಿ ಜರಗಲೇ ಇಲ್ಲ. ರಾಜಕೀಯ ಚಟುವಟಿಕೆಗಳೂ ಇತ್ತೀಚೆಗಿನ ಎರಡು ಮೂರು ದಶಕಗಳವರೆಗೆ ಸಕ್ರಿಯವಾಗಿರಲಿಲ್ಲ ಎಂದರೆ ತಪ್ಪಾಗಲಾರದು. ಪಯ್ಯನ್ನೂರಿನಲ್ಲಿ ಜರಗಿದ್ದ ಶ್ರೀ ಜವಹರಲಾಲ್ ನೆಹರೂರವರು ಭಾಗವಹಿಸಿದ್ದ, ಸ್ವಾತಂತ್ರ್ಯ ಸಂಗ್ರಾಮದ ಸಭೆಯಲ್ಲಿ ಈ ಪಂಚಾಯತಿನ ಕೆಲವು ಮಂದಿ ಭಾಗವಹಿಸಿದ್ದರು.

ಕ್ರಿ. ಶ. 1784ರಲ್ಲಿ ನಮ್ಮ ದೇಶದ ಇತಿಹಾಸದಲ್ಲಿ 'ಮೈಸೂರು ಹುಲಿ' ಎಂದು ಪ್ರಸಿದ್ಧವಾದ ಟಿಪ್ಪು ಸುಲ್ತಾನನು ಕುಂಬಳೆ ಸೀಮೆಗೆ ಆಕ್ರಮಣ ನಡೆಸಿದ್ದನು. ಇದರಿಂದಾಗಿ ಈ ಸತ್ಯದ ಸೀಮೆಗೆ ಭಾರೀ ಪ್ರಮಾಣದ ಕಷ್ಟನಷ್ಟಗಳು ಸಂಭವಿಸಿದುವು. ಇದೇ ಸಂದರ್ಭದಲ್ಲಿ ಉಬ್ರಂಗಳದ ದೇವಸ್ಥಾನಕ್ಕೂ ಆತನ ದಾಳಿ ನಡೆದಿದೆ ಎನ್ನಲಾಗಿದೆ. ಇದರ ಹೊರತು ನಮ್ಮ ಗ್ರಾಮದ ಮೇಲೆ ಯಾವುದೇ ಪರಕೀಯ ದಾಳಿಗಳು ನಡೆದಿಲ್ಲ.

ಪ್ರಾಚೀನ ಕಾಲದಿಂದಲೇ ನಮ್ಮ ನಾಡಿನ ವಿದ್ಯಾಭ್ಯಾಸ, ಕಲೆಗಳಿಗೆ ದೇವಾಲಯಗಳೇ ಮೂಲಸ್ಥಾನಗಳಾಗಿದ್ದುವು. ದೇವಾಲಯದ ಗೋಪುರದಲ್ಲಿ ಐಗಳು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕೊಡುತ್ತಿದ್ದರು. ಈ ಗ್ರಾಮದ ಅನೇಕ ಮನೆಗಳಲ್ಲಿ ವಿದ್ಯಾಭ್ಯಾಸ ನೀಡಲಾಗುತ್ತಿತ್ತು.

ಐಗಳ ಶಾಲೆಗಳೂ ಅಲ್ಲಲ್ಲಿ ಇದ್ದುವು. ಅಗಲ್ಪಾಡಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನವು ಈ ದಿಸೆಯಲ್ಲಿ ದಿಟ್ಟ ಹೆಜ್ಜೆಯಿಟ್ಟಿತ್ತು. ಗುರುಕುಲ ಪದ್ಧತಿಯ ಮೂಲಕ ಸಂಸ್ಕೃತ ವಿದ್ಯಾಭ್ಯಾಸ, ವೇದಾಧ್ಯಯನ ಇಲ್ಲಿ ನಿರಂತರವಾಗಿ ನಡೆಯುತ್ತಿತ್ತು. ಕಳೆದ ಅನೇಕ ವರ್ಷಗಳಿಂದ ಈ ದೇವಸ್ಥಾನವು ಅಗಲ್ಪಾಡಿ ವಿದ್ಯಾಲಯಗಳ ಮಕ್ಕಳಿಗೆ ನಿರಂತರವಾಗಿ ಉಚಿತವಾಗಿ ಮಧ್ಯಾಹ್ನದೂಟವನ್ನು ನೀಡುತ್ತಾ ಬಂದಿದೆ. ಈ ಸಂಸ್ಕೃತ ಪಾಠಶಾಲೆಯು ಈಗ ಪ್ರೌಢಶಾಲೆಯಾಗಿ ಭಡ್ತಿಯಾಗಿದೆ. ಕುಂಬಡಾಜೆಯಲ್ಲಿ ಗಾಂಧೀಜಿಯವರ ಕನಸಾಗಿದ್ದು ಕಿರಿಯ ಬುನಾದಿ ಶಾಲೆಯು ಸಾಧಾರಣ ಒಂದುನೂರು ವರ್ಷಗಳಿಂದ ನಡೆಯುತ್ತಾ ಇದೆ. ಅದು ಈಗ ಸರಕಾರೀ ಶಾಲೆಯಾಗಿ ಪರಿವರ್ತನೆ ಹೊಂದಿ ಪ್ರವರ್ತಿಸುತ್ತಾ ಇದೆ.

ಈ ಪಂಚಾಯತಿಗೆ ಒಳಪಟ್ಟ ನಾಲ್ಕು ಪುರಾತನ ಕುಂಬಡಾಜೆ, ಬೆಳಿಂಜ, ಅನ್ನಡ್ಕ ಮತ್ತು ಉಬ್ರಂಗಳ ಮಸೀದಿಗಳಲ್ಲಿ ಮತಪರವಾದ ವಿದ್ಯಾಭ್ಯಾಸವನ್ನು ನೀಡುತ್ತಾ ಬಂದಿದ್ದಾರೆ.

1946ರಲ್ಲಿ ಉಬ್ರಂಗಳ ಪಂಚಾಯತ್ ರೂಪಿಸಲ್ಪಟ್ಟಿತು. ಸ್ವಲ್ಪವೇ ಸಮಯದಲ್ಲಿ ಕುಂಬಡಾಜೆ ಪಂಚಾಯತ್ ಕೂಡಾ ರೂಪೀಕರಣವಾಯಿತು. ಈ ಎರಡೂ ಪಂಚಾಯತ್‌ಗಳಿಗೂ ಎಲ್ಲಾ ವರ್ಗದ ಜನರಿಗೂ ಪ್ರಾತಿನಿಧ್ಯ ಕೊಟ್ಟು, ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡುತ್ತಿದ್ದರು. 1960ರಲ್ಲಿ ಹೊಸ ಕೇರಳ ಪಂಚಾಯತ್ ಶಾಸನ ಬಂದುದರಿಂದ ಈ ಎರಡೂ ಪಂಚಾಯತ್‌ಗಳನ್ನು ಸೇರಿಸಿ "ಕುಂಬಡಾಜೆ ಪಂಚಾಯತ್" ರಚಿಸಲ್ಪಟ್ಟಿತು.

ಕುಂಬಡಾಜೆಯ ರಾಜಕೀಯ, ಸಾಮಾಜಿಕ ಚರಿತ್ರೆಯಲ್ಲಿ ಧೀಶಕ್ತಿಯಾಗಿ ಅನೇಕ ವ್ಯಕ್ತಿಗಳೂ, ಸಂಘಸಂಸ್ಥೆಗಳೂ ಮುಂಚೂಣಿಯಲ್ಲಿದ್ದು ದುಡಿದವರಾಗಿದ್ದಾರೆ. ಹತ್ತಾರು ರೀತಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನೂ, ಸಂಘಸಂಸ್ಥೆಗಳನ್ನೂ ಇಲ್ಲಿನ ಮುಂದಿನ ಪೀಳಿಗೆಯು ಚರಿತ್ರೆಯಲ್ಲಿ ವಸಂತ ಕಾಲದ ಕೋಗಿಲೆಯ ಇಂಚರವಾಗಿ ಸ್ತುತಿಸುವಂತಾಗಲಿ -

ಹಿಂದಿನ ಆಡಳಿತ ಅಧಿಕಾರಿಗಳು :

ಈಗಿನ ಕುಂಬಡಾಜೆ ಗ್ರಾಮ ಪಂಚಾಯತ್ ಪ್ರದೇಶವು 1946ರಲ್ಲಿ ಉಬ್ರಂಗಳ, ಕುಂಬಡಾಜೆ ಎಂಬೀ ಎರಡು ಗ್ರಾಮ ಪಂಚಾಯತುಗಳಾಗಿದ್ದುವು. ಉಬ್ರಂಗಳ, ಕುಂಬಡಾಜೆ ಎಂಬ ಎರಡು ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ವಿವರಗಳನ್ನು ಕೆಳಗೆ ಕೊಡಲಾಗಿದೆ. ಆಗ ಸದಸ್ಯರನ್ನು ಮತದಾರರು ಕೈ ಎತ್ತಿ ಆರಿಸುತ್ತಿದ್ದರು.

ಉಬ್ರಂಗಳ - :

ಅಧ್ಯಕ್ಷರು : ಶ್ರೀ ಪಂಜಿರ್ಕೆ ವಿಷ್ಣುಭಟ್ಟ

ಉಪಾಧ್ಯಕ್ಷರು : ಶ್ರೀ ಯು. ಗೋಪಾಲಕೃಷ್ಣ ಕುಣಿಕುಳ್ಳಾಯ.

ಸದಸ್ಯರು :
1. ಶ್ರೀ ಯಚ್. ಎಂ. ನಾರಾಯ್ ಭಟ್ಟ
2. ಶ್ರೀ ದೇಲಂಪಾಡಿ ಸುಬ್ರಾಯ ತಂತ್ರಿ
3. ಶ್ರೀ ಕಲ್ಲಕಟ್ಟ ಶಂಕರನಾರಾಯಣ ಅನಲಿತ್ತಾಯ
4. ಶ್ರೀ ಕಲ್ಲಕಳಂಬಿ ಅಚ್ಯುತ ಭಟ್ಟ
5. ಶ್ರೀ ಉಬ್ರಂಗಳ ನಡುಮನೆ ವಾಸುದೇವ ಕುಣಿಕುಳ್ಳಾಯ
6. ಶ್ರೀ ಕೆ. ಚೋಮ.

ಕುಂಬಡಾಜೆ -

ಅಧ್ಯಕ್ಷರು : ಶ್ರೀ ಕುಂಬಡಾಜೆ ಸಾಂತ ಆಳ್ವ

ಉಪಾಧ್ಯಕ್ಷರು : ಶ್ರೀ ಕಟ್ಟದ ಕೋರಿಕ್ಕಾರು ವೆಂಕಟ್ರಮಣ ಭಟ್ಟ

ಸದಸ್ಯರು :
1. ಶ್ರೀ ಕೆ. ಕೃಷ್ಣ ಭಟ್ಟ, ಏತಡ್ಕ
2. ಶ್ರೀ ನಾಂದ್ರೋಡು ಪುರುಷೋತ್ತಮ ಭಟ್ಟ
3. ಶ್ರೀ ಎವೆಕ್ಕಳ ಸುಬ್ರಾಯ ಭಟ್ಟ
4. ಶ್ರೀ ತಲೆಬೈಲು ರಾಮಣ್ಣ ಆಚಾರ್ಯ
5. ಶ್ರೀ ಬಟ್ಯ ಮೂರ್ಪನಡ್ಕ
6. ಶ್ರೀ ಚೋಯಿ ಮಣಿಯಾಣಿ, ಮಲ್ಲಮೂಲೆ
7. ಶ್ರೀ ಉಪ್ಪಂಗಳ ಕೊಡೆ ಶ್ಯಾಮ ಭಟ್ಟ
8. ಶ್ರೀ ನಾರಾಯಣ ಕೇಕುಣ್ಣಾಯಕಂಡೆತ್ತೋಡಿ.

ಉಬ್ರಂಗಳ

ಅಧ್ಯಕ್ಷರು : ಶ್ರೀ. ಯು. ಜಿ. ಕುಣಿಕುಳ್ಳಾಯ

ಉಪಾಧ್ಯಕ್ಷರು : ಶ್ರೀ. ಪಿ. ವಿಷ್ಣುಭಟ್ಟ.

ಸದಸ್ಯರು :
1. ಶ್ರೀ. ಕೆ. ಅಚ್ಯುತ ಭಟ್ಟ ಕಲ್ಲಕಡಂಬಿ
2. ಶ್ರೀ. ಡಿ. ಸುಬ್ರಾಯ ತಂತ್ರಿ
3. ಶ್ರೀ ಶಂಕರನಾರಾಯಣ ಅನಲಿತ್ತಾಯ
4. ಶ್ರೀ ಯಚ್. ಯಂ. ನಾರಾಯ್ ಭಟ್ಟ
5. ಶ್ರೀ. ಕೆ. ಚೋಮ
6. ಶ್ರೀ ವಾಸುದೇವ ಕುಣಿಕುಳ್ಳಾಯ

ಕುಂಬಡಾಜೆ

ಅಧ್ಯಕ್ಷರು : ಶ್ರೀ. ಬಿ. ತಿಮ್ಮಣ್ಣ ಆಳ್ವ

ಉಪಾಧ್ಯಕ್ಷರು : ಶ್ರೀ. ವೈ. ವೆಂಕಟರಮಣ ಭಟ್ಟ

ಸದಸ್ಯರು :
1. ಶ್ರೀ ಮಲ್ಲಾರ ಅನಂತರಾಮ ಕೆದಿಲ್ಲಾಯ
2. ಶ್ರೀ ಅಬ್ದುಲ್ ರಹಿಮಾನ್, ಅನ್ನಡ್ಕ
3. ಶ್ರೀ ಮಂಜಪ್ಪ ಶೆಟ್ಟಿ, ಮಠದಮೂಲೆ
4. ಶ್ರೀ ನರಸಿಂಹ ಭಟ್ಟ, ಕಳೆಯತ್ತೋಡಿ
5. ಶ್ರೀ ಬಟ್ಯ ಮಾರ್ಪನಡ್ಕ

ಈ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಬಿ. ತಿಮ್ಮಣ್ಣ ಆಳ್ವರು ರಾಜಿನಾಮೆಯಿತ್ತುದರಿಂದ ಶ್ರೀ ವೈ. ವೆಂಕಟರಮಣ ಭಟ್ಟರನ್ನು

ಅಧ್ಯಕ್ಷರಾಗಿ ಆರಿಸಲಾಯಿತು. 1962ರ ತನಕ ಈ ಸದಸ್ಯರು ಆಡಳಿತ ಮಾಡಿಕೊಂಡಿದ್ದರು.

1962ರಲ್ಲಿ ಮೇಲೆ ಸೂಚಿಸಿದ ಎರಡು ಪಂಚಾಯತುಗಳನ್ನು ಒಟ್ಟು ಸೇರಿಸಕೊಂಡು ಇಂದಿನ ಕುಂಬಡಾಜೆ ಗ್ರಾಮ ಪಂಚಾಯತನ್ನು ರೂಪಿಸಲಾಯಿತು. ಅದರ ನಂತರ ಈ ಪಂಚಾಯತಿನಲ್ಲಿ ಯಾವುದೇ ಪ್ರದೇಶಗಳ ಸೇರಿಸುವಿಕೆ ಅಥವಾ ಕಳೆಯುವಿಕೆ ಉಂಟಾಗಲಿಲ್ಲ. ರೂಪೀಕರಣದ ನಂತರ ಮುಂದಿನ ಚುನಾವಣೆಯ ತನಕ ಸರಕಾರದಿಂದ ನೇಮಿಸಲ್ಪಟ್ಟ ಸ್ಪೆಷಲ್ ಆಫಿಸರರು ಇಲ್ಲಿನ ಮೇಲ್ನೋಟವನ್ನು ನೋಡಿಕೊಳ್ಳುತ್ತಿದ್ದರು. 1963ರಲ್ಲಿ ಪ್ರಥಮ ಚುನಾವಣೆ ಜರಗಿ 26-12-1963ರಂದು ಪ್ರಥಮ ಆಳಿತ ಸಮಿತಿಯು ಆಡಳಿತವನ್ನು ವಹಿಸಿಕೊಂಡಿತು. ಈ ಆಡಳಿತ ಸಮಿತಿಯು ಈ ಕೆಳಗಿನಂತಿದೆ.

ಅಧ್ಯಕ್ಷೆರು : ಶ್ರೀ ಪೈಕೆ ನಾರಾಯಣ ಭಟ್ಟ
ಉಪಾಧ್ಯಕ್ಷರು : ಶ್ರೀ ಯು. ಗೋಪಾಲಕೃಷ್ಣ, ಕುಣಿಕುಳ್ಳಾಯ
ಸದಸ್ಯರು :
1. ಶ್ರೀ ಬಲೆಕ್ಕಳ ಪುರುಷೋತ್ತಮ ಭಟ್ಟ
2. ಶ್ರೀ ಉಪ್ಪಂಗಳ ಶ್ಯಾಮ ಭಟ್ಟ
3. ಶ್ರೀ ಬಿ. ತಿಮ್ಮಣ್ಣ ಆಳ್ವ
4. ಶ್ರೀ ಐತ
5. ಶ್ರೀ ಎ. ಅಬ್ದುಲ್ ರಹಿಮಾನ್.

ಈ ಆಡಳಿತ ಸಮಿತಿಯಲ್ಲಿ ಮಹಿಳಾ ಪ್ರಾತಿನಿಧ್ಯವಿಲ್ಲದುದರಿಂದ ಆಸ್ಥಾನಕ್ಕೆ ಶ್ರೀಮತಿ ಲಕ್ಷ್ಮಿ ಅಮ್ಮನವರನ್ನು ನಾಮನಿರ್ದೇಶ ಮಾಡಲಾಯಿತು. ಸಾಧಾರಣ ಮೂರು ವರ್ಷಗಳ ಬಳಿಕ ಶ್ರೀಮತಿ ಲಕ್ಷ್ಮಿ ಅಮ್ಮನವರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟುದುದರಿಂದ ಆ ಸ್ಥಾನಕ್ಕೆ ಶ್ರೀಮತಿ ಸರೋಜಿನಿ ದೇವಿ, ಪಾರೆಗದ್ದೆಯವರನ್ನು ನಾಮ ನಿರ್ದೇಶ ಮಾಡಲಾಯಿತು. 16 ವರ್ಷಗಳ ನಂತರ ಪುನಃ ಮತದಾನ ನಡೆಯಿತು. 1979ರಲ್ಲಿ ನಡೆದ ಈ ಮತದಾನದಲ್ಲಿ ಶ್ರೀ. ಕೆ. ತಿಮ್ಮಪ್ಪ ರೈ ಅಧ್ಯಕ್ಷರಾಗಿಯೂ, ಡಾ| ವೈ. ಕೆ. ಕೇಶವ ಭಟ್ಟರು ಉಪಾಧ್ಯಕ್ಷರಾಗಿಯೂ ಇದ್ದ ಆಡಳಿತ ಸಮಿತಿಯು ರೂಪಿತವಾಯಿತು. ಈ ಆಡಳಿತ ಸಮಿತಿಯು 1988ರ ವರೆಗೆ ಮುಂದುವರಿಯಿತು. 1988ರಲ್ಲಿ ನಡೆದ ಚುನಾವಣೆಯಲ್ಲಿ ಡಾ| ವೈ. ಕೆ. ಕೇಶವ ಭಟ್ಟ ಅಧ್ಯಕ್ಷರಾಗಿಯೂ ಶ್ರೀ, ಜಿ. ಹಸ್ಯೆನಾರ್ ಉಪಾಧ್ಯಕ್ಷರಾಗಿಯೂ ಇದ್ದ ಆಡಳಿತ ಸಮಿತಿಯು ರೂಪಿತವಾಯಿತು. ಅದರ ನಂತರ 1995ರ ಸಪ್ಟಂಬರ್ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಈಗಿರುವ ಆಡಳಿತ ಸಮಿತಿಯು ಕಾರ್ಯಪ್ರವೃತ್ತವಾಯಿತು. ಇದರ ಅಧ್ಯಕ್ಷರಾಗಿ ಶ್ರೀಮತಿ. ಯಸ್. ಸರಸ್ವತಿ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ. ಮಲ್ಲಿಕಾ .ಪಿ. ರೈ ಅಧಿಕಾರ ಸ್ವೀಕರಿಸಿದರು.

ಸದಸ್ಯರು :
1.ಡಾ. ವೈ. ಕೆ. ಕೇಶವ ಭಟ್ಟ
2. ಶ್ರೀಮತಿ ವಿಶಾಲಾಕ್ಷಿ. ರೈ
3. ಶ್ರೀ. ಬಿ. ಬಾಲಕೃಷ್ಣ. ರೈ
4. ಶ್ರೀ. ಬಿ. ಎ. ಮೊಹಮ್ಮದ್ ಶಾಫಿ
5. ಶ್ರೀ. ಗೋಳಿಯಡಿ ಕುಞ್ಞಾಲಿ
6. ಯಂ. ರಾಮಕೃಷ್ಣ.

With Best compliments From :

SHREE ENTERPRISES

Mfrs. **SOORYA WASHING SOAP**

Post : Yethadka,
Kasaragod - 671 551

☎: 895060 (0499)


DISTRICT : KASARAGOD
TALUK : KANHANGAD
NAME: KUMBADAJE GRAMA PANCHAYATH
Topo Details
Grama panchayath Boundary
Village Boundary
Ward Boundary
Road
River and Streams
Railway Station
W I
W II
W III
W IV
W V
W VI
W VII
W VIII
PADNE VILLAGE
PADIYARA VILLAGE
PANAYAL VILLAGE
KUMBADAJE VILLAGE
KANHANGAD
ALPS
Kumbadaje
Pallipalam
Bhagavathi Temple
Temple
Church
Anganwadi

Transect Report - I - (1)

Kumbdaje panchayath.





Transect Report - I - (2)



Transect Report - I - (3)

Kumbdaje panchayath.



1. ಭೂಪ್ರಕೃತಿ	ಕಡಿದಾದ ಇಳಿಜಾರು	ತಗ್ಗಾದ ಬಯಲು ಪ್ರದೇಶ	ಸಣ್ಣ ಇಳಿಜಾರು	ಎತ್ತರವಾದ ಗುಡ್ಡ ಪ್ರದೇಶಗಳು	ಇಳಿಜಾರಾದ ಬಯಲು ಪ್ರದೇಶ
2. ಮಣ್ಣಿನ ಸ್ವಭಾವ	ಕಲ್ಲುಮಿಶ್ರಿತ ಮಣ್ಣು	ಕೆಂಪು ಮಣ್ಣು	ಕಲ್ಲು ಮಿಶ್ರಿತ ಕೆಂಪು ಮಣ್ಣು	ಕಲ್ಲು ಮಿಶ್ರಿತ ಕೆಂಪು ಮಣ್ಣು	ಕೆಂಪು ಮಣ್ಣು
3. ಸಸ್ಯಜಾಲ	ಗೇರು, ರಬ್ಬರ್	ಅಡಿಕೆ, ಬಾಳೆ, ತೆಂಗು, ಕರಿಮೆಣಸು, ಭತ್ತ	ಗೇರು, ಗಾಳಿಮರ	ಗೇರು ಮರಗಳು, ಗಾಳಿ ಮರಗಳು	ಅಡಿಕೆ, ಭತ್ತ, ಮಲ್ಬರಿ ಕೃಷಿ, ಬಾಳೆ
4. ಪರಿಸರ ಸಮಸ್ಯೆಗಳು	ಮಣ್ಣು ನೀರಿನಲ್ಲಿ ಕೊಚ್ಚಿ ಹೋಗುವಿಕೆ. ನೀರಿನ ತೀವ್ರ ಕೊರತೆ. ಗೇರು ಮರಕ್ಕೆ ಕಾಂಡ ಕೊರೆಯುವ ಹುಳಗಳ ಬಾಧೆ.	ನೀರಿನ ತೊರೆಯೊಂದು ಹರಿಯುವುದು. ನೀರಿನ ಕೊರತೆ. ಅಡಿಕೆಗೆ ಕೊಳೆರೋಗ, ಕರಿಮೆಣಸಿಗೆ ಗಂಟು ಕಳಚುವ ರೋಗ, ಭತ್ತಕ್ಕೆ ಕಾಂಡ, ಗಡ್ಡೆ, ಕೊರೆಯುವ ರೋಗ, ಎಲೆ ಚುಕ್ಕಿ ರೋಗಗಳು ಬಾಧಿಸುವುದು	ಮಣ್ಣಿನ ಕೊರೆಯುವಿಕೆ. ನೀರಿನ ಕೊರತೆ	ಮಣ್ಣಿನ ಕೊರೆತ (ಬರಡು) ನೀರಿನ ಕೊರತೆಯಿರುವ ಪ್ರದೇಶ	ನೀರಿನ ಸಣ್ಣ ತೊರೆ ಹರಿಯುತ್ತದೆ. ಬೇಸಿಗೆಯಲ್ಲಿ ನೀರಿನ ಕೊರತೆಯಿದೆ. ಅಡಿಕೆಗೆ ಕೊಳೆರೋಗ ಬಾಧೆ, ಭತ್ತಕ್ಕೆ ಎಲೆ ಚುಕ್ಕಿ ರೋಗ, ಕಾಂಡ ಕೊರೆಯುವ ರೋಗಗಳು ಕಾಣಿಸುತ್ತವೆ.

Transect Report - I - (4)

1. ಭೂಪ್ರಕೃತಿ	ತಗ್ಗು ಬಯಲು ಪ್ರದೇಶ	ಕಡಿದಾದ ಇಳಿಜಾರು ಪ್ರದೇಶ	ಕಡಿದಾದ ಇಳಿಜಾರು	ತಗ್ಗು ಬಯಲು ಪ್ರದೇಶ	ಕಡಿದಾದ ಇಳಿಜಾರು ಪ್ರದೇಶ
2. ಮಣ್ಣಿನ ಸ್ವಭಾವ	ಕೆಂಪು ಮಣ್ಣು	ಕೆಂಪು ಮಣ್ಣು	ಕೆಂಪು ಮಣ್ಣು	ಕೆಂಪು ಮಣ್ಣು	ಕೆಂಪು ಮುರಕಲ್ಲು ಮಿಶ್ರಿತ ಕೆಂಪು ಮಣ್ಣು
3. ಸಸ್ಯಜಾಲ	ಅಡಿಕೆ, ತೆಂಗು, ಭತ್ತ, ಕರಿಮೆಣಸು, ಬಾಳೆ	ತೆಂಗು, ಗೇರು, ಗಾಳಿಮರ, ರಬ್ಬರ್	ಗೇರು, ಗಾಳಿಮರ	ಅಡಿಕೆ, ತೆಂಗು, ಭತ್ತ, ಬಾಳೆ, ಕರಿಮೆಣಸು	ಗೇರು, ರಬ್ಬರ್, ಬಿದಿರ ಮೆಳೆಗಳು ಹೆಚ್ಚಾಗಿವೆ.
4. ಪರಿಸರ ಸಮಸ್ಯೆಗಳು	ಕಗ್ಗಲ್ಲು ಸಹಿತ ಕೃಷಿ ಪ್ರದೇಶ. ನೀರಾವರಿ ಕೊರತೆಯಿದೆ, ಅಡಿಕೆಗೆ ಕೊಳೆ ರೋಗ, ಭತ್ತದ ಕಾಂಡ, ಗಡ್ಡೆ, ಕೊರೆಯುವ ಹುಳು. ಎಲೆಚುಕ್ಕಿ ರೋಗಗಳಿವೆ.	ನೀರಾವರಿಗೆ ವ್ಯವಸ್ಥೆಯಿಲ್ಲದ ಇಳಿಜಾರು ಕೃಷಿ ಪ್ರದೇಶ. ನೀರಿನ ಕೊರತೆಯಿದೆ, ಮಣ್ಣು ನೀರಿನಿಂದ ಕೊರೆಯುವುದು, ಕುಸಿಯುವಿಕೆ ಇದೆ	ಬರಡು. ನೀರಾವರಿ ತೀವ್ರ ಕೊರತೆಯಿದೆ. ಗೇರುಮರಕ್ಕೆ ಕಾಂಡ ಕೊರೆಯುವ ಹುಳಗಳ ಬಾಧೆಯಿದೆ.	ನೀರಾವರಿಯ ಕೊರತೆಯಿದೆ. ಅಡಿಕೆಗೆ ಕೊಳೆರೋಗ, ಭತ್ತದ ಕಾಂಡ ಕೊರೆಯುವುದು, ಬೆಂಕಿರೋಗಗಳು, ಕರಿಮೆಣಸಿಗೆ ಗಂಟು ಕಳಚುವ ರೋಗಗಳು ಕಾಣಿಸುವುದಿದೆ.	ನೀರಾವರಿಯ ತೀವ್ರ ಕೊರತೆಯಿದೆ. ಗೇರು ಮರಕ್ಕೆ ಕಾಂಡ ಕೊರೆಯುವ ಕೀಟಗಳ ಬಾಧೆಯಿದೆ.

Transect Report - II - (1)

Kumbdaje panchayath.



1. ಭೂಪ್ರಕೃತಿ	ಅತೀ ಎತ್ತರದ ಸಮತಲ ಪ್ರದೇಶ	ಕಡಿದಾದ ಇಳಿಜಾರು ಪ್ರದೇಶ	ತಗ್ಗು ಬಯಲು ಪ್ರದೇಶ	ಎತ್ತರ ಗುಡ್ಡದ ಶಿಖರ	ಹೊಳೆ ಹರಿಯುವ ಪ್ರದೇಶ	ಗುಡ್ಡದ ತಪ್ಪಲು ಪ್ರದೇಶ	ಗುಡ್ಡದ ತುದಿ	ಇಳಿಜಾರು
2. ಮಣ್ಣಿನ ಸ್ವಭಾವ	ಮುರಕಲ್ಲು ಮತ್ತು ಕೆಂಪು ಮಣ್ಣು	ಕೆಂಪು ಮಣ್ಣು	ಕೆಂಪು ಮಣ್ಣು	ಕಲ್ಲುಮಿಶ್ರಿತ ಕೆಂಪು ಮಣ್ಣು	ಕಗ್ಗಲ್ಲು ಮಿಶ್ರಿತ ಮಣ್ಣು	ಕಲ್ಲು ಮಿಶ್ರಿತ ಕೆಂಪು ಮಣ್ಣು	ಉರುಟು ಕಗ್ಗಲ್ಲು ಮಿಶ್ರಿತ ಕೆಂಪು ಮಣ್ಣು	ಕಲ್ಲು ಮಿಶ್ರಿತ ಕೆಂಪು ಮಣ್ಣು
3. ಸಸ್ಯಜಾಲ	ಅಡಿಕೆ, ಬಾಳೆ, ಭತ್ತ, ತೆಂಗು, ಮಳೆ ನೀರನ್ನಾಧರಿಸಿದ ಬೆಳೆಗಳು	ಗೇರು, ತೆಂಗು, ಅಡಿಕೆ, ಬಾಳೆ	ಭತ್ತ, ಅಡಿಕೆ, ತೆಂಗು, ಕರಿಮೆಣಸು, ಬಾಳೆ	ಗೇರು	ತೆಂಗು	ಗೇರು, ತೆಂಗು	ಗೇರು, ತೆಂಗು	ಗೇರು, ತೆಂಗು
4. ಪರಿಸರ ಸಮಸ್ಯೆಗಳು	ನೀರಿನ ಕೊರತೆ ಕಲ್ಲು ಒಡೆಯುವುದು	ವಾಟರ್ ಶೆಡ್ ಪ್ರದೇಶ ಇಳಿಜಾರು ಕೃಷಿ ಪ್ರದೇಶ, ನೀರಿನ ಕೊರತೆಯಿದೆ.	ಬೇಸಿಗೆಯಲ್ಲಿ ನೀರಿನ ಕೊರತೆಯಿದೆ. ಅಡಿಕೆ ಕೊಳೆ ರೋಗ, ಕರಿಮೆಣಸಿನ ರೋಗ ಕಾಣಿಸಿವುದಿದೆ.	ನೀರಾವರಿ ಕೊರತೆಯಿರುವ ಪ್ರದೇಶ	ಮಣ್ಣು ಕೊರೆದು ಹೋಗುವುದು	ನೀರಿನ ಕೊರತೆಯಿದೆ	ನೀರಾವರಿಯ ತೀವ್ರ ಕೊರತೆಯಿದೆ	ನೀರಿನ ಕೊರತೆ ಗೇರು ಮರದ ಕಾಂಡ ಕೊರೆಯುವ ಕೀಟಗಳ ಬಾಧೆ.

Transect Report - II- (2)

1. ಭೂಪ್ರಕೃತಿ	ತಗ್ಗು ಬಯಲು ಪ್ರದೇಶ	ಗುಡ್ಡದ ಇಳಿಜಾರು ಪ್ರದೆಶ	ಗುಡ್ಡದ ಸಮತಲ ತುದಿ	ತಗ್ಗು ಬಯಲು ಪ್ರದೇಶ	ಇಳಿಜಾರು ಪ್ರದೇಶ	ಗುಡ್ಡದ ತುದಿ	ಇಳಿಜಾರು
2. ಮಣ್ಣಿನ ಸ್ವಭಾವ	ಹೊಯಿಗೆ ಮಿಶ್ರಿತ ಕೆಂಪುಮಣ್ಣು	ಕೆಂಪು ಮಣ್ಣು	ಕೆಂಪು ಮಣ್ಣು	ಹೊಯಿಗೆ ಮಿಶ್ರಿತ ಕೆಂಪು ಮಣ್ಣು	ಮರಳು ಮಿಶ್ರಿತ ಕೆಂಪು ಮಣ್ಣು	ಕಲ್ಲು ಮಿಶ್ರಿತ ಕೆಂಪು ಮಣ್ಣು	ಮರಳು ಮಿಶ್ರಿತ ಕೆಂಪು ಮಣ್ಣು
3. ಸಸ್ಯಜಾಲ	ಅಡಿಕೆ, ತೆಂಗು, ಭತ್ತ, ಬಾಳೆ, ಕರಿಮೆಣಸು	ಗೇರು, ಗಾಳಿಮರ ಮಳೆ ನೀರಾಧರಿತ ಇತರ ಕೃಷಿಗಳು	ಗೇರು, ತೆಂಗು	ತೆಂಗು, ಅಡಿಕೆ, ಭತ್ತ, ಬಾಳೆ. ಹೊಳೆಯೊಂದು ಹರಿಯುತ್ತಿದೆ.	ಗೇರು, ರಬ್ಬರ್	ಸಸ್ಯಗಳಿಲ್ಲ.	ಗೇರು .
4. ಪರಿಸರ ಸಮಸ್ಯೆಗಳು	ನೀರಿನ ಕೊರತೆ ಇದೆ	ನೀರಿನ ಕೊರತೆ	ನೀರಿನ ಕೊರತೆ	ನೀರಾವರಿಯ ಕೊರತೆ ತೀವ್ರವಾಗಿದೆ ಅಡಿಕೆಗೆ ಕೊಳೆರೋಗ, ಭತ್ತದ ಕಾಂಡ ಕೊರೆಯುವಿಕೆ, ರೋಗಗಳು ಬಾಧಿಸುವುದಿದೆ	ಬರಡು. ನೀರಿನ ತೀವ್ರ ಕೊರತೆ	ಬರಡು ಭೂಮಿ	ನೀರಿನ ಕೊರತೆ. ಮಣ್ಣು ಕೊರೆಯುವುದು.

Transect Report - II - (3)
Kumbdaje panchayath.



1. ಭೂಪ್ರಕೃತಿ	ವಿಶಾಲ ಸಮತಲ ಬಯಲು ಪ್ರದೇಶ	ಇಳಿಜಾರು ಕೃಷಿ ಪ್ರದೇಶ	ಗುಡ್ಡದ ತುದಿ ಪ್ರದೇಶ
2. ಮಣ್ಣಿನ ಸ್ವಭಾವ	ಹೊಯಿಗೆ ಮಿಶ್ರಿತ ಕೆಂಪು ಕಪ್ಪು ಮಣ್ಣು	ಕೆಂಪು ಮಣ್ಣು	ಕೆಂಪು ಮುರಕಲ್ಲು, ಅಲ್ಲಲ್ಲಿ ಮಣ್ಣು
3. ಸಸ್ಯಜಾಲ	ಭತ್ತ, ಅಡಿಕೆ, ಬಾಳೆ, ತೆಂಗು, ಕರಿಮೆಣಸು	ಗೇರು, ತೆಂಗು, ಕರಿಮೆಣಸು	ಅಲ್ಲಲ್ಲಿ ಗೇರು, ತೆಂಗು
4. ಪರಿಸರ ಸಮಸ್ಯೆಗಳು	ಒಂದು ತೋಡು ಹರಿಯುತ್ತಿರುವುದು. ಮಳೆಗಾಲದಲ್ಲಿ ನೀರು ಇಂಗದಿರುವುಜು ಮತ್ತು ಬೇಸಿಗೆಯಲ್ಲಿ ನೀರಿನ ತೀವ್ರ ಕೊರತೆ. ಅಡಿಕೆಗೆ ಕೊಳೆರೋಗ, ಭತ್ತದ ಕಾಂಡ ಕೊರೆಯುವಿಕೆ, ಬೆಂಕಿ ರೋಗ.	ಮಣ್ಣು ಕೊರೆಯುವುದು. ನೀರಿನ ತೀವ್ರ ಕೊರತೆ. ಗೇರು ಮರಗಳ ಕಾಂಡ ಕೊರೆಯುವ ಕೀಟಗಳ ಬಾಧೆ.	ಮಣ್ಣಿನ ಕೊರತೆ ನೀರಿನ ತೀವ್ರ ಅಭಾವ.

ಕೃಷಿಯೂ ನೀರಾವರಿಯೂ

ಕೃಷಿ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ದುಡಿಯುವ ಅನೇಕ ಕುಟುಂಬಗಳು ಕಂಬಡಾಜೆ ಗ್ರಾಮ ಪಂಚಾತಿನಲ್ಲಿವೆ. ಇಲ್ಲಿನ ಜನರ ಪ್ರಧಾನ ಆದಾಯ ಮಾರ್ಗವು ಇಂದಿಗೂ ಕೃಷಿಯೇ ಆಗಿದೆ. ಕೃಷಿ ಕ್ಷೇತ್ರದಲ್ಲಿ ದುಡಿಯುವ ಕುಟುಂಬಗಳ ಸಂಖ್ಯೆ ಪ್ರತಿವರ್ಷವೂ ಏರುತ್ತಾ ಬಂದಿದೆ. 1981ರಲ್ಲಿ 1657 ಕೃಷಿ ಕುಟುಂಬಗಳಿದ್ದುದು 1995 ಆಗುವಾಗ ಆ ಕುಟುಂಬಗಳ ಸಂಖ್ಯೆ 1756ಕ್ಕೆ ಏರಿದೆ. ನಮ್ಮ ಪಂಚಾಯತಿನ ಒಟ್ಟು ವಿಸ್ತೀರ್ಣ 7684 ಎಕ್ರೆ ಆಗಿದೆ. ಇದರಲ್ಲಿ 3271 ಎಕ್ರೆ ಸ್ಥಳವು ಒಣ ಭೂಮಿಯಾಗಿದೆಯೆಂದು ಸಮೀಕ್ಷೆಯು ತಿಳಿಸುತ್ತದೆ. ಇದು ಒಟ್ಟು ವಿಸ್ತೀರ್ಣದ 43% ಆಗಿದೆ. ಇದರಲ್ಲಿ 2201 ಎಕ್ರೆ ಕೃಷಿಯೋಗ್ಯವಾದ ಬರಡು ಭೂಮಿಯಾಗಿದೆ ಎಂಬುದು ಸತ್ಯಸಂಗತಿಯಾಗಿದೆ.

ಒಟ್ಟು 2709 ಕೃಷಿ ಕುಟುಂಬಗಳಲ್ಲಿ 1920 ಕುಟುಂಬಗಳು ಎರಡು ಎಕ್ರೆಗಿಂತ ಕಡಿಮೆ ಭೂಮಾಲಕತ್ವವನ್ನು ಹೊಂದಿದವುಗಳು. ಎರಡು ಎಕ್ರೆಗಿಂತಲೂ ಹೆಚ್ಚು ಕೃಷಿ ಭೂಮಿ ಇರುವವರ ಸಂಖ್ಯೆ 889. ಎರಡರಿಂದ ಐದು ಎಕ್ರೆಯ ವರೆಗೆ ಕೃಷಿ ಭೂಮಿ ಇರುವವರು ಸಾಧಾರಣ 735. ಇದಲ್ಲದೆ ಅನೇಕ ಜಮೀನ್ದಾರರೂ ನಮ್ಮ ಪಂಚಾಯತಿನಲ್ಲಿದ್ದಾರೆ.

ಅಡಿಕೆ, ಭತ್ತ, ತೆಂಗು ಹಾಗೂ ಗೇರುಬೀಜ ಇಲ್ಲಿನ ಪ್ರಧಾನ ಬೆಳೆಗಳಾಗಿವೆ. ಬಾಳೆಯ ಕೃಷಿಯು ಇಲ್ಲಿನ ಮಿಶ್ರ ಬೆಳೆಯಲ್ಲಿ ಮುಂಚೂಣಿಯಲ್ಲಿದೆ. ತರಕಾರಿ ಗಡ್ಡೆ ಗೆಣಸುಗಳ ಕೃಷಿ ಇಲ್ಲಿ ವಿರಳ. ಅಡಿಕೆ ಕೃಷಿಯು ಇಲ್ಲಿ ಪ್ರಗತಿ ಹೊಂದುತ್ತಿರುವ ಪ್ರಧಾನ ಬೆಳೆಯಾಗಿದೆ.

ಕೇರಳದಲ್ಲಿರುವ ಹವಾಮಾನಕ್ಕಿಂತ ಸ್ವಲ್ಪ ವ್ಯತ್ಯಸ್ತ ರೀತಿಯ ಹವಾಮಾನ ಇಲ್ಲಿದೆ. ಪ್ರತಿವರ್ಷ ಸರಾಸರಿ 126 ದಿನಗಳಲ್ಲಿ ಇಲ್ಲಿ ಮಳೆ ಬೀಳುತ್ತದೆ. ಇಲ್ಲಿನ ಸರಾಸರಿ ಮಳೆ 325ಸೆ.ಮೀ. 1990ರಲ್ಲಿ ಇಲ್ಲಿ 372cm ಮಳೆ ಬಿದ್ದಿತ್ತು. 1987ರಲ್ಲಿ ಕೇವಲ 96 ದಿವಸ ಮಾತ್ರ ಮಳೆ ಬಿದ್ದಿತು. ಇದೇ ವರ್ಷ ಜನವರಿಯಿಂದ ಎಪ್ರಿಲ್‌ವರೆಗೆ ಮಳೆ ಲಭಿಸಿಯೇ ಇಲ್ಲ. ಮೇ ತಿಂಗಳಲ್ಲಿ ಇಲ್ಲಿ ಅತಿಯಾದ ಉಷ್ಣದ ಅನುಭವವಾಗಿದೆ. ಅತಿ ಕಡಿಮೆ ಉಷ್ಣದ ಅನುಭವವಾಗುವುದು ಜನವರಿಯಲ್ಲಿ ಮಾತ್ರ.

ಒಂದು ಹೊಳೆಯೂ 20 ತೋಡುಗಳೂ ಅನೇಕ ಕೊಳಗಳೂ ಈ ಗ್ರಾಮದ ನೀರಿನ ಆಶ್ರಯವಾಗಿವೆ. ತೋಡುಗಳ ಒಟ್ಟು ಉದ್ದ 37.75kmವರೆಗ ಬರುವುದು. ಸರಾಸರಿ 6ಮೀ. ಅಗಲದ ತೋಡುಗಳೂ ಇವೆ. 6ಕಿ.ಮೀ ಉದ್ದವಿರುವ ಗೋಸಾಡ-ನೇರಪ್ಪಾಡಿ ತೋಡು ಅತೀ ಉದ್ದವಾದ ತೋಡಾಗಿದೆ. ಪಂಚಾಯತಿನ ಹೆಚ್ಚಿನ ಭೂಭಾಗಗಳಲ್ಲೂ ಪ್ರಕೃತಿದತ್ತವಾದ ಈ ರೀತಿಯ ತೋಡುಗಳಿವೆ.

ಅನೇಕ Cross Bar ಬಾರ್‌ಗಳೂ ಕಿರು ಅಣೆಕಟ್ಟುಗಳೂ ಪಂಚಾಯತ್ತಿನಲ್ಲಿದ್ದರೂ ಅಗಲ್ಪಾಡಿಯ ಕಿರು ಅಣೆಕಟ್ಟು ಮಾತ್ರ ಪಂಚಾಯತಿನಿಂದ ಸಂರಕ್ಷಿಸಲ್ಪಡುತ್ತದೆ. ಈಗ ಇರುವ ಕ್ರೋಸ್‌ಬಾರ್‌ಗಳಾವುವೂ ಪೂರ್ಣವಾಗಿ ಉಪಯೋಗಿಸುವಂತೆ ಇಲ್ಲ.

ಸಹಕಾರಿ ಸಂಘದ ಆಶ್ರಯದಲ್ಲಿ ಒಂದೇ ಒಂದು ರಾಸಾಯನಿಕ ಗೊಬ್ಬರ ಡಿಪೊ ಮಾತ್ರ ನಮ್ಮ ಪಂಚಾಯತಿನಲ್ಲಿರುವ ಕಾರಣ ಬೇರೆ ಪಂಚಾಯತಿನ ಡಿಪೊಗಳನ್ನು ಇಲ್ಲಿನ ಕೃಷಿಕರು ಆಶ್ರಯಿಸಬೇಕಾಗುತ್ತದೆ. ಸಾವಯವ ಗೊಬ್ಬರ ತಯಾರಿ ಮತ್ತು ಉಪಯೋಗದಲ್ಲಿ ಇಲ್ಲಿನ ಕೃಷಿಕರು ನಿಪುಣರಾಗಿರುತ್ತಾರೆ. ಸಾವಯವ ಗೊಬ್ಬರದ ಉಪಯೋಗ ಇಲ್ಲಿನ ಕೃಷಿಕರು ಮಾಡುತ್ತಿರುವುದು ಸ್ತುತ್ಯರ್ಹವಾಗಿದೆ.

ಕುಂಬ್ಡಾಜೆ ಸರ್ವೀಸ್ ಸಹಕಾರಿ ಬೇಂಕ್ ಮೌವಾರು, ನೋರ್ತ್ ಮಲಬಾರ್ ಗ್ರಾಮೀಣ ಬೇಂಕು ಜಯನಗರ, ಕಾಸರಗೋಡು ಪ್ರಾಥಮಿಕ ಸಹಕಾರೀ ಕಾರ್ಷಿಕ ಗ್ರಾಮೀಣ ಬೇಂಕು, ಮುಳ್ಳೇರಿಯಾ, ಸಿಂಡಿಕೇಟ್ ಬೇಂಕ್, ಬದಿಯಡ್ಕ,ವಿಜಯಾ ಬೇಂಕ್, ಬದಿಯಡ್ಕ, ಜಿಲ್ಲಾ ಬ್ಯಾಂಕ್ ಕಾಸರಗೋಡು ಎಂಬಿವುಗಳು ಈ ಪಂಚಾಯತಿನ ಕೃಷಿಕರಿಗೆ ಸಾಲ ಕೊಡುವ ಪ್ರಧಾನ ಸಂಸ್ಥೆಗಳಾಗಿವೆ.

ನಮ್ಮ ಕೃಷಿಕರು ಕೃಷಿ ಕ್ಷೇತ್ರದಲ್ಲಿ ನವೀನ ಮಾದರಿಯನ್ನು ಅಳವಡಿಸಿಕೊಂಡು ಕೃಷಿ ಮಾಡುತ್ತಿದ್ದಾರೆ. ಯಾಂತ್ರೀಕರಣ ಮತ್ತು ಶಾಸ್ತ್ರೀಯ ಕೃಷಿ ಪ್ರಜ್ಞೆಯೂ ಬೆಳೆದು ಬರುತ್ತಿದೆ. ಕೃಷಿ ಅಭಿವೃದ್ಧಿ ಸಮಿತಿ, ತೆಂಗು ಅಭಿವೃದ್ಧಿ ಸಮಿತಿ, ಕರಿಮೆಣಸು ಅಭಿವೃದ್ಧಿ ಸಮಿತಿ ಎಂಬಿವುಗಳು ಇಲ್ಲಿ ಕಾರ್ಯಪ್ರವರ್ತವಾಗಿವೆ. 85% ಕೃಷಿಕರು ಕೃಷಿ ಭವನದಿಂದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಲೆಕ್ಕಾಚಾರದಿಂದ ತಿಳಿದು ಬಂದಿದೆ.

ಬಹಳ ನಿಧಾನಗತಿಯಲ್ಲಿ ಮಾತ್ರವೇ ತೆಂಗು ಕೃಷಿ ಅಭಿವೃದ್ಧಿಯನ್ನು ಪಡೆಯುತ್ತಿರುವುದು. ಅತ್ಯುತ್ಪಾದನೆ ಸಾಮರ್ಥ್ಯವಿರುವ ಪ್ರತ್ಯೇಕ ರೀತಿಯ ಬೀಜಗಳೊಂದು ಉಪಯೋಗಿಸಲಾಗುವುದಿಲ್ಲ. ತೆಂಗು ಮಾತ್ರವಿರುವ ತೋಟಗಳು ತುಂಬಾ ಕಡಿಮೆ.

ಭತ್ತ ಕೃಷಿ ಮಾಡುವ ಸ್ಥಳದ ವಿಸ್ತೀರ್ಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತದೆ. ಒಂದನೇ ಬೆಳೆ (ಪಣಿಲು) 189 ಹೆಕ್ಟೇರ್ ಸ್ಥಳದಲ್ಲಿ ಎರಡನೇ ಬೆಳೆ (ಸುಗ್ಗಿ)100 ಹೆಕ್ಟೇರ್‌ನಲ್ಲೂ ಕೃಷಿ ಮಾಡಲಾಗುತ್ತದೆ. ಮೂರನೇ ಬೆಳೆ ಬೆಳೆಸುವುದು ತುಂಬಾ ಕಡಿಮೆ ಶತಮಾನ. ಒಟ್ಟು 433.5MT ಭತ್ತ ಉತ್ಪಾದಿಸಲಾಗುತ್ತದೆ.

ಸಾಕಷ್ಟು ನೀರಿನ ಸೌಲಭ್ಯ ಇಲ್ಲದಿರುವುದು ಕೂಲಿಯಾಳುಗಳ ಕೊರತೆಯಿರುವುದೂ ಈ ಕ್ಷೇತ್ರದ ದೊಡ್ಡ ಸಮಸ್ಯೆಯಾಗಿದೆ. ಉತ್ಪಾದನೆಯ ಸಾಮರ್ಥ್ಯ ತೀರಾ ಕಡಿಮೆ.

1024 ಹೆಕ್ಟಾರ್ ಸ್ಥಳದಲ್ಲಿ ಅಡಿಕೆ ಕೃಷಿ ಮಾಡಲಾಗುತ್ತದೆ. ಊರತಳಿ, ಮಂಗಳ, ಮೋಹಿತ್ ನಗರ್, ರತ್ನಗಿರಿ ಎಂಬಿವು ವಿವಿಧ ತಳಿಗಳಾಗಿವೆ. ಪ್ರಧಾನವಾಗಿ ಉತ್ತಮ ರೀತಿಯಲ್ಲಿ ಕೃಷಿ ಮಾಡಲ್ಪಡುವುದು ಅಡಿಕೆ ಕೃಷಿಯಾಗಿದೆ. 1980 ಟನ್ ಅಡಿಕೆ ಇಲ್ಲಿ ಕೃಷಿ ಮಾಡಲ್ಪಡುತ್ತದೆ. ಉತ್ಪಾದನಾ ಸಾಮರ್ಥ್ಯ 1933kg/Hc ಆಗಿದೆ.

ಅಭಿವೃದ್ಧಿಯ ಕಡೆಗೆ ಸಾಗುತ್ತಿರುವ ಕೃಷಿಗಳಲ್ಲಿ ಗೇರು ಕೃಷಿ ಒಂದಾಗಿದೆ. ಒಣ ಗುಡ್ಡೆ ಪ್ರದೇಶಗಳಲ್ಲಿ ಶಾಸ್ತ್ರೀಯ ರೀತಿಯಲ್ಲಿ ಈ ಕೃಷಿ ಮಾಡುವ ವಿಧಾನ ಈಗತಾನೇ ಆರಂಭಗೊಂಡಿದೆ.

ಕರಿಮೆಣಸಿನ ಕೃಷಿ ಈ ಪಂಚಾಯತಿನಲ್ಲಿ ಇನ್ನೂ ವ್ಯಾಪಕವಾಗಿಲ್ಲ. ಉತ್ಪಾದನೆ ಸಾಮರ್ಥ್ಯವು ಕಡಿಮೆ.

ತರಕಾರಿ, ಹುರುಳಿ, ಎಳ್ಳು, ಕೆಸು, ಸುವರ್ಣಗಡ್ಡೆ, ಗೆಣಸು, ಮರಗೆಣಸು ಎಂಬಿವುಗಳು ಬಹಳ ವಿರಳವಾಗಿ ಕೆಲವೆಡೆಗಳಲ್ಲಿ ಮಾತ್ರ ಕೃಷಿಮಾಡಲಾಗುತ್ತದೆ.

ಕೃಷಿಕೂಲಿಯಾಳುಗಳ ಲಭ್ಯತೆಯಲ್ಲಿ ಕುಂಠಿತವಾಗಿದ್ದರೂ ಕೂಲಿಯಲ್ಲಿ ಅನುಪಾತಿಕವಾದ ವರ್ಧನೆಯಾಗಲಿಲ್ಲ.

ಏತಡ್ಕ ನೀರಿನ ಶೆಡ್

ದೇಶೀಯ ನೀರಾವರಿ ಅಭಿವೃದ್ಧಿ ಪದ್ಧತಿಯ ಭಾಗವಾಗಿ ಕುಂಬಡಾಜೆ, ಎಣ್ಮಕಜೆ, ಬೆಳ್ಳೂರು ಪಂಚಾಯತ್‌ಗಳ ಕೆಲವು ಸ್ಥಳಗಳನ್ನು ಆಳವಡಿಸಿಕೊಂಡು ಏತಡ್ಕ ನೀರಾವರಿ ಪದ್ಧತಿಗೆ ರೂಪುರೇಶೆಗಳನ್ನಿತ್ತಿರುವುದು. ಪದ್ಧತಿಯ ಸಿಂಹಪಾಲು ಕುಂಬ್ಡಾಜೆ ಪಂಚಾಯತಿನಲ್ಲಾಗಿರುವುದು. 788 ಹೆಕ್ಟಾರ್ ಸ್ಥಳ ಇದಕ್ಕಾಗಿ ಮೀಸಲಾಗಿಡಲಾಗಿದೆ. ಇದರಲ್ಲಿ 730 ಹೆಕ್ಟಾರ್ ಸ್ಥಳ ಕೃಷಿಯೋಗ್ಯವಾಗಿದ್ದು 418 ಕುಟುಂಬಗಳಿಗೆ ಈ ಪದ್ಧತಿಯ ಪ್ರಯೋಜನ ಲಭ್ಯವಾಗಲಿದೆ. ಈ ಕುಟುಂಬಗಳಲ್ಲಿ 206ಮಂದಿ ಸಣ್ಣ ಪ್ರಮಾಣದ ಕೃಷಿಕರಿದ್ದಾರೆ. ಒಂದು ಹೆಕ್ಟಾರಿಗೆ ರೂ. 5000/-ದಂತೆ ರೂ. 37.9 ಲಕ್ಷ ಈ ಪದ್ಧತಿಗೆ ವಿನಿಯೋಗಿಸಲಾಗುವುದು.

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ವಿಪುಲೀಕರಣ, ಉಪಯೋಗ ಎಂಬಿವುಗಳೊಂದಿಗೆ ಉದ್ಯೋಗ ಸಾಧ್ಯತೆಯನ್ನು ಹೆಚ್ಚಿಸುವುದು, ಉತ್ಪಾದನಾ ಪರಿಸ್ಥಿತಿಯನ್ನು ಮೇಲ್ಮಟ್ಟಕ್ಕೆ ತರುವುದು, ಪರಿಸರ ಸಂತುಲನೆಯನ್ನು ಪುನಃ ಸ್ಥಾಪಿಸುವುದು ಈ ಪದ್ಧತಿಯ ಪ್ರಧಾನ ಧ್ಯೇಯಗಳಾಗಿವೆ.

ಈ ಪದ್ಧತಿಯ ಅಂಗವಾಗಿ ಕಿಸಾನ್ ಮೇಳಗಳೂ, ಮಣ್ಣು, ಜಲ ಸಂರಕ್ಷಣೆಯ ಸೆಮಿನಾರುಗಳನ್ನು ನಡೆಸಲಾಗಿದೆ. ಗಿಡಗಳಿಗಾಗಿ ನರ್ಸರಿಗಳ ಸ್ಥಾಪನೆ, ಕೃಷಿಕರಿಗೆ ವಿವಿಧ ರೀತಿಯ ತರಬೇತಿಯು ನಡೆಸಲಾಗಿದೆ. 30-6-1996 ವರೆಗೆ ರೂ. 8.13 ಲಕ್ಷ ಇದಕ್ಕಾಗಿ ಖರ್ಚು ಮಾಡಲಾಗಿದೆ. ಇದು ಒಟ್ಟು ಪೊತ್ತದ 21.45% ಆಗಬಹುದು. ನರ್ಸರಿಗಳ ಸ್ಥಾಪನೆಗೆ ರೂ. 90400, ಕೃಷಿ ತರಬೇತಿಗಾಗಿ ರೂ. 31425. ಮಣ್ಣು ಸಂರಕ್ಷಣೆಯ ಕಾರ್ಯಕ್ಕಾಗಿ ಪೂ. 5,36,715 ಸಾಕುಪ್ರಾಣಿಗಳ ವಿತರಣೆಗೆ ರೂ. 73425 ಖರ್ಚು ಮಾಡಲಾಗಿದೆ.

ಜಿಲ್ಲೆಯ ಉಳಿದ 3 ನೀರಾವರಿ ಪದ್ಧತಿಗಳೊಂದಿಗೆ ಹೋಲಿಸಿದಾಗ ಗಾತ್ರದಲ್ಲಿ ಮೂರನೇ ಸ್ಥಾನವೇ ಏತಡ್ಕ ನೀರಾವರಿ ಪದ್ಧತಿಗಿರುವುದು. ಹೀಗಿದ್ದರೂ ಪದ್ಧತಿಯ ಪೊತ್ತ ವಿನಿಯೋಗದಲ್ಲಿ ನಮಗೆ ಎರಡನೇ ಸ್ಥಾನವಿದೆ.

ಜಲ ಸಂರಕ್ಷಣೆ ಮತ್ತು ಮಣ್ಣು ಸಂರಕ್ಷಣೆಯ ಬಗ್ಗೆ ಜನರಿಗೆ ಸಾಮಾನ್ಯ ತಿಳುವಳಿಕೆ ಉಂಟುಮಾಡಲು ಸಾಧ್ಯವಾಗಿದೆ ಎಂಬುದು ಈ ಪದ್ಧತಿಯ ಕೊಡುಗೆಯಾಗಿದೆ.

'ಕೃಷಿ ಅಭಿವೃದ್ಧಿಯು 'ಜಲ ಸಂಭರಣೆ'ಯ ಮೂಲಕ ಎಂಬ ಆಶಯಕ್ಕೆ ಹೆಚ್ಚಿನ ಪ್ರಚಾರ ಬೇಕಾಗಿದೆ.

ಸಮಸ್ಯೆಗಳು

1. ಭತ್ತದ ಕೃಷಿಯು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. 10 ವರ್ಷಗಳಲ್ಲಿ ಭತ್ತದ ಬೆಳೆಯು ಇಲ್ಲದಾಗಲೂ ಸಾಧ್ಯತೆಯಿದೆ.

2. ಭತ್ತದ ಕೃಷಿಗೆ ಕೊಡುತ್ತಿರುವ ಸೆಂಟಿಗೆ 1 ರೂ ದರದ ಬೋನಸ್ ಪ್ರೋತ್ಸಾಹಕರವಲ್ಲ.

3. ಮೂರನೇ ಬೆಳೆಗಿರುವ ನೀರು ಪಂಚಾಯತ್‌ನ ಎಲ್ಲಾ ಪ್ರದೇಶದಲ್ಲೂ ಕಡಿಮೆ.

4. ಬೇಸಗೆಯಲ್ಲಿ ಬತ್ತಿಹೋಗದ ತೋಡುಗಳು ಬಹಳ ಕಡಿಮೆ.

5. ಸಮೀಪದ ಕಾಡುಗಳಿಂದ ಇಳಿದು ಬಂದ ಕಾಡು ಹಂದಿಗಳು ಭತ್ತದ ಬೆಳೆಯನ್ನು ವ್ಯಾಪಕವಾಗಿ ನಾಶಮಾಡುತ್ತವೆ.

6. ಕೆಲವು ಬಯಲು ಸೀಮೆ ಸಮಿತಿಗಳ ಕೆಲಸ ಕಾರ್ಯಗಳು ತೃಪ್ತಿಕರವಲ್ಲ. ಉಪ್ಪಂಗಳ, ಬೆಳಿಂಜ, ಗೋಸಾಡ, ಪುತ್ರಕಳ, ಪಾತೇರಿ, ಕುಂಬಡಾಜೆ, ತಲೆಬೈಲು ಎಂಬೀ ಸ್ಥಳಗಳಲ್ಲಿ ಬಯಲು ಸೀಮೆ ಸಮಿತಿಗಳಿವೆ.

7. ನೀರಾವರಿಯ ಅಸೌಕರ್ಯದಿಂದ ಕಂಗು ಕೃಷಿ ವಿಸ್ತರಿಸಲು ಸಾಧ್ಯವಾಗಿಲ್ಲ.

8. ಕೃಷಿ ಉಪಯೋಗಕ್ಕೆ ಯಂತ್ರದ (ಪಂಪು) ಬಳಕೆಗೆ ಸೀಮೆ ಎಣ್ಣೆ, ಡೀಸೆಲ್, ವಿದ್ಯುತ್ ಸೌಕರ್ಯಗಳು ಸಾಕಷ್ಟು ದೊರೆಯುವುದಿಲ್ಲ.

9. ಕೃಷಿರಂಗದಲ್ಲಿ ಕೆಲಸಮಾಡುವ ಹೆಣ್ಣಾಳುಗಳ ಸಂಖ್ಯೆ ಕಡಿಮೆ.

10. ಶಾಸ್ತ್ರೀಯ ರೀತಿಯಲ್ಲಿ ಮಣ್ಣು ಪರಿಶೋಧನೆ ನಡೆಯುವುದಿಲ್ಲ.

11. ತರಕಾರಿ, ಹಸಿರುವಾಣಿ ಕೃಷಿ ಕಡಿಮೆಯಾಗುತ್ತದೆ.

12. ಶಾಸ್ತ್ರೀಯವಾಗಿ ತೆಂಗು ಕೃಷಿ ನಡೆಯುವುದಿಲ್ಲ.

13. ಅತ್ಯುತ್ಪಾದನಾ ಸಾಮರ್ಥ್ಯವಿರುವ ಬೀಜಗಳು ಉಪಯೋಗಿಸಲ್ಪಡುತ್ತಿಲ್ಲ.

14. ಮಧ್ಯವರ್ತಿಗಳ ಶೋಷಣೆಯಿಂದಾಗಿ ಕೃಷಿಕರಿಗೆ ಉತ್ಪಾದನೆಯ ಸರಿಯಾದ ಬೆಲೆ ದೊರಕುವುದಿಲ್ಲ.

15. ಸಾಕಷ್ಟು ಶ್ರದ್ಧೆಯಿಂದ ಗೇರು ಕೃಷಿಯನ್ನು ಮಾಡುವುದಿಲ್ಲ.

16. ವಿದ್ಯುತ್ತನ್ನು ಕಾಣದ ಪ್ರದೇಶಗಳು ಇನ್ನೂ ಇವೆ.

17. ಆರ್ಥಿಕ ಸಂಸ್ಥೆಗಳು ಸಾಕಷ್ಟು ಇಲ್ಲದಿರುವುದರಿಂದ ಬೇಕಾದ ಸಾಲ ದೊರಕುವುದಿಲ್ಲ.

18. ಕೃಷಿರಂಗದ ಆಧುನಿಕತೆಯನ್ನು ಕೃಷಿಕನಿಗೆ ತಲುಪಿಸಲು ಕೃಷಿಭವನಕ್ಕೂ CPCRIಯಂತಹ ಸಂಸ್ಥೆಗಳಿಗೆ ಸಾಧ್ಯವಾಗುವುದಿಲ್ಲ.

19. ಹೆಚ್ಚಿನ ಮಳೆಯ ಲಭ್ಯತೆಯಿದ್ದಾಗಲೂ ಅದನ್ನು ಕೃಷಿಯಾವಶ್ಯಕತೆಗಳಿಗೆ ಉಪಯೋಗಿಸಲು ಸಾಧ್ಯವಾಗುವುದಿಲ್ಲ.

20. ಗದ್ದೆಗಳನ್ನು ಒಣ ಭೂಮಿಯನ್ನಾಗಿ ಬಿಡುವ ಪ್ರವೃತ್ತಿ

ಅಧಿಕವಾಗಿ ಕಂಡುಬರುತ್ತದೆ. ಉತ್ಪಾದನಾ ವೆಚ್ಚದ ಹೆಚ್ಚಳ, ಕೂಲಿಯವರು ಸಿಗದೇ ಇರುವ, ಕಾರಣ ಹಾಗೆ ಸಂಭವಿಸುತ್ತದೆ.

ಸಾಧ್ಯತೆಗಳು

1. ಪಾಳುಬಿದ್ದಿರುವ 2201 ಎಕ್ರೆ ಕೃಷಿ ಯೋಗ್ಯವಾಗಿದೆ. ಈ ಸ್ಥಳವನ್ನು ಯೋಗ್ಯ ಬೆಳೆಗಳಿಗಾಗಿ ಉಪಯೋಗಿಸಬೇಕು.

2. ಬಯಲು ಸೀಮೆ ಸಮಿತಿ ಅಧಿಕ ಸಜೀವವಾಗಿ ಕಾರ್ಯವೆಸಗಿ ಗ್ರೂಪ್ ಫಾರ್ಮಿಂಗ್ ಸಂಪ್ರದಾಯವನ್ನು ಶಕ್ತಿಪಡಿಸಬೇಕು.

3. 20 ತೋಡುಗಳು ಒಂದು ಹೊಳೆಯು ಇದ್ದರೂ ಅದರ ಪರಮಾವಧಿ ಪ್ರಯೋಜನ ಪಡೆಯಲು ಪದ್ಧತಿಗಳನ್ನು ರೂಪೀಕರಿಸಬೇಕು.

4. ಮಳೆ ನೀರು ಸಂಗ್ರಹಿಸಲು ಶಾಸ್ತ್ರೀಯ ರೀತಿಯನ್ನು ಪ್ರಚಾರ ಪಡಿಸಬೇಕು.

5. ವಿದ್ಯುತ್ತನ್ನು ಸಾರ್ವಜನಿಕವಾಗಿಸಬೇಕು.

6. ಯಂತ್ರಗಳು, ಮೋಟಾರುಗಳು, ರಾಸಾಯನಿಕ ಗೊಬ್ಬರಗಳು ಮುಂತಾದವುಗಳು ಕಡಿಮೆ ದರದಲ್ಲಿ ಎಲ್ಲರಿಗೂ ದೊರಕುವಂತೆ ಮಾಡಬೇಕು.

7. ತೋಡುಗಳ, ಹೊಳೆಯ ಹೂಳನ್ನೆತ್ತಿ ಇಬ್ಬದಿಗಳನ್ನು ಕಟ್ಟಿ ರಕ್ಷಿಸಬೇಕು.

8. ಕಂಗು, ತೆಂಗು, ಕರಿಮೆಣಸು, ಗೇರು, ರಬ್ಬರ್‌ಗಳಿಗೆ ನರ್ಸರಿಗಳನ್ನು ಸ್ಥಾಪಿಸಬೇಕು.

9. ಬರಡಾಗಿರುವಂತಹ ಗುಡ್ಡೆ ಪ್ರದೇಶದಲ್ಲಿ ರಬ್ಬರ್ ಕೃಷಿಯ ಸಾಧ್ಯತೆಯನ್ನು ಪರಿಶೋಧಿಸಬೇಕು.

10. ಕೃಷಿಯಾವಶ್ಯಕತೆಗಳಿಗೆ ಕೊಳಗಳನ್ನೂ ಬಾವಿಗಳನ್ನೂ ಅಧಿಕ ಸಂಖ್ಯೆಯಲ್ಲಿ ನಿರ್ಮಿಸಬೇಕು.

11. ಕೃಷಿಯಾವಶ್ಯಕತೆಗಳಿಗಿರುವ ವಿದ್ಯುತ್, ಡೀಸೆಲ್, ಸೀಮೆಎಣ್ಣೆ ಎಂಬಿವುಗಳು ಕಡಿಮೆ ದರದಲ್ಲಿ ಲಭ್ಯವಾಗುವಂತೆ ಮಾಡಬೇಕು.

12. ಪಂಚಾಯತ್ತಿನಲ್ಲಿ ವಿವಿಧ ಜಲಾಶಯ ಹೊಂಡಗಳನ್ನು ಮಾಡಿ ಅಭಿವೃದ್ಧಿ ಪದ್ಧತಿಗಳನ್ನು ತಯಾರಿಸಬೇಕು.

13. ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು.

14. ಶಾಸ್ತ್ರೀಯ ಮಣ್ಣು ಪರಿಶೋಧನೆಗೆ ಸಂವಿಧಾನವೇರ್ಪಡಿಸಬೇಕು.

15. ಭತ್ತದ ಬೆಳೆಯ ಸಂರಕ್ಷಣೆಗೆ ಅಧಿಕ ಪದ್ಧತಿಯನ್ನು ಅಳವಡಿಸಬೇಕು.

16. ಬೆಳೆ ಇನ್‌ಶ್ಯೂರೆನ್ಸ್ ಪದ್ಧತಿಯ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡಬೇಕು.

17. ಪ್ರಕೃತಿ ವಿಕೋಪದಿಂದುಂಟಾದ ಬೆಳೆನಾಶಕ್ಕೆ ಸಂಪೂರ್ಣ ನಷ್ಟ ಪರಿಹಾರ ತಕ್ಕ ಸಮಯಕ್ಕೆ ನೀಡಬೇಕು.

18. ವನ್ಯ ಮೃಗಗಳಿಂದ ಬೆಳೆಯನ್ನು ರಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಕೋವಿಗೆ ಲೈಸೆನ್ಸ್ ಕೊಡಬೇಕು.

19. ತರಕಾರಿ, ಬಾಳೆ, ಅನನಾಸು, ಗೆಣಸು, ಕೆಸು, ಸುವರ್ಣಗಡ್ಡೆ, ಮರಗೆಣಸು, ಶುಂಠಿ, ಅರಸಿನ, ಎಳ್ಳು, ಹುರುಳಿ, ಉದ್ದು ಮುಂತಾದುವುಗಳ ಕೃಷಿ ಪುನಃ ಮಾಡಲು ಸಮಯೋಚಿತ ಕಾರ್ಯಕ್ರಮಗಳ ಯೋಜನೆ ತಯಾರಿಸಬೇಕು.

20. ಅಣಬೆ, ಮಲ್‌ಬರಿ, ಓರ್ಕಿಡ್ಸ್, ಮಲ್ಲಿಗೆ, ಸೂರ್ಯಕಾಂತಿ, ಜಾಜಿ ಮುಂತಾದ ಕೃಷಿಗೆ ಪ್ರೋತ್ಸಾಹ ನೀಡಬೇಕು.

21. ಸಾಲ ಸೌಕರ್ಯಗಳ ಸವಲತ್ತನ್ನು ಹೆಚ್ಚಿಸಬೇಕು.

22. ಗುಡ್ಡೆ ಪ್ರದೇಶಗಳ ಮಣ್ಣು ಕೊಚ್ಚಿ ಹೋಗುವುದನ್ನು ತುರ್ತಾಗಿ ಪರಿಹರಿಸಬೇಕು.

23. ಸಸ್ಯಗಳನ್ನೂ ಬೀಜಗಳನ್ನೂ ಕೃಷಿ ಭವನದ ಮೂಲಕ ಸಮಯೋಚಿತವಾಗಿ ವಿತರಣೆ ಮಾಡಬೇಕು.

24. ಔಷಧ ಸಸ್ಯಗಳ ಕೃಷಿ ಆರಂಭಿಸಲು ಬೇಕಾದ ಮಾರ್ಗನಿರ್ದೇಶನಗಳನ್ನು ನೀಡಬೇಕು.

25. ಕೃಷಿಕರಿಗೆ ತಮ್ಮ ಉತ್ಪನ್ನಗಳನ್ನು ನ್ಯಾಯಬೆಲೆಗೆ ಮಾರಲು ವಾರದ ಸಂತೆಗಳನ್ನು ಏರ್ಪಡಿಸಬೇಕು.

26. ಅಗತ್ಯವಿರುವ ಸ್ಥಳಗಳಲ್ಲಿ ಕ್ರಾಸ್‌ಬಾರ್‌ಗಳನ್ನು ನಿರ್ಮಿಸಬೇಕು.

ಭೂಮಿ ಸಂಬಂಧಿಸಿದ ವಿವರ

ವಿಭಾಗ	ವಿಸ್ತೀರ್ಣ (ಎಕ್ರೆ)	%
ನೆಲ	1432.62	
ಹಿತ್ತಲು	2794.27	
ಪೊರಂಬೋಕ್	186.73	
ಕೃಷಿಯೋಗ್ಯವಾದ ಒಣಭೂಮಿ	2210.12	
ಕೃಷಿಯೋಗ್ಯವಲ್ಲದ ಒಣಭೂಮಿ	1070.10	
ಜುಮ್ಮಾ	7684.84	

ಭೂಮಿ ಸಂಬಂಧಿಸಿದ ವಿವರ

ವಿಭಾಗ	ಉಬ್ರಂಗಳ	ಕುಂಬಡಾಜೆ	ಮೊತ್ತ
ನೆಲ	191.13	1241.49	1432.62
ಹಿತ್ತಲು	535.97	2258.30	2794.27
ಪೊರಂಬೋಕ್	23.65	163.08	186.73
ಒಣಭೂಮಿ	432.75	2838.47	3271.22
ಮೊತ್ತ	1183.50	6501.34	7684.84

ಭೂಹಿಡುವಳಿದಾರರ ಸಂಖ್ಯೆ

	ಕುಂಬಡಾಜೆ	ಉಬ್ರಂಗಳ	ಮೊತ್ತ
1-10 ಸೆಂಟ್	28	12	40
10-25 ಸೆಂಟ್	84	28	112
25-50 ಸೆಂಟ್	257	64	321
50-100 ಸೆಂಟ್	510	108	618
1-2 ಎಕ್ರೆ	614	115	729
2-5 ಎಕ್ರೆ	655	80	735
5 ಎಕ್ರೆಗಿಂತ ಹೆಚ್ಚು	110	44	154
ಮೊತ್ತ	2258	451	2709

ಬೆಳೆ - ವಿಸ್ತೀರ್ಣ ಮತ್ತು ಉತ್ಪಾದನೆಗಳು

	ಬೆಳೆ	ವಿಸ್ತೀರ್ಣ	ಮೊತ್ತ ಉತ್ಪಾದನೆ	ಉತ್ಪಾದನಾ ಸಾಮರ್ಥ್ಯ
1.	ಭತ್ತ- ಒಂದನೇ ಬೆಳೆ	189Hc	283.5MT	1500kg Hc
2.	ಭತ್ತ-ಎರಡನೇ ಬೆಳೆ	100 Hc	150 MT	1500kgHc
3.	ಭತ್ತ - ಮೂರನೇ ಬೆಳೆ			
4.	ತೆಂಗು	116 Hc	401360 Nos	3460NosHc
5.	ಅಡಿಕೆ	1024Hc	1980 T	1933kg
6.	ಗೇರು	480 Hc	33.07MT	689 kg
7.	ಬಾಳೆ	10 Hc	200 T	2000 kg
8.	ಕರಿಮೆಣಸು	40 Hc	11200kg	280kgHc
9.	ತರಕಾರಿ	6 Hc	10.8 T	1800kg
10.	ಹೆಸರು	5 Hc	4T	800 kg
11.	ಮಾವು	2185Nos	53T	24.25kg/Tree
12.	ಹಲಸು	6324	290.9 T	460kg/Tree
13.	ಮರಗೆಣಸು	2 Hc	25 T	12000kg/Hc
14.	ರಬ್ಬರ್	1000Nos		
15.	ಕೊಕ್ಕೊ	7Hc	1085 kg	155kg/kc
16.	ಗೆಣಸು	7.5 Hc	7.125 T	950 kg/Hc

ಹಂಚಿಕೊಂಡ ಭೂಮಿ

ವಿಲ್ಲೇಜ್	ನೆಲ	ಹಿತ್ತಲು	ಒಣಭೂಮಿ	ಮೊತ್ತ
ಕುಂಬಡಾಜೆ	-	-	214.38	214.38
ಉಬ್ರಂಗಳ	-	-	21.96	21.96
ಮೊತ್ತ	-	-	236.34	236.34

ಕಿರು ತೋಡುಗಳು

ನಂಬ್ರ	ತೋಡಿನ ಹೆಸರು	ಉದ್ದ	ಸರಾಸರಿ ಅಗಲ
1.	ಗೋಸಾಡ- ನೇರಪ್ಪಾಡಿ	6 km	8m
2.	ಬಾಳಗದ್ದೆ - ಕೂಡಾಲು	3 km	8m
3.	ಪೈಕ - ಬಲೆಕ್ಕಳ	1.5 km	6m
4.	ಬೇಂದ್ರೋಡು - ಬಲೆಕ್ಕಳ	1 km	6m
5.	ಬಲೆಕ್ಕಳ - ಮುಕ್ಕೂರು	1.5 km	8m
6.	ತಲೆಬೈಲ್ - ಮುಕ್ಕೂರು	2 km	6m
7.	ಮವ್ವಾರು - ಒಡಂಬಲ	1 km	6m
8.	ಕಡಂಬು - ಬೆರೋಣಿ	1 km	6m
9.	ಕಜೆ - ಬಟ್ಟಡ್ಕ	1.5 km	6m
10.	ಬೆಳಿಂಜ - ಬಟ್ಟಡ್ಕ	1 .5 km	5m
11.	ಬೆಳಿಂಜ - ಮಲ್ಲಾರ	1.5 km	6m
12.	ಮಲ್ಲಮೂಲೆ - ಗೋಸಾಡ	1.5 km	6m
13.	ಕುಂಬಡಾಜೆ - ಅನ್ನಡ್ಕ	1.5 km	6m
14.	ಉಪ್ಪಂಗಳ - ಅನ್ನಡ್ಕ	2 km	6m
15.	ಕೋಡಿಮೂಲೆ - ಉಪ್ಪಂಗಳ	1.5 km	6m
16.	ತಲೇಕ - ಉಪ್ಪಂಗಳ	1.5 km	6m
17.	ಸಜಂಕೇರಿ - ಕಂಡೆತ್ತೋಡಿ	1 km	6m
18.	ಪಳ್ಳತ್ತಡ್ಕ - ಏತಡ್ಕ	250 m	6m
19.	ಪಳ್ಳತ್ತಡ್ಕ - ತಂಬು	2 km	6m
20.	ಕೊರೆಕ್ಕಾನ - ಉಬ್ರಂಗಳ	5 km	8m
	ಮೊತ್ತ	37.75 km	

ಕೃಷಿ ಅಭಿವೃದ್ಧಿ ಸಾಲಗಳು

ಬೇಂಕ್	93-94	94-95	95-96
ಕುಬಡಾಚೆ ಸರ್ವೀಸ್ ಕೊ-ಓಪರೇಟಿವ್ ಬೇಂಕ್	3019154	3528169	1586428
ನೋರ್ತ್ ಮಲಬಾರ್ ಗ್ರಾಮೀಣ ಬೇಂಕ್	655700	3151400	4569100

ಸಂರಕ್ಷಿತ ವೃಕ್ಷಗಳು

ವಿಲ್ಲೇಜ್	ಮರಗಳ ಸಂಖ್ಯೆ						ಮೊತ್ತ
	ಬೀಟಿ	ಜಾತಿ		ಮಾವು		ಶ್ರೀಗಂಧ	
ಕುಂಬಡಾಚೆ	118	268	-	-	-	87	457
ಉಬ್ರಂಗಳ	12	23	-	-	-	22	57
ಮೊತ್ತ	130	291	-	-		109	514

ನೆಟ್ಟು ಬೆಳೆಸುವ ವಸ್ತುಗಳ ವಿತರಣೆ

ವಿಭಾಗ	ಸಂಖ್ಯೆ		
	1993-94	1994-95	1995-96
ತೆಂಗು	225	300	500
ಗೇರು ಬೀಜ	2760	1780	2400
ಕರಿಮೆಣಸು	9000	100	5000
ಅಡಿಕೆ	-	-	250
ಕೊಕ್ಕೊ	350	-	-
ಕಸಿಮಾವು	125	-	-
ಹಣ್ಣುಹಂಪಲುಗಳ ಕಿಟ್	23	-	-
ತರಕಾರಿ ಕಿಟ್	710	-	-
ಇತರ	320	150	-

ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು (ರೂಪಾಯಿ)

ವಿಭಾಗ	1991-92	1992-93	1993-94	1994-95	1995-96
ರಾಸಾಯನಿಕಗೊಬ್ಬರ	192546/69	190216/75	248929/27	247264/74	278132/79
ಕೀಟನಾಶಕ	123087/10	109782/25	121749/00	359202/62	139289/11
ಮೊತ್ತ	315633.79	299999	370678.27	606467.36	417413.90

ತೆಂಗು ಕೃಷಿ ಸಂಬಂಧಿಸಿದ ವಿವರಗಳು

ವಾರ್ಡು	ವಿಸ್ತೀರ್ಣ	ತೆಂಗಿನ ಸಂಖ್ಯೆ			ರೋಗ ಬಾಧಿತ ತೆಂಗುಗಳು			
		ಕಾಯಿ ಇಲ್ಲದ	ಕಾಯಿ ಇರುವ	ಮೊತ್ತ	ಬಡ್‌ರೋಟ್	ಸ್ಟೆಮ್ ಬ್ಲೀಡಿಂಗ್	ಇತರ	ಮೊತ್ತ
I	21Hc	1203	2430	3633		26		26
II	10.5 Hc	607	1209	1816		18		18
III	18Hc	1024	2090	3114		34		34
IV	11Hc	261	1642	1903		27		27
V	9 Hc	536	1021	1557		63		63
VI	12Hc	620	1456	2076		37		37
VII	18.5 Hc	800	2400	3200		26		26
VIII	16Hc	634	2134	2768		31		31

ಬರಗಾಲ ಕ್ಷೇತ್ರಕ್ಕೆ ವಿತರಣೆ

ವರ್ಷ	ವಿಭಾಗ	ಸಹಾಯ ಸಿಕ್ಕಿದವರ ಸಂಖ್ಯೆ	ರೂಪಾಯಿ
1993-94	ಬಿರುಗಾಳಿ	36	1,26,620/-
1994-95	ಬಿರುಗಾಳಿ	123	91780 /-
1995-96	ಬಿರುಗಾಳಿ	284	100396

27% of actual loss

ಏತಡ್ಕ ಜಲಾಶಯ ಪದ್ಧತಿ ಪೆಚ್ಚ:-

ನರ್ಸರಿಗಳ ಸ್ಥಾಪನೆ	ರೂ. 90400
ಕೃಷಿಕರಿಗೆ ಪರಿಶೀಲನೆ	31425
ಮಣ್ಣು ಸಂರಕ್ಷಣೆ	536715
ಸಾಕು ಮೃಗ ವಿತರಣೆ	73425

Source K.B. Kumbdaje

ಏತಡ್ಕ ವಾಟರ್-ಶೆಟ್ ಪ್ರೋಗ್ರಾಂ -ವಿವರಗಳು

ಸಂಖ್ಯೆ	ವಿವರ	ವಿಷದೀಕರಣ
1	ಕಾರ್ಯಕ್ಷೇತ್ರ	788 ಹೆಕ್ಟರ್
2	ಪ್ರೋಜೆಕ್ಟ್ ಪ್ರದೇಶ	758
3	ಕೃಷಿ ಭೂಮಿ	730
4	ಪದ್ಧತಿ ಅಡಂಗಲೆ	37.90
5	ಕುಟುಂಬಗಳ ಸಂಖ್ಯೆ	418
6	ಸಣ್ಣ ರೈತರು	206
7	ಭೂರಹಿತ ಕಾರ್ಮಿಕರು	47
8	30-6-96ರ ತನಕ ಖರ್ಚು	8.13
9	ಬಾಕಿ	29.77
10	ಖರ್ಚು ಮಾಡಿದ ಹಣದ ಶತಮಾನ	21.45%

WEATHER CALENDER - 1990

ಹವಾಮಾನ ಕ್ಯಾಲಂಡರ್ - 1990.

MONTH	TEMPERATURE	R.H%	TOTAL R.F.	No.of Rainy Days
JANUARY	32.2 17.3	86 50	0	-
FEBRUARY	32.0 17.6	90 51	0	-
MARCH	32.1 19.5	88 59	2.2	1
APRIL	32.8 22.1	84 59	0	-
MAY	31.5 21.5	89 73	676.8	15
JUNE	30.2 20.3	92 81	1011.4	28
JULY	28.9 19.6	93 84	812.6	29
AUGUST	28.0 19.4	95 85	836.6	29
SEPTEMBER	29.8 19.5	94 75	159.2	8
OCTOBER	31.1 19.6	94 71	197.2	13
NOVEMBER	32.1 18.7	90 61	24.0	3
DECEMBER	33.5 16.6	83 49	0	-

Source : KB Kumbdaje

ಪಶು ಸಂಗೋಪನೆ ಮತ್ತು ಮೀನುಗಾರಿಕೆ

ಪಂಚಾಯತಿನ 32% ಜನರು ಮಾತ್ರ ದನಗಳನ್ನು ಸಾಕುವವರಾಗಿದ್ದಾರೆ. ಇವುಗಳಲ್ಲಿ ಉತ್ಪಾದನಾ ಕ್ಷಮತೆ ಹೆಚ್ಚಿರುವ ದನಗಳ ಸಂಖ್ಯೆ ತುಂಬಾ ಕಡಿಮೆ. ವೈಜ್ಞಾನಿಕವಾದ ಪಶು ಸಂಗೋಪನೆಗೆ ನಮ್ಮ ಪಂಚಾಯತಿನಲ್ಲಿ ಸರಿಯಾದ ಪ್ರಚಾರ ಸಿಕ್ಕಿಲ್ಲ. ದನಗಳನ್ನು ಹಟ್ಟಿಯಿಂದ ಬಿಚ್ಚಿ ಬಿಡುವುದಲ್ಲದೆ ಯಾವುದೇ ರೀತಿಯ ಇತರ ಪಶುಪಾಲನಾ ಕ್ರಮಗಳು ಬಳಕೆಯಲ್ಲಿಲ್ಲ. ಕೃತಕ ಗರ್ಭದಾನ ಕೇಂದ್ರ ಪಂಚಾಯತಿನಲ್ಲಿ ಇಲ್ಲ. ಪಂಚಾಯತಿನ ಏಕೈಕ ಮೃಗಾಸ್ಪತ್ರೆಯಲ್ಲಿ ಇದಕ್ಕಿರುವ ಸೌಕರ್ಯಗಳಿಲ್ಲ. ವೈಜ್ಞಾನಿಕ ರೀತಿಯಲ್ಲಿ ಪಶುಪಾಲನೆಯಲ್ಲಿ ಪರಿಣತಿಯನ್ನು ಹೊಂದಿರುವವರು ಈ ಪಂಚಾಯತಿನಲ್ಲಿ ಇಲ್ಲ. ಒಟ್ಟು 7677 ಸಾಕುಪ್ರಾಣಿಗಳು ಇವೆ. ಇವುಗಳಲ್ಲಿ 1462 ಹಾಲುಕೊಡುವ ದನಗಳಾಗಿವೆ. ಇವುಗಳ ಸರಾಸರಿ ಹಾಲುತ್ಪಾದನೆ ಲೀಟರ್ ಮಾತ್ರವಾಗಿದೆ.

ಜಾನುವಾರುಗಳಿಗೆ ಸರಿಯಾದ ರೀತಿಯಲ್ಲಿ ಆಹಾರವನ್ನು ನೀಡುವುದರಲ್ಲಿ ಜನರು ಶ್ರದ್ಧೆ ವಹಿಸುವುದಿಲ್ಲ. ಪಶು ಆಹಾರದ ಬೆಲೆ ತೀರಾ ಕಡಿಮೆ. ಜಾನುವಾರುಗಳಿಗೆ ನೀಡುವ ಮುಖ್ಯ ಆಹಾರ ಹುಲ್ಲಾಗಿದೆ.

ಹಟ್ಟಿಗಳಲ್ಲಿ ಹೆಚ್ಚಿನವುಗಳೂ ಕೂಡಾ ಅನಾರೋಗ್ಯಕರ ಪರಿಸರವನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗುತ್ತವೆ. ಈ ಪರಿಸರ ಜಾನುವಾರುಗಳಲ್ಲಿ ಹಲವು ರೀತಿಯ ರೋಗಗಳನ್ನು ಸೃಷ್ಟಿಸುತ್ತದೆ.

ಪಂಚಾಯತಿನಲ್ಲಿ ಸಾಧಾರಣ 5000ದಷ್ಟು ಕೋಳಿಗಳಿವೆ. ಇವುಗಳಲ್ಲಿ ಮಿಶ್ರತಳಿಯ ಕೋಳಿಗಳಿಲ್ಲ. ನಾಡಕೋಳಿಗಳನ್ನಾದರೂ ಶ್ರದ್ಧೆಯಿಂದ ಪರಿಪಾಲಿಸುವುದಿಲ್ಲ. ಕೋಳಿ ಸಾಕಣೆಯನ್ನು ಒಂದು ಉದ್ಯೋಗವನ್ನಾಗಿ ಸ್ವೀಕರಿಸಿದವರು ಇಲ್ಲಿ ಕಂಡುಬರುವುದಿಲ್ಲ. ಪಂಚಾಯತಿನ ಪ್ರತಿವರ್ಷದ ಮೊಟ್ಟೆ ಉತ್ಪಾದನೆ 30,627 ಮಾತ್ರವಾಗಿದೆ. ಕೋಳಿ ಮಾಂಸ ಹಾಗೂ ಮೊಟ್ಟೆಯ ಆವಶ್ಯಕತೆಗಾಗಿ ಇತರ ಪಂಚಾಯತುಗಳನ್ನು ಆಶ್ರಯಿಸಬೇಕಾಗಿದೆ. ಪಶು ಆಹಾರದಂತೆ ಕೋಳಿ ಆಹಾರದ ಪ್ರಚಾರವೂ ಕಡಿಮೆಯಾಗಿದೆ. ಕೋಳಿ ಗೊಬ್ಬರವನ್ನು ಶೇಖರಿಸಿ ಉಪಯೋಗಿಸುವಲ್ಲೂ ಜನರು ಶ್ರದ್ಧೆ ವಹಿಸುವುದಿಲ್ಲ. ವೈಜ್ಞಾನಿಕವಾದ ರೀತಿಯಲ್ಲಿ ಕೋಳಿಸಾಕಣೆಯಲ್ಲಿ ತರಬೇತಿಯನ್ನು ಪಡೆದವರು ಇಲ್ಲ.

ಹಾಲುತ್ಪಾದನಾ ಸಹಕಾರ ಸಂಘಗಳು ಅಥವಾ ಹಾಲು ವಿತರಣಾ ಕೇಂದ್ರಗಳು ಈ ಪಂಚಾಯತಿನಲ್ಲಿ ಇಲ್ಲ.

ಪಂಚಾಯತಿಗೆ ಒಟ್ಟಿನಲ್ಲಿ ಒಂದು ಮೃಗಾಸ್ಪತ್ರೆ ಮಾತ್ರ ಇರುತ್ತದೆ. ಈ ಆಸ್ಪತ್ರೆಯ ಸೇವೆ ಪಂಚಾಯತಿನ ಎಲ್ಲಾ ಭಾಗಗಳಿಗೆ ತಲಪುವುದಿಲ್ಲ. ಕೃತಕ ಬೀಜದಾನ ನಡೆಸಲು ಆಸ್ಪತ್ರೆಯಲ್ಲಿ ಸೌಕರ್ಯವಿಲ್ಲದುದು ಪಂಚಾಯತಿನ ಪಶುಸಂಗೋಪನಾ ವಲಯವನ್ನು ಬಾಧಿಸಿದೆ.

ಮೀನುಗಾರಿಕೆಯನ್ನು ಒಂದು ಉದ್ಯೋಗವನ್ನಾಗಿ ಸ್ವೀಕರಿಸಿದ ಒಂದೇ ಒಂದು ಕುಟುಂಬವೂ ಈ ಪಂಚಾಯತಿನಲ್ಲಿ ಇಲ್ಲ. ವೈಜ್ಞಾನಿಕ ರೀತಿಯ ಮೀನುಗಾರಿಕೆ ನಮ್ಮ ಪಂಚಾಯತಿನಲ್ಲಿ ಇನ್ನೂ ವ್ಯಾಪಿಸಿಲ್ಲ.

ಪಂಚಾಯತಿನ ವ್ಯಾಪ್ತಿಗೊಳಪಟ್ಟ ಕೆರೆ ಹಾಗೂ ಬಾವಿಗಳಲ್ಲಿ ವೈಜ್ಞಾನಿಕ ರೀತಿಯ ಮೀನುಗಾರಿಕೆಗೆ ಸಾಧ್ಯತೆಯಿದೆ.

ಸಮಸ್ಯೆಗಳು

1. ಹಾಲುತ್ಪಾದನಾ ರಂಗದ ಉದ್ಯೋಗ ಸಾಧ್ಯತೆಗಳ ಕುರಿತು ಜನರಲ್ಲಿ ಇನ್ನೂ ತಿಳುವಳಿಕೆ ಮೂಡಿಲ್ಲ.
2. ಉತ್ಪಾದನಾ ಕ್ಷಮತೆ ಹೆಚ್ಚಿರುವ ದನ ಹಾಗೂ ಎಮ್ಮೆಗಳ ಕುರಿತು ಜನರಿಗೆ ತಿಳಿದಿಲ್ಲ.
3. ಉಳುವ ಎತ್ತುಗಳ ಬಳಕೆ ಕಡಿಮೆಯಾಗುತ್ತದೆ.
4. ಆಧುನಿಕ ರೀತಿಯ ಹಟ್ಟಿಗಳ ಬಳಕೆ ಜನರಿಗೆ ತಿಳಿದಿಲ್ಲ.
5. ಹಟ್ಟಿಯನ್ನೇ ಕಂಪೋಸ್ಟ್ ಗೊಬ್ಬರದ ಹೊಂಡಗಳನ್ನಾಗಿ ಉಪಯೋಗಿಸುವುದು ಅನಾರೋಗ್ಯಕರ ಪರಿಸರವನ್ನು ಸೃಷ್ಟಿಸುತ್ತದೆ.
6. ವೈಜ್ಞಾನಿಕ ರೀತಿಯ ಜಾನುವಾರು ಸಾಕಣೆ, ಕೋಳಿ ಸಾಕಣೆ, ಮೀನುಗಾರಿಕೆ, ಜೇನು ಸಾಕಣೆ, ಮೊಲ ಸಾಕಣೆ ಎಂಬಿವುಗಳಲ್ಲಿ ತರಬೇತಿ ಪಡೆದವರು ತೀರಾ ಇಲ್ಲ.
7. ಕೈಗಾರಿಕಾ ತಳಹದಿಯಲ್ಲಿನ ಕೋಳಿಸಾಕಣಾ ಕೆಂದ್ರಗಳು ಪಂಚಾಯತಿನಲ್ಲಿ ಇಲ್ಲ.
8. ಅಲೆಮಾರಿ ನಾಯಿಗಳ ಪರಿಹಾರಕ್ಕಾಗಿ ಫಲಪ್ರದವಾಗಿ ಕ್ರಮಗಳನ್ನು ಹೆಚ್ಚಿಸಬೇಕಾಗಿದೆ.
9. ಸಾಕುಪ್ರಾಣಿಗಳಿಗಿರುವ ಚುಚ್ಚುಮದ್ದಿನ ಕುರಿತು ಪ್ರಚಾರ ತುಂಬಾ ಕಡಿಮೆ.
10. ಪ್ರಾಣಿಗಳಿಗೆ ಬಾಧಿಸುವ ರೋಗಗಳಿಗೆ ಫಲಪ್ರದವಾದ ಚಿಕಿತ್ಸೆಯನ್ನು ನೀಡಲು ಸೌಕರ್ಯವಿಲ್ಲ.
11. ಜಾನುವಾರು ವಿಮೆಗೆ ಪ್ರಾಧಾನ್ಯತೆ ನೀಡುವುದಿಲ್ಲ.
12. ಸರಳವಾದ ಸಾಲ ಸೌಲಭ್ಯಗಳು ಈ ರಂಗದಲ್ಲಿ ಲಭಿಸುವುದಿಲ್ಲ.
13. ಅಲೆಮಾರಿ ದನಗಳು ಬೆಳೆನಾಶಕ್ಕೆ ಕಾರಣೀಭೂತವಾಗುತ್ತವೆ.
14. ಹುಲ್ಲಿನ ಲಭ್ಯತೆ ಕಡಿಮೆಯಾಗಿಕೊಂಡು ಬರುತ್ತಿದೆ.

ಸಾಧ್ಯತೆಗಳು

1. ವಾರ್ಡುಮಟ್ಟದಲ್ಲಿ ಪಶುಸಂಗೋಪನಾ ಕೇಂದ್ರಗಳನ್ನು ತೆರೆದು ಆಯ್ಕೆ ಮಾಡಿದ ಜನರಿಗೆ ದೀರ್ಘಕಾಲ ತರಬೇತಿ ನೀಡಬೇಕು.
2. ಉತ್ಪಾದನಾ ಕ್ಷಮತೆ ಹೆಚ್ಚಿರುವ ಜಾನುವಾರುಗಳನ್ನು ಪರಿಪಾಲಿಸಲಿರುವ ತರಬೇತಿ ಹಾಗೂ ಸಾಲ ಸೌಲಭ್ಯ ಜನರಿಗೆ ಒದಗಿಸಿಕೊಡಬೇಕು.
3. ಆಯ್ಕೆ ಮಾಡಲಾದ 10 ಜನರಿಗೆ ವಾರ್ಡು ಮಟ್ಟದಲ್ಲಿ ಕೋಳಿ ಸಾಕಣೆಯ ವಿಷಯದಲ್ಲಿ ತರಬೇತಿ ನೀಡಬೇಕು.
4. ಜಾನುವಾರು ಸಾಕಣೆಯಲ್ಲಿ ಹಲವು ಕುಟುಂಬಗಳ ಗುಂಪುಗಳನ್ನಾಗಿ ಮಾಡಿ ಗುಂಪು ಸಾಕಣೆ ಹಾಗೂ ಗುಂಪು ವಿತರಣೆಗೆ ವ್ಯವಸ್ಥೆ ಮಾಡಬೇಕು.
5. ಸಹಕಾರಿ ಕೋಳಿ ಸಾಕಣಾ ಕೇಂದ್ರಗಳ ಸಾಧ್ಯತೆಯನ್ನು

ಪರಿಗಣಿಸಬೇಕು.

6. ಕೃತಕ ಬೀಜದಾನ ಕೆಂದ್ರದ ಸೌಲಭ್ಯ ಒದಗಿಸಿಕೊಡಬೇಕು.

7. ಪ್ರಸ್ತುತವಿರುವ ಹುಲ್ಲಿನ ಕೃಷಿಯನ್ನು ವ್ಯಾಪ್ತಿಗೊಳಿಸಬೇಕು.

8. ಆಡಾಸಾಕಣೆಗೆ ಪಂಚಾಯತಿನಲ್ಲಿ ಸಾಧ್ಯತೆಯಿದೆ. ಈ ರಂಗದ ಉದ್ಯೋಗ ಸಾಧ್ಯತೆಯ ಕುರಿತು ಒಂದು ಭೋದನಾ ಶಿಬಿರ ಜರಗಬೇಕು.

9. ಹಾಲುತ್ಪಾದನಾ ಸಹಕಾರ ಸಂಘಗಳ ಸ್ಥಾಪನೆಯಾಗಬೇಕು.

10. ಹುಚ್ಚುನಾಯಿ ಬಾಧೆಯನ್ನು ನಿರ್ಮೂಲನಗೊಳಿಸಲು ಸಮಯೋಚಿತವಾದ ಕ್ರಮಗಳನ್ನು ಕೈಗೊಳ್ಳಬೇಕು.

11. ವಿವಿಧ ಏಜನ್ಸಿಗಳಿಂದ ಪಶುಸಂಗೋಪನೆಗಾಗಿ ಸಾಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

12. ಬಯೋಗ್ಯಾಸ್, ಗೋಬರ್‌ಗ್ಯೋಸ್ ಎಂಬಿವುಗಳ ಪ್ರಾಯೋಗಿಕತೆ ಹಾಗೂ ಪ್ರಯೋಜನಗಳ ಕುರಿತಾಗಿ ಜನರಿಗೆ ತಿಳುವಳಿಕೆ ನೀಡಬೇಕು.

13. ಕೆರೆಗಳಲ್ಲಿ ಮೀನಿನಕೃಷಿ ನಡೆಸಲು ಬೇಕಾದ ಪ್ರೋತ್ಸಾಹ ನೀಡಬೇಕು.

ಸಾಕು ಪ್ರಾಣಿಗಳು - ಪಕ್ಷಿಗಳು

ವಿವರ	ಸಂಖ್ಯೆ
ಜಾನುವಾರುಗಳು	1462
ಕೋಣಗಳು	198
ಇತರ	6017
ಒಟ್ಟು	7677
ಕೋಳಿ	5000 (ಅಂದಾಜು)

ಹುಚ್ಚು ನಾಯಿ ಪ್ರತಿರೋಧ ಚಿಕಿತ್ಸೆ

ವಿವರ	ದನ	ಎಮ್ಮೆ	ಆಡು	ನಾಯಿ	ಬೆಕ್ಕು	ಇತರ
ಪ್ರತಿರೋಧ ಚಿಕಿತ್ಸೆ ನೀಡಿದವರ ವಿವರ	-	-	-	18	-	-
ಕಚ್ಚಿದ ನಂತರದ ಚುಚ್ಚುಮದ್ದು.	-	-	-		-	-

ಜಾನುವಾರುಗಳ ರೋಗ ವಿವರ

ಕ್ರಮ ನಂಬ್ರ	ರೋಗಗಳು	ದನ	ಎಮ್ಮೆ	ಆಡು	ನಾಯಿ	ಕೋಳಿ	ಬಾತು ಕೋಳಿ	ಹಂದಿ	ಇತರ
1.	ಅಜೀರ್ಣ ಸಂಬಂಧವಾದ ರೋಗಗಳು	6	2	1	2	8	-	-	-
2.	ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆ	4	2	2	2	3	-	-	-
3.		2	1	-	-	-	-	-	-
4.		4	2	-	2	-	-	-	-
5.	ಧಾತು ಲವಣಗಳ ಕೊರತೆ	2	2	-	1	1	-	-	-
6.		3	3	2	1	4	-	-	-
7.	ಪ್ರತ್ಯುತ್ಪಾದನಾ ವ್ಯವಸ್ಥೆಗೆ ಸಂಬಂಧಿಸಿದ್ದು	1	1	-	-	-	-	-	-
8.		1	1	-	-	-	-	-	-
9.	ಕೆಚ್ಚಲು ಬಾವು	2	2	-	-	-	-	-	-
10.	ಜ್ವರ	1	-	-	-	-	-	-	-
11.	ಹರಡುವ ರೋಗಗಳು	-	-	-	-	-	-	-	-

ವಿದ್ಯಾಭ್ಯಾಸ

ಕೆಲವು ಕುಟುಂಬಗಳ ಮತ್ತು ದೇವಸ್ಥಾನಗಳ ಆಶ್ರಯದಲ್ಲಿ ಆರಂಭಕಾಲದಲ್ಲಿ ವಿದ್ಯಾಭ್ಯಾಸವು ಈ ಪಂಚಾಯತಿನಲ್ಲಿ ನಡೆಯುತ್ತಿತ್ತು. ಪರವೂರಿನ ಕೆಲವು ವಿದ್ವಾಂಸರು ಅಗಲ್ಪಾಡಿ, ಉಬ್ರಂಗಳ, ಆಲಿಂಜ ಮುಂತಾದ ಊರಿನ ಪ್ರಧಾನ ದೇವಸ್ಥಾನಗಳಲ್ಲಿ ಸಂಸ್ಕೃತ ಭಾಷೆಯನ್ನು ಕಲಿಸುತ್ತಿದ್ದರು. ಸರಿಸುಮಾರು ನೂರುವರ್ಷಗಳ ಹಿಂದೆ ಕರುವಲ್ತಡ್ಕ ಎಂಬಲ್ಲಿ ಪ್ರಸ್ತುತ ಜಿ.ಜೆ.ಬಿ.ಎಸ್. ಕುಂಬಡಾಜೆ ಎಂಬ ಶಾಲೆಯು ಈ ಪಂಚಾಯತಿನ ಅತ್ಯಂತ ಹಳೆಯ ವಿದ್ಯಾಭ್ಯಾಸ ಸಂಸ್ಥೆಯಾಗಿದೆ. ಬದಿಯಡ್ಕ ಮತ್ತು ಕುಂಬಡಾಜೆ ಪಂಚಾಯತುಗಳಲ್ಲಿನ ಪ್ರಮುಖ ವ್ಯಕ್ತಿಗಳು ಈ ಶಾಲೆಯ ವಿದ್ಯಾರ್ಥಿಗಳಾಗಿದ್ದರು. ಕನ್ನಡದ ಹಿರಿಯ ಕವಿಗಳಲ್ಲೊಬ್ಬರಾದ ಶ್ರೀಯುತ ಕಯ್ಯಾರ ಕಿಞ್ಞಣ್ಣರೈಯವರು ಇದೇ ಶಾಲೆಯ ವಿದ್ಯಾರ್ಥಿಯಾಗಿದ್ದು, ಆ ಮೇಲೆ ಸ್ಥಾಪನೆಯಾದ ಶ್ರೀ ಅನ್ನಪೂರ್ಣೇಶ್ವರೀ ಶಾಲೆಯ ಹಳೆವಿದ್ಯಾರ್ಥಿ ಎಂಬುದು ಹೆಮ್ಮೆಯ ವಿಚಾರ.

ಈ ಪಂಚಾಯತಿನ ಇತರ ಶಾಲೆಗಳಲ್ಲಿ ಮುವ್ವಾರಿನ ಎ.ಯು.ಪಿ.ಶಾಲೆ, ಅಗಲ್ಪಾಡಿಯ ಶ್ರೀ ಅನ್ನಪೂರ್ಣೇಶ್ವರೀ ಹೈಸ್ಕೂಲು, ಅಗಲ್ಪಾಡಿಯ ಅನ್ನಪೂರ್ಣೇಶ್ವರಿ ಎಲ್.ಪಿ.ಶಾಲೆ, ಎ.ಎಲ್.ಪಿ. ಶಾಲೆ ಬೆಳಿಂಜ, ಎಸ್.ಎಸ್.ಎ.ಎಚ್.ಪಿ.ಶಾಲೆ ಮರಿಕ್ಕಾನ ಮತ್ತು ವಿ.ವಿಎ.ಎಲ್.ಪಿ.ಶಾಲೆ ಕೀರಿಕ್ಕಾಡು ಸೇರುತ್ತವೆ.

ಸ್ತ್ರೀಯರ ಮತ್ತು ಸಮಾಜದ ಕೆಲವು ಕೆಳವರ್ಗಗಳ ವಿದ್ಯಾಭ್ಯಾಸಕ್ಕೆ ಹಿಂದಿನ ಕಾಲದಲ್ಲಿ ಯಾವುದೇ ರೀತಿಯ ಪ್ರಾಧಾನ್ಯತೆಯನ್ನು ನೀಡಿರಲಿಲ್ಲವೆಂಬುದು ಸ್ಪಷ್ಟ. ಪ್ರಸ್ತುತ ಪರಿಸ್ಥಿಯು ಅತೀ ಹೆಚ್ಚು ಬದಲಾವಣೆಗೊಳಪಟ್ಟಿದ್ದು ವಿದ್ಯಾಭ್ಯಾಸದ ಮಹತ್ವವನ್ನು ಎಲ್ಲರೂ ತಿಳಿದಿರುತ್ತಾರೆ.

ಜನಪರ ಶಿಕ್ಷಣವು ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕಾರ್ಯರೂಪಕ್ಕೆ ಬರಲು ಆರಂಭವಾಯಿತು. ಇಂದಿಗೂ ನಮ್ಮ ಪಂಚಾಯತಿನಲ್ಲಿ ಮುಸ್ಲಿಂ ಸಮುದಾಯದ ವಿದ್ಯಾಭ್ಯಾಸದ ಶೇಕಡಾವಾರು ಅತೀ ಕನಿಷ್ಟ ಪ್ರಮಾಣದ್ದಾಗಿದೆ. ಅದರಲ್ಲೂ ಪ್ರತ್ಯೇಕವಾಗಿ ಮುಸ್ಲಿಂ ಹೆಣ್ಣು ಮಕ್ಕಳ ಬಗ್ಗೆ ಹೆತ್ತವರು ಇಂದಿಗೂ ಪ್ರತ್ಯೇಕ ಗಮನಹರಿಸಿರುವುದು ಕಂಡುಬರುವುದಿಲ್ಲ.

ಪ್ರಾಥಮಿಕ ಹಂತದಲ್ಲಿರುವಂತೆ ಜನರು ಎರಡನೆಯ ಮತ್ತು ಉನ್ನತ ವಿದ್ಯಾಭ್ಯಾಸಕ್ಕೆ ಆಸಕ್ತಿಯಿಂದ ಪ್ರೋತ್ಸಾಹ ನೀಡುತ್ತಿಲ್ಲ ಎಂಬುದು ಇಲ್ಲಿನ ಕಟುಸತ್ಯವಾಗಿದೆ. ಕೆಲವು ಕುಟುಂಬಗಳಲ್ಲಿ ಕಾಲೇಜು ಶಿಕ್ಷಣವನ್ನು ಪಡೆದ ಜನರಿದ್ದರೂ ಯಶಸ್ವಿಯಾಗಿ ಕೋರ್ಸುಗಳನ್ನು ಪೂರ್ತಿಗೊಳಿಸಿದವರ ಸಂಖ್ಯೆ ಅತೀ ಕಡಿಮೆ. ಕೆಲವರು ಉನ್ನತ ವಿದ್ಯಾಭ್ಯಾಸವನ್ನು ಗಳಿಸುವುದರ ಮೂಲಕ ಪಂಚಾಯತಿನ ಕೀರ್ತಿಯನ್ನು ಹರಡುವುದರಲ್ಲಿ ಭಾಗಿಗಳಾಗಿದ್ದಾರೆ.

ನಮ್ಮ ಪಂಚಾಯತಿನಲ್ಲಿ ಒಂದು ಹೈಸ್ಕೂಲು, ಎರಡು ಯು.ಪಿ. ಶಾಲೆಗಳು ಮತ್ತು ಐದು ಎಲ್.ಪಿ.ಶಾಲೆಗಳಿದ್ದು, ಹೈಸ್ಕೂಲಿನಲ್ಲಿ 213 ವಿದ್ಯಾರ್ಥಿಗಳೂ, 198 ವಿದ್ಯಾರ್ಥಿನಿಯರೂ ಮತ್ತು ಎಲ್.ಪಿ. ಶಾಲೆಗಳಲ್ಲಿ ಒಟ್ಟು 623 ವಿದ್ಯಾರ್ಥಿಗಳೂ, 545 ವಿದ್ಯಾರ್ಥಿನಿಯರೂ ಕಲಿಯುತ್ತಿದ್ದಾರೆ. ಒಟ್ಟು 367 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಲ್ಲಿ 197 ಹುಡುಗರೂ, 170 ಹುಡುಗಿಯರೂ ವಿದ್ಯಾಭ್ಯಾಸ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಬಹುತೇಕ ಮಂದಿ ಕೃಷಿಕರ, ಬೀಡಿಕಾರ್ಮಿಕರ, ಕೂಲಿಯಾಳುಗಳ ಮಕ್ಕಳಾಗಿದ್ದಾರೆ. ಆದುದರಿಂದ ಅರ್ಧದಲ್ಲೇ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ.

ಈ ವರ್ಷ 65 ಮಕ್ಕಳು ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿರುತ್ತಾರೆ. ಅವರಲ್ಲಿ ಒಂದನೇ ತರಗತಿಯ 4 ಮಕ್ಕಳೂ ಸೇರಿ 20 ಮಕ್ಕಳು ಎಲ್.ಪಿ.ವಿಭಾಗಕ್ಕೆ ಸೇರಿದವರು ಎಂಬುದು ಕಟುವಾಸ್ತವ. ಪ್ರಸ್ತುತ ಶಾಲೆಗಳಲ್ಲಿ ನೀಡಲಾಗುವ ಮಧ್ಯಾಹ್ನದ ಗಂಜಿಊಟವು 60% ಮಕ್ಕಳಿಗೆ ಮಾತ್ರವೇ ಲಭಿಸುತ್ತದೆ. 1801 ವಿದ್ಯಾರ್ಥಿಗಳಲ್ಲಿ 1073 ವಿದ್ಯಾರ್ಥಿಗಳು ಮಾತ್ರ ಈ ಸೌಲಭ್ಯವನ್ನು ಪಡೆದವರು. ಅಗಲ್ಪಾಡಿ ಯಲ್.ಪಿ. ಶಾಲೆಯ ವಿದ್ಯಾರ್ಥಿಗಳಿಗೆ ಕಳೆದ ಅನೇಕ ವರ್ಷಗಳಿಂದ ನಿರಂತರವಾಗಿ ಮಧ್ಯಾಹ್ನದ ಊಟವನ್ನು ಅಗಲ್ಪಾಡಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಿಂದ ಕೊಡುತ್ತಿರುವುದು ಪ್ರಶಂಸನೀಯವಾಗಿದೆ. ವಿದ್ಯಾರ್ಥಿಗಳಿಗೆ ದೊರೆಯುವ ಆರ್ಥಿಕ ಸೌಲಭ್ಯಗಳಾದ ಮೆರಿಟ್ ಸ್ಕೋಲರ್‌ಶಿಪ್, ಲಂಸಂ ಗ್ರಾಂಟ್, ಮುಸ್ಲಿಂ ಹೆಣ್ಣುಮಕ್ಕಳಿಗಿರುವ ಸ್ಕೋಲರ್‌ಶಿಪ್, ಅಂಗವಿಕಲರಿಗಿರುವ ಸ್ಕೋಲರ್‌ಶಿಪ್‌ಗಳಲ್ಲಿ ಈ ಪಂಚಾಯತಿನ ಬೇರ ಬೇರೆ ಶಾಲೆಗಳಲ್ಲಿ, ಮೆರಿಟ್ ಸ್ಕೋಲರ್‌ಶಿಪ್ ಪಡೆಯುವ 3 ವಿದ್ಯಾರ್ಥಿಗಳೂ, ಲಂಸಂ ಗ್ರಾಂಟ್ ದೊರೆಯುವ 367 ವಿದ್ಯಾರ್ಥಿಗಳೂ ಮುಸ್ಲಿಂ ಹೆಣ್ಮಕ್ಕಳಿಗಿರುವ ಸ್ಕೋಲರ್‌ಶಿಪ್ ದೊರೆಯುವ 32 ಹೆಣ್ಮಕ್ಕಳೂ ವಿಕಲಾಂಗರಿಗಿರುವ ಸ್ಕೋಲರ್‌ಶಿಪ್ ಪಡೆಯುವ 7 ವಿದ್ಯಾರ್ಥಿಗಳೂ ಸೇರಿರುತ್ತಾರೆ.

ಈ ಪಂಚಾಯತಿನ ಬಹುತೇಕ ಶಾಲೆಗಳಲ್ಲಿ ಪ್ರಾಥಮಿಕ ಸೌಕರ್ಯಗಳೂ ಇಲ್ಲ. ಒಟ್ಟು 8 ಶಾಲೆಗಳಲ್ಲಿ ಮೂತ್ರದೊಡ್ಡಿ ಇಲ್ಲದ 3 ಶಾಲೆಗಳೂ ಕಕ್ಕಸಿಲ್ಲದ 5 ಶಾಲೆಗಳೂ, ಸಿಬ್ಬಂದಿ ಕೊಠಡಿಯಿಲ್ಲದ 5 ಶಾಲೆಗಳೂ ಸೇರಿವೆ ಎಂಬುದು ಖೇದಕರ. ಶುದ್ಧನೀರಿನ ಪೂರೈಕೆ ಇಲ್ಲದ 2 ಶಾಲೆಗಳೂ ಇವುಗಳಲ್ಲಿ ಸೇರಿಕೊಂಡಿವೆ. ಇತರ ಸೌಕರ್ಯಗಳಿಗಿರುವ (ನೀರುಪೂರೈಕೆ) ಶಾಲೆಗಳಲ್ಲಿ ಜನವರಿ ತಿಂಗಳಿನ ನಂತರ ಸಾಕಷ್ಟು ನೀರು ದೊರೆಯುವುದಿಲ್ಲ. ಪಂಚಾಯತಿನ ಎರಡು ಶಾಲೆಗಳಿಗೆ ವಿದ್ಯುತ್ ಸಂಪರ್ಕವಿದೆ. ಒಟ್ಟು 8 ಶಾಲೆಗಳಲ್ಲಿ 7ರಲ್ಲಿ ಸಾಕಷ್ಟು ಪ್ರಮಾಣದ ಪೀಠೋಪಕರಣಗಳಿಲ್ಲ.

ಈ ಎಲ್ಲಾ ಶಾಲೆಗಳಲ್ಲಾಗಿ ಒಟ್ಟು 88 ಮಂದಿ ಅಧ್ಯಾಪಕ, ಅಧ್ಯಾಪಿಕೆಯರಿದ್ದಾರೆ. ಪಂಚಾಯತಿನ ಏಕೈಕ ಹೈಸ್ಕೂಲಾದ ಶ್ರೀ ಅನ್ನಪೂರ್ಣೇಶ್ವರೀ ಹೈಸ್ಕೂಲು ಅಗಲ್ಪಾಡಿಯಲ್ಲಿ ಲೇಬೋರೇಟರಿ,

ಸ್ಲೈಡ್‌ಪ್ರೊಜೆಕ್ಟರ್, ಓವರ್ ಹೆಡ್‌ಪ್ರೊಜೆಕ್ಟರ್ ಇದ್ದರೂ ಅಗತ್ಯವೆನಿಸುವ ಇತರ ಪಠನೋಪಕರಣಗಳಿಲ್ಲ. ರೇಡಿಯೋ, ಟೇಪ್ ರೆಕಾರ್ಡರ್, ಟಿ.ವಿ.ಸೌಕರ್ಯಗಳಿಲ್ಲ. ಯು.ಪಿ. ಮತ್ತು ಎಲ್.ಪಿ. ವಿಭಾಗಗಳಲ್ಲಿ ಒಟ್ಟು 4 ಶಾಲೆಗಳಲ್ಲಿ ಲೈಬ್ರರಿಗಳಿವೆ. ಆದರೆ ಲೇಬೋರೇಟರಿ ಸೌಕರ್ಯವು ಏತಡ್ಕ ಮತ್ತು ಮವ್ವಾರು ಶಾಲೆಗಳಲ್ಲಿ ಮಾತ್ರ ಇದೆ. ಎಲ್ಲಾ ಶಾಲೆಗಳಲ್ಲಿ ಸಾಕಷ್ಟು ಪ್ರಮಾಣದ ಪಠನೋಪಕರಣಗಳಿಲ್ಲ. ಪಾಠೇತರ ಚಟುವಟಿಕೆಗಳಾದ ಭಾಷಣ, ಅಕ್ಷರಶ್ಲೋಕಗಳಲ್ಲಿ ಏತಡ್ಕ ಶಾಲೆಯ ಎರಡು ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಬಹುಮಾನವು ಲಭಿಸಿರುತ್ತದೆ. ಆದರೆ ರಾಜ್ಯ ಅಥವಾ ರಾಷ್ಟ್ರಮಟ್ಟದ ಅಂಗೀಕಾರ ಅಥವಾ ಮಾನ್ಯತೆ ಪಡೆದ ಯಾವುದೇ ವಿದ್ಯಾರ್ಥಿಗಳಿಲ್ಲ.

ಈ ಮೇಲೆ ತಿಳಿಸಿದ 8 ಶಾಲೆಗಳ ಹೊರತಾಗಿ ಇತರ ಯಾವುದೇ ವಿದ್ಯಾಭ್ಯಾಸ ಸಂಸ್ಥೆಗಳು ಈ ಪಂಚಾಯತಿನಲ್ಲಿಲ್ಲ.

ಜಿಲ್ಲಾ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯಡಿಯಲ್ಲಿ ನಮ್ಮ ಪಂಚಾಯತಿನಲ್ಲೂ ಹಲವು ಕಾರ್ಯಕ್ರಮಗಳು ನಡೆಯುತ್ತಿದೆ. ಕುಂಬಡಾಜೆಯ ಜಿ.ಜೆ.ಬಿ. ಶಾಖೆಯನ್ನು ಎಂ.ಎಲ್.ಎಲ್. ಶಾಲೆಯಾಗಿಸಿ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸಲು ಧಾರಾಳ ಕ್ರಮಗಳು ನಡೆಯುತ್ತಿದೆ. ಪ್ರತ್ಯೇಕ ರೀತಿಯ ಪಾಠಪದ್ಧತಿ ಮತ್ತು ಪರೀಕ್ಷಾ ವಿಧಾನಗಳಿರುವ D.P.E.P ಶಾಲೆಗಳಲ್ಲಿ ಬದಿಯಡ್ಕದ B.R.Cಯ ಉತ್ತಮD.P.E.P ಶಾಲೆಯೆಂದು ಕುಂಬಡಾಜೆಯ ಶಾಲೆಯನ್ನು ಆಯ್ಕೆ ಮಾಡಿದುದು ಅಭಿಮಾನದ ವಿಷಯ.

D.P.E.P. ಪಂಚಾಯತು ಮತ್ತು ಶಿಕ್ಷಕ- ರಕ್ಷಕ ಸಂಘ ಸೇರಿ ನಿರ್ಮಿಸಿದ ಹೊಸಕಟ್ಟಡದ ಕ್ಲಾಸುರೂಮುಗಳ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಅಧ್ಯಾಪಕರ ಕೊರತೆಯಿಲ್ಲದೆ ಗಮನ ಸೆಳೆಯುವ ಈ ಶಾಲೆಯ ಜೊತೆಗೆ ಇತರ ಶಾಲೆಗಳಿಗೂ D.P.E.P.ಯ ಸಹಾಯವು ದೊರೆತಿದೆ. ಅವುಗಳಲ್ಲಿ ಮುಖ್ಯವಾಗಿ ಶಾಲಾ ಪರಿಸರದ ಸುಂದರಗೊಳಿಸುವಿಕೆ ಮತ್ತು ಪಠನೋಪಕರಣಗಳ ನಿರ್ಮಾಣಕ್ಕೆ ಧನಸಹಾಯವು ದೊರೆತಿರುತ್ತದೆ.

ಪರಿಶಿಷ್ಟ ವರ್ಗದ ಮತ್ತು ಎಲ್ಲಾ ಹೆಣ್ಣು ಮಕ್ಕಳಿಗೆ D.P.E.P.ಯು ಪುಸ್ತಕಗಳನ್ನು ವಿತರಿಸಿದೆ. ಮುಂದಿನ ವರ್ಷಗಳಿಂದ ಎಲ್ಲಾ ಎಲ್.ಪಿ. ಶಾಲೆಗಳನ್ನು D.P.E.P.ಯ ಅಧೀನದಲ್ಲಿ ಒಳಪಡುವಂತೆ ಮಾಡುವುದು ಆಶಾದಾಯಕ ವಿಚಾರ.

ಈ ಪಂಚಾಯತಿನಲ್ಲಿ ವಿಕ್ಕೆಕ ಕನ್ನಡ ಮಾಧ್ಯಮ ಹೈಸ್ಕೂಲು ಇರುವುದರಿಂದ ಮಕ್ಕಳು ಹೈಸ್ಕೂಲು ಶಿಕ್ಷಣಕ್ಕೆ ದೂರದಿಂದ ಬರುವುದೂ ಅಥವಾ ಇತರ ಬಹುದೂರದ ಪಂಚಾಯತುಗಳನ್ನು ಆಶ್ರಯಿಸಿರುವುದು ಖೇದಕರ. ಈ ಕಾರಣಕ್ಕಾಗಿ ಇಲ್ಲಿನ ಯು.ಪಿ. ಶಾಲೆಗಳನ್ನು ಭಡ್ತಿಗೊಳಿಸಿ ಹೈಸ್ಕೂಲಾಗಿಸಬೇಕೆಂಬ ಜನರ ಬಹುಕಾಲದ ಬೇಡಿಕೆ ಈ ವರೆಗೆ ಕೇವಲ ಅರಣ್ಯರೋದನವಾಗಿದೆ.

ವಿಶೇಷ ಸೂಚನೆಗಳು

1. ಎಲ್ಲಾ ಶಾಲೆಗಳಿಗೂ ಕುಡಿಯುವ ನೀರಿನ ಪೂರೈಕೆ, ಮೂತ್ರದೊಡ್ಡಿ, ಕಕ್ಕೂಸು, ಆಟದ ಮೈದಾನ ಮುಂತಾದ ಸೌಕರ್ಯಗಳನ್ನೊದಗಿಸಬೇಕು.

2. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ Pre-primary ಶಿಕ್ಷಣವನ್ನು ಒದಗಿಸಬೇಕು.

3. ಶಾಲಾ ಶಿಕ್ಷಕ, ರಕ್ಷಕ ಸಂಘವನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು.

4. ಹೆಡ್‌ಮಾಸ್ಟರುಗಳನ್ನು ಕ್ಲಾಸಿನ ಚಾರ್ಜಿನಿಂದ ವಿಮುಕ್ತಗೊಳಿಸಬೇಕು.

5. ಎಲ್ಲಾ ವಿದ್ಯಾರ್ಥಿಗಳಿಗೂ ಮಧ್ಯಾಹ್ನದೂಟದ ಸೌಲಭ್ಯವಿರಬೇಕು.

6. ವಿದ್ಯಾಭ್ಯಾಸದಲ್ಲಿ ಹಿಂದುಳಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರತ್ಯೇಕ ತರಬೇತಿ ನೀಡಬೇಕು.

7. ಪಾಠಪುಸ್ತಕಗಳನ್ನು ತಕ್ಕ ಸಮಯದಲ್ಲಿ ತಲುಪಿಸಬೇಕು.

8. ಶಾಲೆಗಳಿಗೆ ಅಧ್ಯಾಪಕರನ್ನು ನೇಮಿಸುವಾಗ ಊರವರಿಗೇ (local) ಹೆಚ್ಚಿನ ಆದ್ಯತೆ ನೀಡಬೇಕು.

9. D.P.E.P.ಯ ಎಲ್ಲಾ ಕಾರ್ಯಕ್ರಮಗಳು ದಕ್ಷ ಮತ್ತು ಉತ್ತಮವಾಗಿರಬೇಕು.

10. ಅರ್ಧದಲ್ಲೇ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ಮಕ್ಕಳನ್ನು ಪುನಃ ಶಾಲೆಗಳಿಗೆ ಬರುವಂತೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

11. ಎಲ್ಲಾ ಶಾಲೆಗಳಿಗೂ ಕಲಿಕೆಯ ಉಪಕರಣಗಳು, ಟಿ.ವಿ., ವಿದ್ಯುತ್ ಮುಂತಾದ ಸೌಕರ್ಯಗಳನ್ನು ಒದಗಿಸಬೇಕು.

12. ಅಗತ್ಯ ಮತ್ತು ಸಾಕಷ್ಟು ಪ್ರಮಾಣದ ಪೀಠೋಪಕರಣಗಳು ಇರುವಂತೆ ಪ್ರತ್ಯೇಕ ಗಮನವಿರಬೇಕು.

13. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸಲು ತಕ್ಕ ಕ್ರಮ ಕೈಗೊಳ್ಳಬೇಕು.

14. ಪಾಠೇತರ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಬೇಕು.

15. 5-14 ವರ್ಷದ ವರೆಗಿನ ಎಲ್ಲಾ ಮಕ್ಕಳನ್ನು ಶಾಲೆಗೆ ತಲಪಿಸಬೇಕು.

16. ಮಕ್ಕಳನ್ನು ಬಾಲಕಾರ್ಮಿಕರಾಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು.

17. ಶಿಕ್ಷಣದ ಮಹತ್ವ ಮತ್ತು ಸಾಧನೆಗಳ ಬಗ್ಗೆ ಹೆತ್ತವರು ತಿಳಿದಿರದಿದ್ದಲ್ಲಿ, ಮಕ್ಕಳ ವಿದ್ಯಾಭ್ಯಾಸ ಮತ್ತು ಯಶಸ್ಸಿಗೆ ಅಪಾರ ಪ್ರೋತ್ಸಾಹ ಮತ್ತು ತ್ಯಾಗವನ್ನು ಸಹಿಸುವಂತೆ ಹಿರಿಯರ ಮನೋಭಾವದಲ್ಲಿ ಬದಲಾವಣೆ ತರಬೇಕು.

18. ಎಲ್ಲಾ ಶಾಲೆಗಳಲ್ಲಿ ವಾರ್ಷಿಕೋತ್ಸವಗಳನ್ನು ಸರಿಯಾಗಿ ನಡೆಸಬೇಕು.

19. ಶಾಲಾ ಮಕ್ಕಳಿಗೆ ಸಮಯಕ್ಕನುಸಾರವಾಗಿ ವೈದ್ಯರ ಸಹಾಯ, ಸಲಹೆ ಸೂಚನೆಗಳು ದೊರೆಯುವಂತಿರಬೇಕು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ಬೇಕಾದ ಕ್ರಮಗಳನ್ನು ಸ್ವೀಕರಿಸಬೇಕು.

20. ಮಲಯಾಳ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು.

21. ಎಲ್ಲಾ ವಾರ್ಡುಗಳಲ್ಲಿಯೂ ಅಂಗನವಾಡಿಗಳಿರಬೇಕು.

22. ಎಲ್ಲಾ ವಾರ್ಡುಗಳ ಕೆಲವು ಪ್ರಧಾನ ಭಾಗಗಳಲ್ಲಿ ವಾಚನಾಲಯ, ಗ್ರಂಥಾಲಯಗಳಿರಬೇಕು.

23. ಎಲ್ಲಾ ಶಾಲೆಗಳಲ್ಲಿಯೂ ಸ್ಕೌಟ್ ಮತ್ತು ಗೈಡ್, ಎನ್.ಸಿ.ಸಿ., ಯೂನಿಟ್‌ಗಳಿರಬೇಕು.

24. ಮಧ್ಯಾಹ್ನದೂಟದ ಖರ್ಚನ್ನು ಸರಕಾರವೇ ಸಂಪೂರ್ಣವಾಗಿ ವಹಿಸಿಕೊಳ್ಳಬೇಕು.

25. ಶಿಕ್ಷಣಕ್ಕೆ ಅಗತ್ಯವಿರುವ ಮಾಹಿತಿಕೇಂದ್ರಗಳಿರಬೇಕು.

26. ಮಕ್ಕಳಿಗಾಗಿ ಉದ್ಯಾನ (Park) ಇರಬೇಕು.

27. ಜಿ.ಜೆ.ಬಿ. ಶಾಲೆ ಕುಂಬಡಾಜೆ ಮತ್ತು ಎ.ಎಲ್.ಪಿ. ಶಾಲೆ ಬೆಳಿಂಜ ಮತ್ತು ಎ.ಯು.ಪಿ. ಶಾಲೆ ಏತಡ್ಕ ಇವುಗಳನ್ನು ಭಡ್ತಿಗೊಳಿಸಿ ಹೈಸ್ಕೂಲಾಗಿಸಬೇಕು. ಮರಿಕ್ಕಾನ L.P. U.P. ಶಾಲೆಯನ್ನಾಗಿ ಭಡ್ತಿಗೊಳಿಸಬೇಕು.

28. ಶ್ರೀ ಅನ್ನಪೂರ್ಣೇಶ್ವರೀ ಹೈಸ್ಕೂಲು ಆಗಲ್ಪಾಡಿಯಲ್ಲಿ ಪ್ಲಸ್‌ಟು ಕಾಲೇಜು ಆರಂಭವಾಗಬೇಕು.

29. ತಾಂತ್ರಿಕ ವಿದ್ಯಾಭ್ಯಾಸ ಸಂಸ್ಥೆಗಳನ್ನು ಸ್ಥಾಪಿಸಬೇಕು.

30. ಪಂಚಾಯತಿನಧೀನದಲ್ಲಿರುವ ಲೈಬ್ರರಿಗಳ ಕೊರತೆಗಳನ್ನು ಸರಿಪಡಿಸಿ ಜನರ ಉಪಯೋಗಕ್ಕೆ ಬರುವಂತೆ ಕ್ರಮ ಕೈಗೊಳ್ಳಬೇಕು. ಲೈಬ್ರರಿಯನ್‌ನ್ನು ನೇಮಕಗೊಳಿಸಬೇಕು.

31. ಶಾಲಾ ಪಾಠಪುಸ್ತಕಗಳ ಸಂಖ್ಯೆ ಮತ್ತು ಗಾತ್ರವನ್ನು ಕಮ್ಮಿಗೊಳಿಸಬೇಕು.

32. ಜಾತಿ ಮತ ಮತ್ತು ಲಿಂಗಬೇಧವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೂ ಪಠ್ಯ ಪುಸ್ತಕ ಮತ್ತು ನೋಟುಪುಸ್ತಕಗಳನ್ನು ನೀಡಬೇಕು. ಕೇವಲ ಆದಾಯದ ಆಧಾರದಲ್ಲಿ ಮಾತ್ರ ಆರ್ಥಿಕ ಸವಲತ್ತುಗಳನ್ನು (ಧನಸಹಾಯ) ನೀಡಬೇಕು.

33. ಸ್ಕೂಲ್ ಕಾಂಪ್ಲೆಕ್ಸ್‌ಗಳ ಕಾರ್ಯಚಟುವಟಿಕೆಗಳನ್ನು ಉತ್ತಮಪಡಿಸಬೇಕು.

34. ಆಯಾ ವಾರ್ಡುಗಳು ಗ್ರಾಮಸಭೆಗಳಲ್ಲಿ ಜನರಿಂದ ಬಂದ ಕೆಲವಾರು ಸೂಚನೆಗಳು ಈ ಕೆಳಗಿನಂತಿವೆ.

(a). ಒಂದನೇ ವಾರ್ಡಿನಲ್ಲಿ ಏತಡ್ಕದಲ್ಲಿ ಹೈಸ್ಕೂಲು ಸ್ಥಾಪಿಸಬೇಕು.

(b). ಎರಡನೇ ವಾರ್ಡಿನಲ್ಲಿ ಗಾಡಿಗುಡ್ಡೆ ಎಂಬೀಕಡೆಗಳಲ್ಲಿ ಎಲ್.ಪಿ. ಶಾಲೆಗಳನ್ನು ತೆರೆಯಬೇಕು.

(c). ಮೂರನೇ ವಾರ್ಡಿನ ಮುಕ್ಕೂರುಮಜಲು ಎಂಬಲ್ಲಿ ಎಲ್.ಪಿ.ಶಾಲೆ ತೆರೆಯಬೇಕು.

ಪ್ರಸ್ತುತ ಗಾಡಿಗುಡ್ಡೆಯಲ್ಲಿ D.P.E.Pಯ ಅಂಗವಾಗಿ ಏಕೋಪಾಧ್ಯಾಯ ಶಾಲೆಗೆ ಅನುಮತಿ ದೊರೆತಿದ್ದರೂ ಮಕ್ಕಳ ಸಂಖ್ಯೆಗನುಸಾರವಾಗಿ ಸರಿಹೊಂದುವುದಿಲ್ಲವಾದುದರಿಂದ ಇದಕ್ಕಿರುವ ಏಕೈಕ ಪರಿಹಾರವು ಎಲ್.ಪಿ. ಶಾಲೆಗಳನ್ನು ತೆರೆಯುವುದಾಗಿದೆ.

35. ಕನ್ನಡ ಮೀಡಿಯಂ ಇಲ್ಲದ U.P, L.P. H.S ವಿಭಾಗದ ಶಾಲೆಗಳಲ್ಲಿ ಕನ್ನಡ ಕಲಿಸುವ ವ್ಯವಸ್ಥೆ ಮಾಡಬೇಕು.

ವಿಭಾಗ	1996-97		
	ಗಂಡು	ಹೆಣ್ಣು	ಒಟ್ಟು
ಯಲ್.ಪಿ.	623	545	1168
ಯು.ಪಿ	338	295	633
ಹೈಸ್ಕೂಲ್	213	198	411
ಒಟ್ಟು	1174	1038	2212

ಮಧ್ಯಾಹ್ನದೂಟದ ಸವಲತ್ತು ಪಡೆಯುವ ಮಕ್ಕಳು

ಕ್ರಮ ಸಂಖ್ಯೆ	ಶಾಲೆ	ಒಟ್ಟು ವಿದ್ಯಾರ್ಥಿಗಳು	ಸವಲತ್ತು ಪಡೆಯುವವರು
1.	ಎಸ್.ಎ.ಪಿ.ಎಚ್.ಎಸ್. ಆಗಲ್ಪಾಡಿ	345	207
2.	ಎ.ಎಲ್.ಪಿ.ಎಸ್. ಬೆಳಿಂಜ	465	279
3.	ಜಿ.ಜೆ.ಬಿ.ಎಸ್. ಕುಂಬಡಾಜೆ.	280	148
4.	ಎಸ್.ಎ.ಪಿ.ಎಲ್.ಪಿ.ಎಸ್. ಆಗಲ್ಪಾಡಿ	92	56
5.	ಎ.ಯು.ಪಿ.ಎಸ್. ಮವ್ವಾರು	219	142
6.	ಎಸ್.ಎಸ್.ಎ.ಲ್.ಪಿ.ಎಸ್. ಮರಿಕ್ಕಾನ	88	53
7.	ವಿ.ವಿ.ಎ.ಎಲ್.ಎಸ್. ಕೀರಿಕ್ಕಾಡು	51	31
8.	ಎ.ಯು.ಪಿ.ಎಸ್. ಏತಡ್ಕ	261	157
	ಜುಮ್ಲಾ	1801	1073

ಯಸ್.ಯಸ್.ಯಲ್.ಸಿ. ಫಲಿತಾಂಶ (ತೇರ್ಗಡೆಯಾದವರ ಶತಮಾನ)

ಶಾಲೆಯ ಹೆಸರು	91-92	92-93	93-94	94-95	95-96
ಶ್ರೀ ಎ.ಪಿ. ಹೈಸ್ಕೂಲ್ ಅಗಲ್ಪಾಡಿ	73.6	64	59	54	57

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

ತರಗತಿ	ಗಂಡು	ಹೆಣ್ಣು	ಒಟ್ಟು
1	158	145	303
2	164	164	328
3	151	105	256
4	150	131	281
5	124	115	239
6	92	87	179
7	122	93	215
8	83	75	158
9	82	64	146
10	48	59	107
ಒಟ್ಟು	1174	1038	2212

ವಿದ್ಯಾಭ್ಯಾಸವನ್ನು ನಿಲ್ಲಿಸಿದವರು

ತರಗತಿ	ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ			ಇತರರು			ಒಟ್ಟು
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	
1	-	1	1	2	1	3	4
2	-	-	-	1	-	1	1
3	-	1	1	2	2	4	5
4	-	-	-	9	1	10	10
5	1	1	2	4	2	6	8
6	1	1	2	1	-	1	3
7	2	2	4	2	3	5	9
8	4	1	5	7	2	9	14
9	-	-	-	7	2	9	9
10	-	1	1	1	-	1	2
ಒಟ್ಟು							65

ಕುಂಬಡಾಜೆ ಗ್ರಾಮ ಪಂಚಾಯತು ಶಾಲೆಯ ಸಾಮಾನ್ಯ ಮಾಹಿತಿ

ಶಾಲೆಯ ಹೆಸರು	ಹೈಸ್ಕೂಲು ಯು.ಪಿ., ಎಲ್.ಪಿ. ಪ್ರೀ-ಪ್ರೈಮರಿ	ಶಾಲೆಯ ಉಸ್ತುವಾರಿ				ಮಕ್ಕಳ ಸಂಖ್ಯೆ			ಅಧ್ಯಾಪಕರ ಸಂಖ್ಯೆ				ಶಾಲಾ ಪರಿಸರದ ಒಟ್ಟು ವಿಸ್ತೀರ್ಣ	ಆಟದ ಬಯಲಿನ ವಿಸ್ತೀರ್ಣ	ಯಾವುದಕ್ಕೂ ಉಪಯೋಗಿಸದ ಸ್ಥಳದ ವಿಸ್ತೀರ್ಣ	ಸುತ್ತುಗೋಡೆ, ದಾರಿಸ್ತೆ ಕಲಸ, ಪೀಠೋಪಕರಣ ಮತ್ತು ಮುಂತಾದವುಗಳ ವಿವರಗಳು
		ಸರಕಾರ	ಬಿಬೆಟ್	ಎನ್ ಬಿಬೆಟ್	ಅಂಗೀಕೃತವಲ್ಲದವುಗಳು	ಗಂಡು	ಹೆಣ್ಣು	ಒಟ್ಟು	ಅನುಮತಿ ನೀಡಲಾದ ಒಟ್ಟು ಹುದ್ದೆಗಳು	ಈಗಿರುವ ಅಧ್ಯಾಪಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ವರ್ಷ ಯಲ್ಲಿರುವುದು				
ಶ್ರೀ.ಎ.ಪಿ.ಯಚ್.ಯಸ್.ಅಗಲ್ಪಾಡಿ	ಹೈಸ್ಕೂಲ್	-	✓	-	-	397	359	756	31	31	-	-	3.26	0.60	-	-
ಎ.ಯಲ್.ಪಿ. ಶಾಲೆ. ಬೆಳಿಂಜ	ಯಲ್.ಪಿ.	-	✓	-	-	248	217	465	15	15	-	-	1.32	0.43	-	-
ಜಿ.ಜೆ.ಬಿ.ಯಸ್, ಕುಂಬಡಾಜೆ	ಯಲ್. ಪಿ.	✓	-	-	-	158	122	280	10	10	-	-	2.55	0.50	-	-
ಯಲ್.ಎ.ಪಿ.ಯಲ್.ಪಿ.ಶಾಲೆ, ಅಗಲ್ಪಾಡಿ	ಯಲ್. ಪಿ.	-	✓	-	-	44	48	92	4	4	-	1	0.50	0.10	-	-
ಎ.ಯು.ಪಿ.ಶಾಲೆ ಮವ್ವಾರು	ಯು.ಪಿ	-	✓	-	-	112	107	219	9	8	1	-	3.00	0.40	2.00	-
ಯಸ್.ಯಸ್.ಎ.ಯಲ್.ಪಿ. ಶಾಜೆರಿಕ್ಕಾನ	ಯಲ್.ಪಿ.	-	✓	-	-	51	37	88	4	4	-	-	1.15	-	0.50	-
ವಿ.ಪಿ.ಎ.ಯಲ್.ಪಿ. ಶಾಲೆ, ಕೀರಿಕ್ಕಾಡು.	ಯಲ್.ಪಿ.	-	✓	-	-	32	19	51	4	4	-	-	1.19	0.60	0.39	-
ಎ.ಯು.ಪಿ.ಶಾಲೆ, ಏತಡ್ಕ	ಯು.ಪಿ.	-	✓	-	-	131	128	269	11	12	-	-	3.00	1.00	1.00	-

ಪಂಚಾಯತಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ

	ಶಾಲೆಯ ಹೆಸರು	ತರಗತಿಗಳು										
		1	2	3	4	5	6	7	8	9	10	ಒಟ್ಟು
1.	ಎಸ್.ಎ.ಪಿ.ಯಚ್.ಯಸ್., ಅಗಲ್ಪಾಡಿ.	-	-	-	-	82	114	149	158	146	107	756
2.	ಎ.ಯು. ಪಿ. ಸ್ಕೂಲ್, ಮವ್ವಾರು	34	30	34	28	32	28	33	-	-	-	219
3.	ಎ.ಯು. ಪಿ. ಸ್ಕೂಲ್, ಬೆಳಿಂಜ	121	91	83	98	72	-	-	-	-	-	465
4.	ಎಸ್.ಎ.ಪಿ.ಯಲ್.ಪಿ. ಸ್ಕೂಲ್, ಅಗಲ್ಪಾಡಿ.	22	25	20	25	-	-	-	-	-	-	92
5.	ಯಸ್.ಯಸ್.ಎ.ಯಲ್.ಪಿ.ಸ್ಕೂಲ್, ಮರಿಕ್ಕಾನ	18	24	28	18	-	-	-	-	-	-	88
6.	ಎ.ಯು. ಪಿ. ಸ್ಕೂಲ್, ಏತಡ್ಕ.	21	63	25	29	53	37	33	-	-	-	261
7.	ವಿ.ವಿ.ಎ. ಯಲ್.ಪಿ. ಸ್ಕೂಲ್, ಕೀರಿಕ್ಕಾಡು.	15	11	12	13	-	-	-	-	-	-	51
8.	ಜಿ.ಜೆ. ಬಿ. ಯಸ್. ಕುಂಬಡಾಜೆ.	72	84	54	70	-	-	-	-	-	-	280
	ಒಟ್ಟು	303	328	256	281	239	179	215	158	146	107	2212

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ವಿವರ

	ಶಾಲೆಯ ಹೆಸರು	ಹುಡುಗರು	ಹುಡುಗಿಯರು	ಒಟ್ಟು
1.	ಎ.ಯು. ಪಿ. ಸ್ಕೂಲ್, ಮವ್ವಾರು	26	17	43
2.	ಎಸ್.ಎ.ಪಿ.ಎ.ಯಲ್.ಪಿ. ಸ್ಕೂಲ್, ಅಗಲ್ಪಾಡಿ.	11	16	27
3.	ಯಸ್.ಯಸ್.ಎ.ಯಲ್.ಪಿ.ಸ್ಕೂಲ್, ಮರಿಕ್ಕಾನ	5	4	9
4.	ಎ. ಯುಲ್. ಪಿ. ಸ್ಕೂಲ್, ಬೆಳಿಂಜ	8	7	15
5.	ಎ.ಯು. ಪಿ. ಸ್ಕೂಲ್, ಏತಡ್ಕ.	42	34	76
6.	ವಿ.ವಿ.ಎ. ಯಲ್.ಪಿ. ಸ್ಕೂಲ್, ಕೀರಿಕ್ಕಾಡು.	8	7	15
7.	ಜಿ.ಜೆ. ಬಿ. ಯಸ್. ಕುಂಬಡಾಜೆ.	21	15	36
8.	ಎಸ್.ಎ.ಪಿ.ಯಚ್.ಯಸ್., ಅಗಲ್ಪಾಡಿ.	76	70	146
	ಒಟ್ಟು	197	170	367

ಧನ ಸಹಾಯ ಪಡೆಯುವ ವಿದ್ಯಾರ್ಥಿಗಳ ವಿವರ

	ಶಾಲೆಯ ಹೆಸರು	ಮೆರಿಟ್ ಸ್ಕೋಲರ್ ಶಿಪ್	ಲಂಸ ಗ್ರಾಂಟ್	ಮುಸ್ಲಿಂ ಹುಡುಗಿಯರ ಸ್ಕೋಲರ್‌ಶಿಪ್	ವಿಕಲಾಂಗ ಸ್ಕೋಲರ್‌ಶಿಪ್	ಸೈನಿಕ ಮಕ್ಕಳ ವದ್ಯಾಭ್ಯಾಸ ಧನ ಸಹಾಯ	ಬೀಡಿ ಕಾರ್ಮಿಕರ ಸ್ಕೋಲರ್‌ಶಿಪ್	ಮೀನು ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ ಧನಸಹಾಯ	ಇತರ (ವ್ಯಕ್ತವಾಗಿ)
1.	ಎಸ್.ಎ.ಪಿ.ಯಚ್.ಯಸ್., ಅಗಲ್ಪಾಡಿ.	-	146	-	2	-	-	-	-
2.	ಎ. ಯುಲ್. ಪಿ. ಸ್ಕೂಲ್, ಬೆಳಿಂಜ	1	26	17	1	-	-	-	-
3.	ಎ.ಯು. ಪಿ. ಸ್ಕೂಲ್, ಏತಡ್ಕ.	2	105	9	3	-	-	-	-
4.	ವಿ.ವಿ.ಎ. ಯಲ್.ಪಿ. ಸ್ಕೂಲ್, ಕೀರಿಕ್ಕಾಡು.	-	15	-	-	-	-	-	-
5.	ಯಸ್.ಯಸ್.ಎ.ಯಲ್.ಪಿ.ಸ್ಕೂಲ್, ಮರಿಕ್ಕಾನ	-	9	1	-	-	-	-	-
6.	ಜಿ.ಜೆ. ಬಿ. ಯಸ್. ಕುಂಬಡಾಜೆ.	-	30	-	-	-	-	-	10
7.	ಎ.ಯು. ಪಿ. ಸ್ಕೂಲ್, ಮವ್ವಾರು	-	9	-	-	-	-	-	-
8.	ಎಸ್.ಎ.ಪಿ.ಎ.ಯಲ್.ಪಿ. ಸ್ಕೂಲ್, ಅಗಲ್ಪಾಡಿ.	-	27	-	-	-	-	-	-

ಕುಂಬಡಾಜೆ ಗ್ರಾಮ ಪಂಚಾಯತು ಶಾಲೆಯ ಮೂಲಭೂತ ಸೌಕರ್ಯಗಳ ಕುರಿತಾದ ವಿವರ

ಶಾಲೆಯ ಹೆಸರು	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ	ಕಟ್ಟಡಗಳ ಸಂಖ್ಯೆ			ಕೊಠಡಿಗಳ ಸಂಖ್ಯೆ			ಕೊಠಡಿಗಳ ಅಗತ್ಯವಿದೆ	ಅಗತ್ಯವಿರುವ ಕಟ್ಟಡ ಕೊಠಡಿ ನಿರ್ಮಿಸಲು ಬೇಕಾದಷ್ಟು ಭೂಮಿ ಇದೆ/ಇಲ್ಲ	ಈಗಿರುವ ಶೌಚಾಲಯಗಳ ಸಂಖ್ಯೆ	ಶೌಚಾಲಯವನ್ನು ಒಂದು ಬಾರಿ ಎಷ್ಟು ಮಕ್ಕಳಿಗೆ ಉಪಯೋಗಿಸಬಹುದು	ಇನ್ನು ಅಗತ್ಯವಿರುವ ಶೌಚಾಲಯಗಳ ಸಂಖ್ಯೆ	ಈಗಿರುವ ಪಾಯಖಾನೆಗಳ ಸಂಖ್ಯೆ	ಉಪಯೋಗ ಶೂನ್ಯವಾದ ಪಾಯಖಾನೆಗಳ ಸಂಖ್ಯೆ	ಕುಡಿಯುವ ನೀರಿನ ಸೌಲಭ್ಯ ಇದೆ/ಇಲ್ಲ ಬಾವಿ/ನಲ್ಲಿ	ವಿದ್ಯುತ್ ಸಂಪರ್ಕ ಇದೆ/ಇಲ್ಲ	ಅಡುಗೆ ಕೋಣೆ	ಸ್ಟಾಫ್ ರೂಂ	ಈಗಿರುವ ಪೀಠೋಪಕರಣಗಳು ಸಾಕು/ಸಾಲದು	ಅಗತ್ಯವಿರುವ ಪೀಠೋಪಕರಣಗಳು				
		ಖಾಯಂ ಕಟ್ಟಡ	ಅರ್ಧ ಖಾಯಂ	ತಾತ್ಕಾಲಿಕ	ಖಾಯಂ	ಅರ್ಧ ಖಾಯಂ	ತಾತ್ಕಾಲಿಕ														ಡೆಸ್ಕು	ಬೆಂಚು	ಮೇಜು	ಕುರ್ಚಿ	ಕಛೇರಿ ಪೀಠೋಪಕರಣಗಳು
ಜಿ.ಚೆಬಿ.ಯಸ್.ಕುಂಬಡಾಜೆ	9	1	-	1	3	-	1	4	ಇದೆ	1	5	1	1	1	ಬಾವಿ	-	ಇದೆ	ಇಲ್ಲ	ಇಲ್ಲ	20	40	5	5	-
ಎ.ಯಲ್.ಪಿ. ಸ್ಕೂಲ್. ಬೆಳಿಂಜೆ	15	3	-	1	Hall	-	-	-	-	ಇಲ್ಲ	-	2	-	-	ಬಾವಿ	-	ಇದೆ	ಇಲ್ಲ	ಇಲ್ಲ	50	25	10	10	-
ಎ.ಯು.ಪಿ.ಸ್ಕೂಲ್.ಮವ್ವಾರು	7	3	-	-	10	-	-	2	ಇದೆ	1	1	3	-	-	ಬಾವಿ	-	ಇಲ್ಲ	ಇದೆ	ಇಲ್ಲ	50	50	8	8	-
ಯಸ್.ಎ.ಪಿ.ಯಚ್.ಎಸ್.ಅಗಲ್ಪಾಡಿ	20	5	-	-	21	-	7	-	-	1	26	1	2	-	ಬಾವಿ	ಇದೆ	ಇದೆ	ಇದೆ	ಇದೆ	-	-	-	-	-
ಯಸ್.ಯಸ್.ಎ.ಯಲ್.ಪಿ. ಸ್ಕೂಲ್. ಮರಿಕ್ಕಾನ	4	1	-	-	-	-	-	5	ಇದೆ	ಇಲ್ಲ	-	15	-	-	ಇಲ್ಲ	ಇಲ್ಲ	-	-	ಇಲ್ಲ	25	25	5	10	-
ಎ.ಯು.ಪಿ.ಸ್ಕೂಲ್. ಏತಡ್ಕ	9	4	1	-	11	1	-	4	ಇದೆ	3	10	5	2	-	ಬಾವಿ	ಇದೆ	ಇಲ್ಲ	ಇದೆ	ಇಲ್ಲ	30	25	5	4	-
ಯಸ್.ಎ.ಯು.ಪಿ.ಸ್ಕೂಲ್ ಅಗಲ್ಪಾಡಿ	4	1	-	-	2	-	-	3	ಇದೆ	ಇಲ್ಲ	-	1	-	-	ಇಲ್ಲ	ಇಲ್ಲ	-	-	ಇಲ್ಲ	5	5	2	2	-
ವಿ.ವಿ.ಎ.ಯಲ್.ಪಿ.ಸ್ಕೂಲ್, ಕೀರಿಕ್ಕಾಡು	4	1	-	-	1	-	-	2	ಇದೆ	ಇದೆ	1	-	-	-	ಬಾವಿ	-	ಇದೆ	ಇಲ್ಲ	ಇಲ್ಲ	10	10	2	2	-

ಕುಡಿಯುವ ನೀರು ಮತ್ತು ಸಾರ್ವಜನಿಕ ಆರೋಗ್ಯ

ಧಾರಾಳವಾಗಿ ಮಳೆ ಲಭಿಸುವ ಆದರೆ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ಲಭಿಸದ ಸ್ಥಿತಿ ಈ ಪಂಚಾಯತಿನಲ್ಲಿದೆ. ಒಟ್ಟು 1975 ಕುಟುಂಬಗಳಲ್ಲಿ ಅಂಕಿ ಅಂಶಗಳ ಪ್ರಕಾರ 500ಕ್ಕಿಂತ ಕಡಿಮೆ ಕುಟುಂಬಗಳಿಗೆ ಮಾತ್ರ ಕುಡಿಯುವ ನೀರಿನ ಸೌಲಭ್ಯವಿದೆ. ಸರಿಸುಮಾರು 800 ವರ್ಷಕ್ಕಿಂತಲೂ ಹೆಚ್ಚಿನ ಕುಟುಂಬಗಳು ಸ್ಥಿರವಾಗಿ ಇತರ ಜನರ ನೀರಿನ ಮೂಲಗಳನ್ನು ಆಶ್ರಯಿಸುತ್ತಾರೆ. ಕೇವಲ ಬೆರಳೆಣಿಕೆಯಷ್ಟು ಬಾವಿಗಳು ಮಾತ್ರ ಕಲ್ಲುಕಟ್ಟಿ ಸಂರಕ್ಷಿಸಲ್ಪಟ್ಟವುಗಳಾಗಿವೆ.

ಈ ಪಂಚಾಯತಿನಲ್ಲಿ ಒಟ್ಟು 24 ಸಾರ್ವಜನಿಕ ಬಾವಿಗಳೂ, 32 ಕೊಳವೆ ಬಾವಿಗಳೂ, 4 ಟಾಂಕಿಗಳೂ ಶುದ್ಧ ನೀರಿನ ಪೂರೈಕೆಗಾಗಿ ನಿರ್ಮಿಸಲ್ಪಟ್ಟಿವೆ. ಗಾಡಿಗುಡ್ಡೆಯಲ್ಲೊಂದು ಹೊರತು ಬೇರೆ ಸಾರ್ವಜನಿಕ ನಳ್ಳಿ ಈ ಪಂಚಾಯತಿನಲ್ಲಿಲ್ಲ. ಪಂಚಾಯತು ಲೆಕ್ಕದ ಬಾವಿಗಳಲ್ಲೇ ಕೆಲವು ಅಜೀರ್ಣಾವಸ್ಥೆಯಲ್ಲಿವೆ. 32 ಕೊಳವೆ ಬಾವಿಗಳಲ್ಲಿ 4 ಬಾವಿಗಳು ಉಪಯೋಗ ಶೂನ್ಯವಾಗಿವೆ.

ಈ ಪಂಚಾಯತಿನ ಕೆಲವು ಭಾಗಗಳಲ್ಲಿ ಕುಡಿಯುವ ನೀರಿಗಾಗಿ ಕೆಲವು ಕುಟುಂಬಗಳು ಒಂದು ಕಿ.ಮೀ. ಗಿಂತಲೂ ಅಧಿಕ ದೂರದ ನೀರಿನ ಮೂಲಗಳನ್ನು ಆಶ್ರಯಿಸಿದ್ದಾರೆ. ಮಳೆಗಾಲದಲ್ಲಿ ಸಾಕಷ್ಟು ನೀರು ತುಂಬುವ ಕೆಲವು ಬಾವಿಗಳು ಬೇಸಿಗೆಯಲ್ಲಿ ಒಣಗಿ ಬತ್ತಿ ಹೋಗುತ್ತವೆ. ಶುದ್ಧ ನೀರಿನ ಅಭಾವವು ಕೊಲೆರಾ ಮೊದಲಾದ ಸಾಂಕ್ರಾಮಿಕ ರೋಗಗಳಿಗೆ ಕಾರಣವಾದದ್ದೂ ಇದೆ. ಮಾತ್ರವಲ್ಲ ಇಂತಹ ವಿಚಾರಗಳಲ್ಲಿ ಜನರು ಸರಿಯಾದ ಗಮನ ಹರಿಸುತ್ತಿಲ್ಲ. ಹಟ್ಟಿಗಳಿಗೆ ಸಮೀಪ ನಿರ್ಮಿಸುವ ಬಾವಿಗಳ ನೀರು ಉಪಯೋಗಿಸಲು ಯೋಗ್ಯವಲ್ಲ ಎಂಬ ವಿಚಾರವೂ ಕೂಡ ಜನರಿಗೆ ತಿಳಿದಿಲ್ಲ.

ಸಮಸ್ಯೆಗಳು

1. ಈ ಪಂಚಾಯತಿನ ಎತ್ತರದ ಭೂಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವಿದೆ.

2. ಹೆಚ್ಚಿನ ಕುಟುಂಬಗಳಿಗೆ ಸ್ವಂತ ಬಾವಿ ನಿರ್ಮಿಸಲು ಆರ್ಥಿಕ ಸಾಮರ್ಥ್ಯವಿಲ್ಲ.

3. ಸಾರ್ವಜನಿಕ ಬಾವಿಗಳು ಮತ್ತು ಕೆರೆಗಳ ಸಮೀಪ ವಾಹನಗಳನ್ನು ತೊಳೆಯುವುದರಿಂದ ಜಲಮಾಲಿನ್ಯ ಉಂಟಾಗುತ್ತದೆ.

4. ಕೆಲವು ಕೊಳವೆ ಬಾವಿಗಳಿಂದ ಅಶುದ್ಧ ನೀರು ದೊರೆಯುತ್ತದೆ.

5. ಸಾರ್ವಜನಿಕ ನೀರಿನ ವಿತರಣೆಯ ವ್ಯವಸ್ಥೆ ಈ ಪಂಚಾಯತಿನಲ್ಲಿ ಸಾಕಷ್ಟಿಲ್ಲ. ಒಂದು ಕಡೆ ಮಾತ್ರ ಇದೆ.

6. ಹೆಚ್ಚಿನ ಖಾಸಗಿ ಬಾವಿಗಳಿಗೆ ಕಟ್ಟೆ ಇಲ್ಲ. ಇದು ಜಲಮಾಲಿನ್ಯಕ್ಕೆ ಕಾರಣವಾಗಿದೆ.

7. ಕೆಲವು ಕೋಲನಿಗಳ ಕುಡಿಯುವ ನೀರಿನ ಸಮಸ್ಯೆ ಈ ವರೆಗೆ ಬಗೆಹರಿಸಲ್ಪಟ್ಟಿಲ್ಲ.

8. ಮಳೆ ನೀರನ್ನು ಶೇಖರಿಸಿಡಲು ಯಾವುದೇ ವಿಧಾನಗಳು ಈವರೆಗೆ ಇಲ್ಲ.

9. ಮನೆ ಬಳಕೆಯ ಬಾವಿಗಳ ನೀರು ಕೃಷಿ ನೀರಾವರಿಗೂ ಉಪಯೋಗಿಸಲ್ಪಡುತ್ತದೆ.

10. ನಿರಂತರವಾಗಿ ನೀರೆತ್ತುವುದರಿಂದ ಬಾವಿಗಳ ಸಂಗ್ರಹಣ ಸಾಮರ್ಥ್ಯವು ಕಮ್ಮಿಯಾಗುತ್ತದೆ.

ಸಾಧ್ಯತೆಗಳು

1. ಜಲಶೇಖರಣಾ ಹೊಂಡಗಳಲ್ಲಿ (Water Shed) ಮಳೆಗಾಲದಲ್ಲಿ ನೀರು ಶೇಖರಿಸಬೇಕು.

2. ಪಂಚಾಯತಿನಲ್ಲಿರುವ ನೀರು ಶೇಖರಣಾ ಪ್ರದೇಶಗಳನ್ನು ಗುರುತಿಸಿ ನೀರು ಶೇಖರಣಾ ಮಾರ್ಗಗಳನ್ನು ಕೈಗೊಳ್ಳಬೇಕು.

3. ಕುಡಿಯುವ ನೀರಿನ ಸಮಸ್ಯೆಯು ಹೆಚ್ಚಾಗಿ ಇರುವ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಮಾಡಬೇಕು.

4. ಜಾಗದ ಪರಿಮಿತಿಯನ್ನು ಗಣನೆಗೆ ತೆಗೆಯದೆ ಎಲ್ಲರಿಗೂ ಬಾವಿ ತೋಡಲು ಸಾಲ ನೀಡಬೇಕು.

5. ಬೇಸಿಗೆಕಾಲದಲ್ಲಿ ಬತ್ತಿ ಹೋಗುವ ಬಾವಿಗಳನ್ನು ಹೆಚ್ಚು ಆಳಗೊಳಿಸಬೇಕು.

6. ಕೋಲನಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ತುರ್ತು ಕ್ರಮವನ್ನು ಕೈಗೊಳ್ಳಬೇಕು.

7. ಕೊಳವೆ ಬಾವಿಗಳ ದುರಸ್ತಿಯನ್ನು ತಕ್ಕ ಸಮಯದಲ್ಲಿ ಕೈಗೊಳ್ಳಬೇಕು. ಕಬ್ಬಿಣದ ವಾಸನೆಯನ್ನು ಇಲ್ಲವಾಗಿಸಲು ಕೊಳವೆ ಬಾವಿಗಳಲ್ಲಿ ಪಿ.ವಿ.ಸಿ. ಪೈಪುಗಳನ್ನೇ ಉಪಯೋಗಿಸಬೇಕು.

8. ಸಾರ್ವಜನಿಕ ಬಾವಿಗಳನ್ನು ಮಲಿನಗೊಳಿಸುವವರ ವಿರುದ್ಧ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

9. ಎಲ್ಲ ಕುಟುಂಬಗಳಿಗೂ ವರ್ಷವಿಡೀ ಶುದ್ಧ ನೀರು ದೊರೆಯುತ್ತದೆಯೋ ಎಂದು ತಿಳಿದಿರಬೇಕು.

10. ಶುದ್ಧ ನೀರಿನ ಅಭಾವವು ಆರೋಗ್ಯಕ್ಕೆ ಹಾನಿಕರ ಎಂಬ ವಿಚಾರವನ್ನು ಜನರಿಗೆ ತಿಳಿಯುವಂತೆ ಮಾಡಬೇಕು.

11. ಸಾಕಷ್ಟು ಪ್ರಮಾಣದಲ್ಲಿ ನೀರು ಸಿಗದ ಬಾವಿಗಳ ಮತ್ತು ಕೊಳವೆ ಬಾವಿಗಳಿಗೆ ಬೋಕಾಗಿ ಪ್ರತಿವರ್ಷವೂ ಖರ್ಚುಮಾಡುವ ಹಣವನ್ನು ಒಟ್ಟು ಸೇರಿಸಿ ಹೆಚ್ಚಿನ ಜನರಿಗೆ ಫಲಪ್ರದವಾಗುವಂತೆ ವಿಪುಲವಾದ ಸ್ಕೀಮುಗಳನ್ನು ತಯಾರಿಸಬೇಕು.

ಸಾರ್ವಜನಿಕ ಆರೋಗ್ಯ

ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ನಮ್ಮ ಪಂಚಾಯತು ಅತ್ಯಂತ ಹಿಂದುಳಿದಿದೆ. ಈ ಪಂಚಾಯತಿನ ಜಯನಗರದಲ್ಲಿರುವ ಸರಕಾರೀ ಪ್ರಾಥಮಿಕ ಆರೋಗ್ಯ ಕೇಂದ್ರವು ಏಕೈಕ ಆರೋಗ್ಯಕೇಂದ್ರವಾಗಿದೆ. ಇತರ ಯಾವುದೇ ಸರಕಾರೀ

ಆಸ್ಪತ್ರೆಗಳಾಗಲೀ, ಔಷಧಿ ಕೇಂದ್ರಗಳಾಗಲೀ ಇಲ್ಲಿಲ್ಲ. ಜಯನಗರ, ಮವ್ವಾರು, ವಿತಡ್ಕ, ಬೆಳಿಂಜ, ನೇರಪ್ಪಾಡಿ ಎಂಬೀ ಕಡೆಗಳಲ್ಲಿ ಖಾಸಗೀ ಆಸ್ಪತ್ರೆಗಳಿವೆ. ಆದರೆ ಯಾವುದೇ ತರದ ಒಳರೋಗಿಗಳನ್ನಾಗಿ ಚಿಕಿತ್ಸೆ ನೀಡುವ ಆಸ್ಪತ್ರೆಗಳು ಇಲ್ಲಿಲ್ಲ. ಪ್ರಧಾನವಾಗಿ ಈ ಪ್ರದೇಶದಲ್ಲಿ ಆಯುರ್ವೇದ, ಅಲೋಪತಿ, ಹೋಮಿಯೋಪತಿ ಚಿಕಿತ್ಸಾ ವಿಧಾನಗಳನ್ನು ಜನರು ಸ್ವೀಕರಿಸಿದ್ದಾರೆ. ಪ್ರಸ್ತುತ ಪರಂಪರಾಗತ ರೀತಿಯಲ್ಲಿ ಆಯುರ್ವೇದ ಚಿಕಿತ್ಸೆ ನೀಡುವ ವೈದ್ಯರು ಪಂಚಾಯತಿನಲ್ಲಿ ಇರುವುದು ಸಂತೋಷದ ಸಂಗತಿ. ಕೆಲವು ವರ್ಗದ ಜನರು ಇಂದಿಗೂ ಮೂಢನಂಬಿಕೆಯಲ್ಲಿ ವಿಶ್ವಾಸವುಳ್ಳವರಾಗಿದ್ದು ಸರಿಯಾದ ಚಿಕಿತ್ಸೆಯನ್ನು ಪಡೆಯಲು ವಿಫಲರಾಗುತ್ತಿದ್ದಾರೆ.

ಬಹುಪಾಲು ಜನರು ಆರೋಗ್ಯರಕ್ಷಣೆಯತ್ತ ಗಮನ ಹರಿಸುವುದಿಲ್ಲ. 20 ಕೋಲನಿಗಳಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಆರೋಗ್ಯರಕ್ಷಣೆಯ ಪ್ರಾಧಾನ್ಯವನ್ನು ತಿಳಿದುಕೊಂಡಿಲ್ಲ. ಅನಾರೋಗ್ಯಕರ ಪರಿಸರವು ಈ ಕೋಲನಿಗಳ ಸುತ್ತುಮುತ್ತ ಕಂಡು ಬರುತ್ತದೆ. ಪರಿಸರ ನೈರ್ಮಲ್ಯದ ಕೊರತೆ ಈ ಪಂಚಾಯತಿನಲ್ಲಿ ಧಾರಾಳ ಇದೆ. ದಾರಿದ್ರ್ಯ ರೇಖೆಗಿಂತ ಕೆಳಗಿರುವ 1300 ಕುಟುಂಬಗಳಲ್ಲಿ 1161ಕ್ಕಿಂತ ಅಧಿಕ ಕುಟುಂಬಗಳು ಪಾಯಿಖಾನೆಯ ಸೌಲಭ್ಯವನ್ನು ಹೊಂದಿಲ್ಲ. ಈ ಕುಟುಂಬಗಳಿಗೆ ವಿವಿಧ ಯೋಜನೆಗಳ ಮುಖಾಂತರ 46 ಪಾಯಿಖಾನೆಗಳನ್ನು ಮಾತ್ರ ಈ ತನಕ ನಿರ್ಮಿಸಿಕೊಡಲಾಗಿದೆ. ಭೌಗೋಳಿಕ ಪ್ರತ್ಯೇಕತೆ, ಸಾಂಪತ್ತಿಕ ಕೊರತೆಯಿಂದಾಗಿ ಈ ಸಮಸ್ಯೆ ಪರಿಹಾರವಾಗುತ್ತಿಲ್ಲ.

ಈ ಪಂಚಾಯತಿನ ಸ್ತ್ರೀಯರಲ್ಲಿ ಕೇವಲ 40% ಮಾತ್ರ ಪ್ರಸವಕ್ಕಾಗಿ ಆಸ್ಪತ್ರೆಗಳನ್ನು ಆಶ್ರಯಿಸುತ್ತಾರೆ. ಪ್ರಸವಾನಂತರ ತಾಯಿ ಮತ್ತು ಮಗುವಿನ ಶುಶ್ರೂಷಾ ಕ್ರಮವು ಸಾಕಷ್ಟು ತೃಪ್ತಿಕರವಾಗಿರುವುದಿಲ್ಲ. ಆದರೆ ಪ್ರತಿರೋಧ ಚುಚ್ಚು ಮದ್ದಿನ ಬಗ್ಗೆ ಜನರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಎಲ್ಲಾ ಮಕ್ಕಳಿಗೂ ರೋಗಪ್ರತಿರೋಧಕ ಚುಚ್ಚು ಮದ್ದನ್ನು ಕೊಡಲಾಗುತ್ತದೆ. ಕಳೆದ ಐದು ವರ್ಷಗಳಿಂದೀಚೆಗೆ ಹೆರಿಗೆ ಸಂಬಂಧಿಸಿದ ಯಾವುದೇ ಸಾವು ವರದಿಯಾಗಲಿಲ್ಲ. ಪೋಷಕಾಹಾರದ ಕೊರತೆಯಿಂದ ಹಲವು ರೋಗಗಳು ಉಂಟಾಗುತ್ತವೆ. ಅನೀಮಿಯಾ (ರಕ್ತಹೀನತೆ) ಇವುಗಳಲ್ಲಿ ಪ್ರಧಾನವಾದುದಾಗಿದೆ. ಮಹಿಳಾ ಆರೋಗ್ಯ ಸಂಘ, ಆಗಾಗ ಸಭೆ ಸೇರುತ್ತಿದ್ದರೂ ಅದರಲ್ಲಿ ಭಾಗವಹಿಸುವವರ ಸಂಖ್ಯೆ ತೀರಾ ಕಡಿಮೆ.

ಕುಂಬಡಾಜೆ ಪ್ರಾಥಮಿಕ ಆರೋಗ್ಯಕೇಂದ್ರದಲ್ಲಿ ಸ್ಥಿರವಾದ ಒಬ್ಬರು ವೈದ್ಯರು ಒಂಬತ್ತು ಮಂದಿ ಆರೋಗ್ಯ ಕಾರ್ಯಕರ್ತರೂ ಇದ್ದಾರೆ. ಆದರೆ ಒಟ್ಟು 13 ಸಿಬಂದಿಗಳ ಅಗತ್ಯವಿದೆ. ಮೇಲ್ಚಿಚಾರಕರ ಅಭಾವವೂ ಎಲ್ಲಾ ಕಾರ್ಯಗಳನ್ನು ಹೆಚ್ಚಾಗಿ ಬಾಧಿಸುತ್ತದೆ. ಮದ್ದಿನ ಸಂಗ್ರಹವು ತೃಪ್ತಿಕರವಾಗಿದೆ. ಆದರೆ ಇತರ ಸವಲತ್ತುಗಳ ಕೊರತೆಯು ಪ್ರಧಾನವಾಗಿದೆ. ಸರಾಸರಿ 45 ರೋಗಿಗಳು ಆಸ್ಪತ್ರೆಗೆ ಪ್ರತಿದಿನವೂ ಬರುತ್ತಿದ್ದಾರೆ. ವೈದ್ಯರ ಸೇವೆ ಎಲ್ಲ ದಿವಸಗಳಲ್ಲೂ ಮಧ್ಯಾಹ್ನದವರೆಗೆ ಮಾತ್ರ ಲಭ್ಯವಿದೆ.

ಸಮಸ್ಯೆಗಳು

1. ಪ್ರಸ್ತುತವಿರುವ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳು ತೀರಾ ತೃಪ್ತಿಕರವಾಗಿಲ್ಲ.

2. ಖಾಸಗೀ ರಂಗದಲ್ಲೂ ಉತ್ತಮ ಚಿಕಿತ್ಸಾ ಸೌಕರ್ಯಗಳು ಇಲ್ಲ.

3. ಸುರಕ್ಷಿತವಲ್ಲದ ಚಿಕಿತ್ಸಾ ವಿಧಾನಗಳನ್ನು ಇಂದಿಗೂ ಜನರು ಸ್ವೀಕರಿಸುತ್ತಿದ್ದಾರೆ.

4. ಪ್ರಸ್ತುತವಿರುವ ಸರಕಾರೀ ಆಸ್ಪತ್ರೆಯ ಸೌಲಭ್ಯವು ಪಂಚಾಯತಿನ ಎಲ್ಲಾ ಭಾಗಗಳ ಜನರಿಗೆ ಲಭ್ಯವಾಗುವುದಿಲ್ಲ.

5. ಕುಟುಂಬ ಯೋಜನಾ ಕೇಂದ್ರಗಳ ಸೇವೆ ಎಲ್ಲಾ ಕುಟುಂಬಗಳಿಗೂ ತಲುಪುತ್ತಿಲ್ಲ. ಕ್ರಮಪ್ರಕಾರ ಮನೆ ಸಂದರ್ಶನ ನಡೆಯುತ್ತಿಲ್ಲ.

6. ಮಕ್ಕಳ ಆರೋಗ್ಯದತ್ತ ಸಾಕಷ್ಟು ಗಮನ ಹರಿಸುತ್ತಿಲ್ಲ.

7. 80%ಕ್ಕಿಂತಲೂ ಹೆಚ್ಚಿನ ಮನೆಗಳಲ್ಲಿ ಪಾಯಿಖಾನೆ ವ್ಯವಸ್ಥೆ ಇಲ್ಲ.

8. ಕಾಲನಿಗಳ ಪರಿಸರವು ಅನಾರೋಗ್ಯಕರವಾಗಿದೆ.

9. ಪ್ರಸ್ತುತವಿರುವ ಆಸ್ಪತ್ರೆಯಲ್ಲಿ ಸಾಕಷ್ಟು ಸ್ಥಳ ಸೌಕರ್ಯವಿಲ್ಲ.

10. ಶುದ್ಧ ನೀರಿನ ಕೊರತೆಯಿಂದ ಉಂಟಾಗುವ ರೋಗಗಳು ಧಾರಾಳವಾಗಿವೆ. ಕಳೆದ ಒಂದು ವರ್ಷದಲ್ಲಿ ಈ ಸಂಬಂಧವಾಗಿ 250 ರೋಗಿಗಳ ಹೆಸರು ದಾಖಲಾಗಿದೆ.

11. ಮಕ್ಕಳ ಪೋಷಕಾಹಾರದ ಕೊರತೆ ಮತ್ತು ಶುಚಿತ್ವದ ಕೊರತೆಯು ಹಲವಾರು ರೋಗಗಳಿಗೆ ಕಾರಣವಾಗುತ್ತಿದೆ.

ಸಾಧ್ಯತೆಗಳು

1. ಆರೋಗ್ಯ ಕೇಂದ್ರಗಳಿಲ್ಲದ ಎಲ್ಲಾ ವಾರ್ಡುಗಳಲ್ಲಿ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಬೇಕು.

2. ಜಯನಗರದ ಆಸ್ಪತ್ರೆಯನ್ನು ವಿಸ್ತರಿಸಿ ಕನಿಷ್ಠ 10 ಮಂದಿ ಒಳರೋಗಿಗಳನ್ನು ಶುಶ್ರೂಷೆ ಮಾಡುವಂತೆ ವ್ಯವಸ್ಥೆಗೊಳಿಸಬೇಕು.

3. ಪ್ರಾದೇಶಿಕ ಭಾಷೆ ಬಲ್ಲ ಹೆಚ್ಚುವರಿ ವೈದ್ಯರನ್ನು ನೇಮಿಸಬೇಕು.

4. ನೀರಿನಿಂದ ಉಂಟಾಗುವ ರೋಗಗಳನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳಬೇಕು.

5. ಆರೋಗ್ಯ ಕಾರ್ಯಕರ್ತರು ಮತ್ತು ಸಾರ್ವಜನಿಕರ ನಡುವೆ ಹೆಚ್ಚಿನ ಸಹಕಾರೀ ಮನೋಭಾವದ ಅಗತ್ಯವಿದೆ.

6. ಪರಿಸರ ನೈರ್ಮಲ್ಯದ ಬಗ್ಗೆ ಜನರನ್ನು ಜಾಗೃತಗೊಳಿಸಬೇಕು.

7. ಪಂಚಾಯತಿನಲ್ಲಿ ಸರಕಾರಿ ಆಯುರ್ವೇದ ಆಸ್ಪತ್ರೆ ತೆರೆಯಬೇಕಾಗಿದೆ.

8. ಮೂಢನಂಬಿಕೆಗಳ ಚಿಕಿತ್ಸಾ ವಿಧಾನಗಳ ವಿರುದ್ಧ ತಕ್ಕ ಕ್ರಮ ಕೈಗೊಳ್ಳಬೇಕು.

9. ಆರ್ಥಿಕವಾಗಿ ಹಿಂದುಳಿದ ಜನರ ಆರೋಗ್ಯದ ಬಗ್ಗೆ ಪ್ರತ್ಯೇಕ ಯೋಜನೆಗಳನ್ನು ತಯಾರಿಸಬೇಕು.

10. ಅಗತ್ಯವಿರುವ ಎಲ್ಲಾ ರೀತಿಯ ಔಷಧಿಗಳು ಆಸ್ಪತ್ರೆಯಿಂದಲೇ ದೊರೆಯುವಂತೆ ಮಾಡಬೇಕು.

11. ಆರೋಗ್ಯ ರಕ್ಷಣೆಯ ಬಗ್ಗೆ ಜನರಿಗೆ ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ನಡೆಸಬೇಕು.

12. ಆರೋಗ್ಯ ಸಂಸ್ಥೆಯ ನೌಕರರಿಗೆ ಸೂಕ್ತವಾದ ವಸತಿ ಸೌಕರ್ಯವನ್ನೊದಗಿಸಬೇಕು.

ವರ್ಷ	ಜನನ	ಮರಣ
1991	199	72
92	181	71
93	193	68
94	160	68
95	149	63
96	116	65
ಮೊತ್ತ	998	407

ಪಾಯಿಖಾನೆ ಇಲ್ಲದ ಮನೆಗಳು (IRDP)

ವಾರ್ಡು	ಕುಟುಂಬಗಳ ಸಂಖ್ಯೆ
I	125
II	141
III	123
IV	154
V	51
VI	125
VII	281
VIII	161

ಆಸ್ಪತ್ರೆಗಳು

ಕ್ರಮಸಂಖ್ಯೆ	ಸಂಸ್ಥೆ	ವಾರ್ಡು
1	ಸರಕಾರೀ ಗ್ರಾಮೀಣ ಪ್ರಾಥಮಿಕ ಆರೋಗ್ಯಕೇಂದ್ರ	VIII
2	ಖಾಸಗಿ ಚಿಕಿತ್ಸಾಲಯ - ಜಯನಗರ	VIII
3	ಖಾಸಗಿ ಚಿಕಿತ್ಸಾಲಯ - ಮಚ್ಚಾರು	IV
4	ಖಾಸಗಿ ಚಿಕಿತ್ಸಾಲಯ - ಏತಡ್ಕ	I
5	ಖಾಸಗಿ ಚಿಕಿತ್ಸಾಲಯ - ಬೆಳಿಂಜ	VII
6	ಖಾಸಗಿ ಚಿಕಿತ್ಸಾಲಯ - ಕುಂಬಡಾಜೆ	VII

ಕುಟುಂಬ ಕಲ್ಯಾಣ ಕೇಂದ್ರಗಳು

ಕ್ರಮಸಂಖ್ಯೆ	ಸ್ಥಳ	ಸ್ವಂತಕಟ್ಟಡ ಉಂಟು/ಇಲ್ಲ	ವಾರ್ಡು
1	ಕುಂಬಡಾಜೆ	ಇಲ್ಲ	VII
2	ಏತಡ್ಕ	ಉಂಟು	I
3	ಬೆಳಿಂಜ	ಇಲ್ಲ	VII
4	ಉಬ್ರಂಗಳ	ಇಲ್ಲ	VI
5	ಜಯನಗರ	ಉಂಟು	VIII

ಕುಡಿಯುವ ನೀರು - ಸಾರ್ವಜನಿಕ ಸೌಕರ್ಯಗಳು

ವಿಭಾಗ	ಸಂಖ್ಯೆ
ಬಾವಿ	24
ಟಾಂಕಿ	4
ಕೊಳವೆಬಾವಿ	32

ವಿವಿಧ ಪದ್ಧತಿಗಳಿಂದ ನಿರ್ಮಿಸಿದ ಪಾಯಿಖಾನೆಗಳು

ವಾರ್ಡು	ಮಂಜೂರಾದ ಪಾಯಿಖಾನೆಗಳ ಸಂಖ್ಯೆ
I	1
II	3
III	9
IV	14
V	7
VI	4
VII	1
VIII	6

ಮಕ್ಕಳಿಗ ನೀಡಿರುವ ಪ್ರತಿರೋಧಕ ಚುಚ್ಚುಮದ್ದುಗಳು

ವಿವರ	ಸಂಖ್ಯೆ
ಬಿ. ಸಿ. ಜಿ.	290
ಒ. ಪಿ. ವಿ.	264
ಡಿ. ಪಿ. ಟಿ.	264
ನೀರುಕೋಟ್ಲೆ	315
ಒ. ಪಿ. ವಿ. ಬೂಸ್ಟರ್	281
ಡಿ. ಪಿ. ಟಿ. ಬೂಸ್ಟರ್	232

ಕೈಗಾರಿಕೆ

ಕೃಷಿ ರಂಗದಲ್ಲಿ ಉಂಟಾದ ಪುರೋಗತಿಯನ್ನು ಅವಲೋಕಿಸಿದಾಗ ಕೈಗಾರಿಕಾ ರಂಗದಲ್ಲಿ ಆ ಪುರಗೋತಿ ಕಂಡು ಬರುವುದಿಲ್ಲ. ಪರಂಪರಾಗತ ಕರಕುಶಲ ಕಲೆಗಳಿಗೆ ವಿನಾಶ ಸಂಭವಿಸುತ್ತದೆ. ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು, ಮಡಿಕೆ ಮಾಡುವುದು, ಹಾಳೆ ಟೊಪ್ಪಿ ತಯಾರಿ ಇತ್ಯಾದಿಗಳಿಗೆ ಪ್ರಚಾರವಿಲ್ಲದಾಗಿದೆ. ಮಡಿಕೆ ನಿರ್ಮಾಣಕ್ಕೆ ಸಾಕಷ್ಟು ಪ್ರೋತ್ಸಾಹ ಸಿಗುವುದಿಲ್ಲ. ಕಬ್ಬಿಣದ ಸಾಮಾಗ್ರಿಗಳ ತಯಾರಿ ಹಾಗೂ ಮರದ ಸಾಮಾಗ್ರಿಗಳ ತಯಾರಿ ಇವುಗಳೆಲ್ಲ ಇಂದು ಕಂಡು ಬರುವುದಿಲ್ಲ.

ತೆಂಗಿನ ಎಣ್ಣೆ ಮಿಲ್, ಅಕ್ಕಿ ಹಾಗೂ ಹಿಟ್ಟಿನ ಗಿರಣಿ, ಒಂದು ಸಾಬೂನು ನಿರ್ಮಾಣ ಸಂಸ್ಥೆ, ಒಂದು ದಿನೇಶ್ ಬೀಡಿ ಕಂಪೆನಿ, ಒಂದು ಉಪ್ಪಿನಕಾಯಿ ತಯಾರಿಯ ಕುಟುಂಬ ಹಾಗೂ ಸುಮಾರು ಬೀಡಿ ಕಂಪೆನಿಗಳ ಯೂನಿಟ್‌ಗಳು ನಮ್ಮ ಪಂಚಾಯತಿನ ಪ್ರಧಾನ ಕೈಗಾರಿಕಾ ಘಟಕಗಳಾಗಿವೆ. ಕೈಗಾರಿಕಾ ಕಾರ್ಮಿಕರಲ್ಲಿ ಬಹುಪಾಲು ಜನರು ಪ್ರಾದೇಶಿಕ ಬೀಡಿ ಕಂಪೆನಿಗಳ ಕಾರ್ಮಿಕರಾಗಿದ್ದಾರೆ. ಒಟ್ಟು ಇರುವ 1350 ಕೈಗಾರಿಕಾ ಕಾರ್ಮಿಕರಲ್ಲಿ 1200ಕ್ಕಿಂತಲೂ ಹೆಚ್ಚು ಜನರು ಬೀಡಿ ಕಾರ್ಮಿಕರಾಗಿರುತ್ತಾರೆ. ಆಗೊಮ್ಮೆ ಈಗೊಮ್ಮೆ ಕಾರ್ಯವೆಸಗುವ ಬೀಡಿ ಬ್ರಾಂಚುಗಳು ನಮ್ಮ ಪಂಚಾಯತಿನಲ್ಲಿವೆ. ಇವರ ಕೈಕೆಳಗೆ ಕಾರ್ಯವೆಸಗುವವರಲ್ಲಿ ಹೆಚ್ಚಿನವರು ಮಹಿಳೆಯರಾಗಿರುತ್ತಾರೆ. ಬೀಡಿ ತಯಾರಿಸಲು ಬೇಕಾದ ಎಲೆ, ಹುಡಿ, ಇತ್ಯಾದಿಗಳನ್ನು ಇಲ್ಲಿಂದ ಪಡಕೊಂಡು ಮನೆಯಲ್ಲಿ ಬಿಡುವಿನ ವೇಳೆಯಲ್ಲಿ ಬೀಡಿಸುತ್ತುವರು. ಈ ಪ್ರಾದೇಶಿಕ ಬೀಡಿ ಕಂಪೆನಿಗಳ ಬ್ರಾಂಚುಗಳು ಜನರನ್ನು ಶೋಷಣೆ ಮಾಡುತ್ತವೆ. ವಿದ್ಯಾಭ್ಯಾಸವಿಲ್ಲದಿರುವುದು ಹಾಗೂ ಸಂಘಟಿತರಲ್ಲದಿರುವುದು ಈ ಶೋಷಣೆಗೆ ಪೂರಕವಾಗುತ್ತವೆ.

ಕೈಗಾರಿಕಾ ರಂಗವನ್ನು ಪ್ರೋತ್ಸಾಹಿಸಲು ಇಲ್ಲಿ ಸಹಕಾರಿ ಸಂಘಗಳು ಅಥವಾ ತರಬೇತಿ ಕೆಂದ್ರಗಳು ಇಲ್ಲ. ಕೈಗಾರಿಕಾ ರಂಗಕ್ಕೆ ಧೈರ್ಯದಿಂದ ಮುನ್ನುಗ್ಗುವ ಉದ್ಯಮಿಗಳ ಅಭಾವ ಪ್ರಧಾನ ಸಮಸ್ಯೆಯಾಗಿ ಕಂಡುಬರುತ್ತದೆ. ಸರಿಯಾದ ಆರ್ಥಿಕ ಸಹಾಯದ ಲಭ್ಯತೆ, ಸಲಹೆ ಸೂಚನೆಗಳ ವಿವರ, ಸರಿಯಾದ ಮಾರುಕಟ್ಟೆ ಇವು ಇಲ್ಲದಿರುವುದೇ ಈ ರಂಗದ ಪ್ರಧಾನ ಸಮಸ್ಯೆಗಳಾಗಿವೆ. ಈ ರಂಗದ ಸಾಧ್ಯತೆಯ ಕುರಿತು ಜನರಿಗೆ ತಿಳಿದಿಲ್ಲ. ತಾಂತ್ರಿಕ ವಿದ್ಯಾಸಂಪನ್ನರಾದ ಪೌರರೂ ಈ ಪಂಚಾಯತಿನಲ್ಲಿ ಇಲ್ಲ. ಇಲೆಕ್ಟ್ರೋನಿಕ್ಸ್, ಎಂಜಿನಿಯರಿಂಗ್ ವಲಯಗಳ ಸಾಧ್ಯತೆಗಳನ್ನು ಫಲಪ್ರದವಾಗಿ ಉಪಯೋಗಿಸಲು ಇಲ್ಲಿ ಪರಿಣತರ ಅಭಾವ ಕಂಡುಬರುತ್ತದೆ. ಸರಕಾರದ ಅಶ್ರದ್ಧೆ ಹಾಗೂ ವಿದ್ಯುಚ್ಛಕ್ತಿಯ ಅಭಾವ ಉದ್ಯಮಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಸಮಸ್ಯೆಗಳು

1. ಉತ್ಸಾಹಿ ಪರಿಣತ ಉದ್ಯಮಿಗಳ ಅಭಾವ ಪ್ರಧಾನ ಸಮಸ್ಯೆಯಾಗಿದೆ.
2. ಉದ್ಯಮ ಘಟಕಗಳಿಗೆ ಅಗತ್ಯವಾದ ಪರಿಣತಿಯನ್ನು ಪಡೆದವರು ಇಲ್ಲಿ ಇಲ್ಲ.
3. ಬೀಡಿ ಉದ್ಯಮ ರಂಗದ ಉದ್ಯೋಗ ಸಾಧ್ಯತೆಗಳು ಕಡಿಮೆಯಾಗುತ್ತಿವೆ.
4. ಎಂಜಿನಿಯರಿಂಗ್, ಇಲೆಕ್ಟ್ರೋನಿಕ್ಸ್ ವಲಯಗಳ ಸಾಧ್ಯತೆಗಳನ್ನು ಉಪಯೋಗಿಸುತ್ತಿಲ್ಲ.
5. ಕೈಗಾರಿಕಾ ಘಟಕಗಳಿಗಿರುವ ಸಾಲ ಸೌಲಭ್ಯ ವ್ಯವಸ್ಥೆಗಳು ಬಹಳ ಸಂಕೀರ್ಣವಾದುದಾಗಿದೆ.
6. ಸರಕಾರದ ವಿವಿಧ ಏಜನ್ಸಿಗಳ ಸಂಪರ್ಕ ತೃಪ್ತಿಕರವಲ್ಲ.
7. ಪಂಚಾಯತಿನಲ್ಲಿ ಕೈಗಾರಿಕಾ ಸಾಧ್ಯತೆಗಳು - ಈ ವಿಷಯದ ಕುರಿತು ಅಧ್ಯಯನಗಳೋ, ಚರ್ಚೆಗಳೋ ನಡೆದಿಲ್ಲ.
8. ಆಯುರ್ವೇದ ಔಷಧ ಸಸ್ಯಗಳ ಸಂಗ್ರಹ ಪಂಚಾಯತಿನಲ್ಲಿದ್ದರೂ ಅವುಗಳಿಗೆ ಬೆಡಿಕೆಯಿಲ್ಲ.

ಸಾಧ್ಯತೆಗಳು

1. ಮಾಂಸ, ಮೊಟ್ಟೆ ಇತ್ಯಾದಿ ಅಗತ್ಯಗಳನ್ನು ಪೂರೈಸುವುದಕ್ಕಾಗಿ, ಕೋಳಿ ಸಾಕಣೆಯನ್ನು ಪ್ರಾರಂಭಿಸಲು ಉದ್ಯಮಿಗಳು ಮುಂದಾಗಬೇಕು. ಇದಕ್ಕಾಗಿ ಈಗ ಇತರ ಪಂಚಾಯತುಗಳನ್ನು ಆಶ್ರಯಿಸಬೇಕಾಗಿದೆ.
2. ಕೈಗಾರಿಕಾ ತಳಹದಿಯಲ್ಲಿ ಹಾಲುತ್ಪಾದನೆಗಿರುವ ಡೈರಿಫಾರ್ಮುಗಳನ್ನು ಪ್ರೋತ್ಸಾಹಿಸಬೇಕು.
3. ಕಿರು ಉದ್ಯಮವೆಂಬ ರೀತಿಯಲ್ಲಿ ಇಲೆಕ್ಟ್ರೋನಿಕ್ಸ್ ವಸ್ತುಗಳ ಉತ್ಪಾದನೆ ಮಾರಾಟ - ಇವುಗಳಲ್ಲಿ ಪರಿಣತರಾದವರು ಮುಂದೆ ಬರಬೇಕು.
4. ಸಿದ್ಧ ಉಡುಪುಗಳ ತಯಾರಿಯಲ್ಲಿ ಅಪಾರ ಸಾಧ್ಯತೆಗಳಿವೆ. ಈ ರಂಗದಲ್ಲಿ ಪರಿಣತರಾದ ನೂರಾರು ಮಹಿಳೆಯರು ಪಂಚಾಯತಿನ ವ್ಯಾಪ್ತಿಯಲ್ಲಿದ್ದಾರೆ.
5. ಮೇಣದ ಬತ್ತಿ, ಸಾಬೂನು ಇತ್ಯಾದಿಗಳ ತಯಾರಿಯ ಘಟಕಗಳನ್ನು ತೊಡಗಬಹುದು.
6. ಉಪ್ಪಿನಕಾಯಿ, ಸಾಂಬಾರು ಹುಡಿ, ಜಾಂ, ಹಪ್ಪಳ ಇತ್ಯಾದಿಗಳ ತಯಾರಿಯನ್ನು ಮನೆಯಲ್ಲಿಯೇ ನಡೆಸಬಹುದು. ಇದಕ್ಕಾಗಿ ಸಾಲ ಸೌಲಭ್ಯ ಹಾಗೂ ತರಬೇತಿಯನ್ನು ಒದಗಿಸಿಕೊಡಬೇಕು.
7. ಅಣಬೆ ಕೃಷಿ, ಓರ್ಕಿಡ್ ಕೃಷಿ - ಈ ರಂಗಗಳ ಉದ್ಯೋಗ ಸಾಧ್ಯತೆಗಳ ಕುರಿತು ಚಿಂತಿಸಬೇಕು.
8. ಗೇರುಬೀಜ, ಗೇರುಹಣ್ಣು - ಇವುಗಳ ಸಂಸ್ಕರಣೆಯಲ್ಲಿ ತರಬೇತಿಯನ್ನು ನೀಡಬೇಕು.
9. ಔಷಧೀಯ ಸಸ್ಯಗಳ ಸಂಸ್ಕರಣೆ, ಆಯುರ್ವೇದ ಔಷಧಗಳ ತಯಾರಿ - ಇವುಗಳನ್ನು ಪ್ರಾರಂಭಿಸಲು ಆರ್ಥಿಕ ಸಹಾಯ ದೊರಕಿಸಿ ಕೊಡಬೇಕು.
10. ಹಲವು ಕುಟುಂಬಗಳು ಸೇರಿ ಒಂದು ಆಡು ಸಾಕಣಾ ಕೇಂದ್ರವನ್ನು ಸ್ಥಾಪಿಸಬೇಕು.

11. ಕಂಗಿನ ಹಾಳೆಯ ತಟ್ಟೆ ನಿರ್ಮಾಣದಸಾಧ್ಯತೆಯ ಕುರಿತುಚಿಂತಿಸಬೇಕು.

12. ಆರ್ಥಿಕ ಸಹಾಯವನ್ನು ನೀಡುವಾಗ ಎದುರಾಗುವ ತೊಂದರೆಗಳನ್ನು ನಿವಾರಿಸಬೇಕು.

13. ಬೇಕರಿ ವಸ್ತುಗಳ ತಯಾರಿಯಲ್ಲಿ ತರಬೇತಿ ನೀಡಬೇಕು.

14. ಪಂಚಾಯತು ಮಟ್ಟದಲ್ಲಿ ಒಂದು ಕೈಗಾರಿಕಾ ಅಭಿವೃದ್ಧಿ ಸಮಿತಿ ರಚಿಸಬೆಕು. ಈ ಸಮಿತಿಯ ಆಶ್ರಯದಲ್ಲಿ ಕೈಗಾರಿಕೆಯ ಬಗ್ಗೆ ಸೆಮಿನಾರುಗಳು, ತರಬೇತಿ ಇತ್ಯಾದಿಗಳನ್ನು ಸಂಘಟಿಸಬಹುದು.

15. ಶಾಲಾ ಮಕ್ಕಳಿಗೆ ನೋಟು ಪುಸ್ತಕ ತಯಾರಿ, ಮೇಣದ ಬತ್ತಿ ತಯಾರಿ, ಕರಕುಶಲ ವಸ್ತುಗಳ ತಯಾರಿ - ಎಂಬೀ ವಿಷಯಗಳಲ್ಲಿ ತರಬೇತಿ ನೀಡಬೇಕು.

16. ತೆಂಗಿನ ಹಾಗೂ ಅಡಿಕೆ ನಾರನ್ನು ಉಪಯೋಗಿಸಿ ಕೆಲವು ಗುಡಿಕೈಗಾರಿಕೆಗಳನ್ನು ಆರಂಭಿಸಬೇಕು.

17. ಗೇರುಹಣ್ಣನ್ನು ಉಪಯೋಗಿಸಿ ಆಹಾರ ಪಾನೀಯಗಳ ತಯಾರಿಯನ್ನು ಆರಂಭಿಸಲು ಪ್ರೋತ್ಸಾಹಿಸುವುದು.

18. ಕಮ್ಮಾರ, ಕುಂಬಾರ ಮತ್ತು ಬಡಗಿ ಯುವಕ ಕೆಲಸಗಳಿಗೆ ಪ್ರೋತ್ಸಾಹ ನೀಡಬೇಕು.

With Best Compliments From :

MALABAR TRAVELS

BELINJA

Prop : B. Abdulla Haji

☎: 860217

With Best Compliments From :

BILAL MOTORS

BELINJA

Prop : B. A. Mohammed Shaffi

☎: 860207

ಸಾರಿಗೆ- ಚೈತನ್ಯ - ಮಾರುಕಟ್ಟೆ

ಸಾರಿಗೆ:- ಅಂಕಿ ಅಂಶಗಳ ಪ್ರಕಾರ ನಮ್ಮ ಪಂಚಾಯತಿನಲ್ಲಿ 75ಕ್ಕಿಂತಲೂ ಹೆಚ್ಚು ಮಾರ್ಗಗಳಿದ್ದರೂ ಸಾರಿಗೆ ಸೌಕರ್ಯದ ದೃಷ್ಟಿಯಿಂದ ಇವು ಕಡಿಮೆ ಎನ್ನಬಹುದು. ಈಗ ಇರುವ ಮಾರ್ಗಗಳಲ್ಲಿ ಹೆಚ್ಚಿನವುಗಳು ಕಿರಿದಾದ ರಸ್ತೆಗಳಾಗಿವೆ. ಮೂರು ಕಿಲೋಮೀಟರುಗಳಿಗಿಂತ ಉದ್ದವಿರುವ ಮಾರ್ಗಗಳ ಸಂಖ್ಯೆ 6 ಮಾತ್ರವಾಗಿರುವುದು. ರಸ್ತೆಗಳ ಸರಾಸರಿ ಉದ್ದ ಒಂದು ಕಿಲೋಮೀಟರಾಗಿರುವುದು. ಈ ರಸ್ತೆಗಳಲ್ಲಿ ಡಾಮರು ಹಾಕಿದ ರಸ್ತೆಗಳು 7. ಪಂಚಾಯತಿನ P.W.D ರಸ್ತೆಗಳು 6. ಪಂಚಾಯತು ರಸ್ತೆಗಳು 69 ಆಗಿರುವುವು.

ನಮ್ಮ ಪಂಚಾಯತಿನ ಹೆಚ್ಚಿನ ಪ್ರದೇಶಗಳಲ್ಲಿ ಸಾರಿಗೆ ಸೌಕರ್ಯವಿಲ್ಲ. ಗ್ರಾಮವಾಸಿಗಳಿಗೆ ತುರ್ತಾದ ಸಂದರ್ಭಗಳಲ್ಲಿ ಪೇಟೆ ಪಟ್ಟಣವನ್ನು ಸೇರಲು ಬಹಳ ಕಷ್ಟವಾಗುವುದು. ಈ ಪಂಚಾಯತ್ತಿನಲ್ಲಿ ಬಸ್ಸು ಸೌಕರ್ಯವು ಆರಂಭಗೊಂಡು 35 ವರ್ಷಗಳು ಸಂದರೂ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಬಸ್ಸು ಸೌಕರ್ಯವಿಲ್ಲದಿರುವುದು ಬೇಸರದ ಸಂಗತಿಯಾಗಿದೆ. ನಾರಂಪಾಡಿಯಿಂದ ಶ್ರೀ ಅನ್ನಪೂರ್ಣೇಶ್ವರೀ ಪ್ರೌಢಶಾಲೆಯ ರಸ್ತೆಯು ಮೊತ್ತಮೊದಲ ಡಾಮರು ಹಾಕಿದ ರಸ್ತೆಯಾಗಿರುವುದು. ಈ ರಸ್ತೆಗೆ 1975ರಲ್ಲಿ ಡಾಮರು ಹಾಕಿದರು. ಪಿಲಾಂಗಟ್ಟೆ-ಜಯನಗರ SC Colony ರಸ್ತೆಯು ಡಾಮರು ಹಾಕಿದ ಎರಡನೆಯ ರಸ್ತೆಯಾಗಿದೆ. ಬದಿಯಡ್ಕ-ಏತಡ್ಕ ರಸ್ತೆ ಹಾಗೂ ಪೊಡಿಪ್ಪಳ-ಬೆಳಿಂಜ ರಸ್ತೆಗೆ ಇತ್ತೀಚೆಗೆ ಡಾಮರು ಹಾಕಿದುದರ ಮೂಲಕ ಸಾರಿಗೆ ಕ್ಷೇತ್ರದಲ್ಲಿ ಅಲ್ಪ ಬದಲಾವಣೆ ಕಂಡುಬಂದಂತಾಯಿತು. ಏತಡ್ಕ ಸಂಕವು ಪೂರ್ತಿಗೊಂಡರೆ ಏತಡ್ಕದಿಂದ ಕರ್ನಾಟಕಕ್ಕಿರುವ ದಾರಿ ಸುಖಕರವಾಗುವುದು. ಬೆಳಿಂಜ-ನಾಟೆಕಲ್ಲು ರಸ್ತೆ ಸಾರಿಗೆ ಯೋಗ್ಯವಾಗುವುದರೊಂದಿಗೆ ಕರ್ನಾಟಕದ ಸುಳ್ಯಪದವಿಗಿರುವ ದಾರಿಯು ತೆರೆದು ಸಿಗುವುದು.

ಗೋಸಾಡ ಕಾಯಿಮಲೆ ಕುಂಬಡಾಜೆ ಏತಡ್ಕ ಎಂಬೀ ಸ್ಥಳಗಳಿಗೆ ಈಗ ಬಸ್ಸಿನ ಸೌಕರ್ಯವಿದೆ. ಬದಿಯಡ್ಕ-ಮುಳ್ಳೇರಿಯಾ ರಸ್ತೆ 5ಕಿ.ಮೀನ ವರೆಗೆ ನಮ್ಮ ಪಂಚಾಯತಿನ ಗಡಿಯಲ್ಲಿದೆ. ಬೆಳಿಂಜ ದಾರಿಯಾಗಿ ನೆಟ್ಟಣಿಗೆಗೆ ಬಸ್ಸು ಸೌಕರ್ಯವಿದ್ದರೂ ಇತ್ತೀಚೆಗೆ ಅದು ಸೌಕರ್ಯಪ್ರದವಾಗಿಲ್ಲ. ಬೆಳಿಂಜಕ್ಕೆ 1984ರಿಂದಲೂ ಗೋಸಾಡಕ್ಕೆ 1990ರಿಂದಲೂ ಬಸ್ಸು ಸೌಕರ್ಯವು ಆರಂಭವಾಯಿತು.

ಬಸ್ಸು ಸೌಕರ್ಯವಿಲ್ಲದಿದ್ದಾಗ ಜನರಿಗೆ ಪ್ರಧಾನವಾಗಿ ವಾಹನ ಸೌಕರ್ಯವು ಜೀಪುಗಳಾಗಿವೆ. ಒಟೋ ರಿಕ್ಷಾಗಳು ನಮ್ಮ ಪಂಚಾಯತ್ತಿನಲ್ಲಿ ಇಲ್ಲವೇ ಇಲ್ಲ. ಟೇಕ್ಸಿ ಹಾಗೂ ಜೀಪುಗಳು ಜಯನಗರದಲ್ಲಿ ಮಾತ್ರವೇ ಲಭ್ಯವಾಗಿರುವುವು.

ಪ್ರಕೃತ ಇರುವ ರಸ್ತೆಗಳೊಂದೂ ಸರಿಯಾದ ರೀತಿಯಲ್ಲಿ ಸುರಕ್ಷಿತವಲ್ಲ. ರಸ್ತೆಗಳೆಲ್ಲ ಗುರುತಿಸಲಾಗದ ರೀತಿಯಲ್ಲಿ ಕುಸಿದು ಹೋಗಿರುತ್ತವೆ. ರಸ್ತೆಗಳು ಒಂದಕ್ಕೊಂದು ಸೇರಲು ಅನೇಕ ತಡೆಗಳಿರುವುದು ಸಾರಿಗೆ ಸ್ಯಕಾರ್ಯದ ಒಂದು ಪ್ರಧಾನ ಕೊರತೆಯಾಗಿರುವುದು. ಸಣ್ಣ ಸಣ್ಣ ಮಾರ್ಗಗಳು ಕೆಲವೇ ಜನರಿಗೆ ಮಾತ್ರ ಉಪಯೋಗ ಯೋಗ್ಯವಾಗಿವೆ.

ನಾಲ್ಕು ಬಸ್ಸುಗಳು ಬಂದು ಸೇರುವ ಸ್ಥಳ ಬೆಳಿಂಜವಾದರೂ ಬಸ್ಸು ನಿಲ್ಲಲು ಸರಿಯಾದ ಸ್ಥಳವಾಗಲೀ ಪ್ರಯಾಣಿಕರ ತಂಗುದಾಣವಾಗಲೀ ಇಲ್ಲಿ ಇಲ್ಲ. ಎರಡು ಬಸ್ಸುಗಳು ಬರುವ ಏತಡ್ಕದಲ್ಲೂ, ಗೋಸಾಡದಲ್ಲೂ ಸೌಕರ್ಯ ಕಡಿಮೆ.

ಹೊಸ ಬಸ್ ಸರ್ವೀಸ್ ಆರಂಭಿಸಬೇಕಾದ ಮಾರ್ಗಗಳು:

1. ಮುಳ್ಳೇರಿಯ ಗಾಡಿಗುಡ್ಡೆ ಬೆಳಿಂಜ
2. ಬದಿಯಡ್ಕ ಬೆಳಿಂಜ ಬೆಳ್ಳೂರು
3. ಬದಿಯಡ್ಕ ಏತಡ್ಕ ಪಾಣಾಜೆ ಪುತ್ತೂರು
4. ಬದಿಯಡ್ಕ ಮಾರ್ಪನಡ್ಕ ಪಾವೂರು
5. ಬದಿಯಡ್ಕ ನಾಂದ್ರೋಡು ಮುನಿಯೂರು
6. ಬದಿಯಡ್ಕ ಕುದಿಂಗಿಲ ಮಾಚಾವು
7. ಮುಳ್ಳೇರಿಯ ಮವ್ವಾರು ಮುಕ್ಕೂರು
8. ನಾರಂಪಾಡಿ ಜಯನಗರ ಏತಡ್ಕ
9. ಆಲಿಂಜ ಅಗಲ್ಪಾಡಿ ಕಾಸರಗೋಡು ಮಧೂರು ಅಡೂರು
10. ಬದಿಯಡ್ಕ ಏತಡ್ಕ ಸುಳ್ಯಪದವು.

ಸಮಸ್ಯೆಗಳು

1. ಪ್ರಸ್ತುತವಿರುವ ಮಾರ್ಗಗಳು ಶೋಚನೀಯಾವಸ್ಥೆಯಲ್ಲಿವೆ.
2. ಹೆಚ್ಚಿನ ಮಾರ್ಗಗಳ ಬದಿಗಳಲ್ಲಿ ಕಣಿಗಳಿಲ್ಲ. ಮಾರ್ಗದಲ್ಲೇ ನೀರು ಹರಿದು ಧಾರಾಳ ಕಣಿಗಳಾಗಿವೆ.
3. ಮಾರ್ಗಗಳ ನಿರ್ಮಾಣ ಅಶಾಸ್ತ್ರೀಯವಾಗಿದೆ.
4. ಹಲವು ಸ್ಥಳಗಳಿಗೂ ಅತ್ಯಾವಶ್ಯಕವಾಗಿ ಸಂಪರ್ಕ ಕಲ್ಪಿಸಲೂ ಮಾರ್ಗ ಸೌಕರ್ಯವಿಲ್ಲ.
5. ಮಾರ್ಗ ನಿರ್ಮಾಣಕ್ಕೆ ಹಲವರು ಸ್ಥಳ ಬಿಟ್ಟುಕೊಡಲು ಸನ್ನದ್ಧರಾಗಿಲ್ಲ.
6. ಅನೇಕ ಕಡೆಗಳಲ್ಲಿ ಮಾರ್ಗಗಳಿಗೆ ಸರಿಯಾದ ಮೋರಿಗಳಿಲ್ಲ. ಇರುವ ಮೋರಿಗಳು ಉಪಯೋಗಿಸುವಂತಿಲ್ಲ.
7. ಬಯಲುಗಳಲ್ಲಿ ನಿರ್ಮಾಣ ಮಾಡಿದ ರಸ್ತೆಗಳ ಸ್ಥಿತಿಯು ತೀರಾ ಶೋಚನಾಯವಾಗಿದೆ.
8. ಭತ್ತ ಕೃಷಿ ಮಾಡುವ ಗದ್ದಬೆಗಳಲ್ಲಿ ಮಾರ್ಗ ನಿರ್ಮಿಸಿದಾಗ ಪೈಪುಗಳನ್ನು ಹಾಕದೇ ಇದ್ದುದರಿಂದ ನೀರು ನಿಲ್ಲುತ್ತದೆ.
9. ಮಾರ್ಗ ನಿರ್ಮಾಣ ಕಾರ್ಯದಲ್ಲೂ, ಸಾರ್ವಜನಿಕ ಕಾಮಗಾರಿಗಳನ್ನು ಮಾಡುವಾಗಲೂ P.W.D ಯವರು ಹೆಚ್ಚಿನ ಶ್ರದ್ಧೆ ವಹಿಸುವುದಿಲ್ಲ.

ಸಾಧ್ಯತೆಗಳು:-

1. ಈಗ ಇರುವ ಎಲ್ಲಾ ಮಾರ್ಗಗಳ ದುರಸ್ತಿ ಕಾರ್ಯಗಳನ್ನು ಶೀಘ್ರವಾಗಿ ಮಾಡಬೇಕು.

2. ಪ್ರಸ್ತುತವಿರುವ ಅನೇಕ ಮಾರ್ಗಗಳನ್ನು ಪರಸ್ಪರ ಸಂಪರ್ಕಿಸಿದಲ್ಲಿ ವಾಹನ ಸೌಕರ್ಯ ಅನುಕೂಲವಾಗಬಹುದು. ಸಾರಿಗೆ ಸುಗಮವಾಗಬಹುದು.

3. ಮಾರ್ಗಗಳಲ್ಲೇ ನೀರು ಹೋಗದಂತೆ, ಮೋರಿಗಳನ್ನು ಕಣಿಗಳನ್ನೂ ಕ್ಲಪ್ತ ಸಮಯದಲ್ಲಿ ನಿರ್ಮಿಸಬೇಕು.

4. ಅವಶ್ಯವಿರುವ ಸ್ಥಳಗಳಲ್ಲೆಲ್ಲಾ ಪ್ರಯಾಣಿಕರ ತಂಗುದಾಣಗಳನ್ನು ನಿರ್ಮಿಸಬೇಕು.

5. ಆಯಾ ಪ್ರದೇಶದ ಮಾರ್ಗಗಳ ಸಂರಕ್ಷಣೆಯನ್ನು ಮಾಡಲು ಆಯಾ ಪ್ರದೇಶದ ಜನಪರ ಸಮಿತಿಗಳಿಗೆ ಬಿಟ್ಟು ಕೊಡಬೇಕು.

6. ಏತಡ್ಕ ಸಂಕದ ಕೆಲಸವನ್ನು ಸಮರೋಪಾದಿಯಲ್ಲಿ ನಿರ್ಮಿಸಬೇಕು.

7. ಬದಿಯಡ್ಕ ಅಗಲ್ಪಾಡಿ ಮಾರ್ಪನಡ್ಕ ಮಾರ್ಗವನ್ನು ಅಗಲಮಾಡಿ ಅಗಲ್ಪಾಡಿ ಸಂಕವನ್ನು ಪುನರ್ ನಿರ್ಮಿಸಬೇಕು.

8. ಕೆಲವು ಅಗತ್ಯವಿರುವ ಮಾರ್ಗಗಳಲ್ಲಿ K.S.R.T.C ಬಸ್ಸುಗಳನ್ನು ಓಡಿಸುವಂತೆ ಮಾಡಿ ಪ್ರಯಾಣಿಕರ ಯಾತ್ರಾ ಅಸೌಕರ್ಯವನ್ನು ಕಡಿಮೆ ಮಾಡಬೇಕು.

9. ಮಾರ್ಗಗಳ ಬದಿಯಲ್ಲಿರುವ ಪೊರಂಬೋಕು ಸ್ಥಳವನ್ನು ಆಕ್ರಮಿಸುವುದನ್ನು ತಡೆಗಟ್ಟಬೇಕು.

10. ಅಗಲ ಕಿರಿದಾದ ರಸ್ತೆಗಳಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಬೇಕು.

11. ಜನರ ಸಹಕಾರದಿಂದ ಗ್ರಾಮೀಣ ಮಾರ್ಗಗಳ ನಿರ್ಮಾಣ ಮಾಡಬೇಕು.

ಚೈತನ್ಯ:

ಈ ಪಂಚಾಯತಿನ ಬಹುತೇಕ ಮನೆಗಳಲ್ಲಿ ಇಂಧನವಾಗಿ ಕಟ್ಟಿಗೆಯನ್ನೇ ಬಳಸಲಾಗುತ್ತದೆ. ಇವುಗಳಲ್ಲೇ 40% ಕುಟುಂಬಗಳು ಕಟ್ಟಿಗೆಯನ್ನು ಬೆಲೆಕೊಟ್ಟು ಕೊಳ್ಳುವವರಾಗಿದ್ದಾರೆ. ಕುಟುಂಬಗಳ ಆದಾಯದ ಹೆಚ್ಚಿನ ಪಾಲು ಈ ಉದ್ದೇಶಕ್ಕಾಗಿ ಖರ್ಚಾಗುತ್ತದೆ. ಅಡುಗೆ ಅನಿಲ, ವಿದ್ಯುತ್ ಮುಂತಾದುವುಗಳನ್ನು ಉಪಯೋಗಿಸುವ ಕುಟುಂಬಗಳ ಸಂಖ್ಯೆಯು ಬೆರಳೆಣಿಕೆಯಷ್ಟು ಮಾತ್ರ ಇದೆ. ಈ ಪಂಚಾಯತಿನಲ್ಲಿ ಗೋಬರಗೇಸ್‌ಗೆ ವಿಪುಲವಾದ ಪ್ರಚಾರ ದೊರೆತಿಲ್ಲ. ಸೌರ ಒಲೆಗಳ ಬಳಕೆ ಇಲ್ಲವೆನ್ನಬಹುದು. ಕಟ್ಟಿಗೆಯ ಹೊರತಾದ ಇತರ ಇಂಧನಗಳ ಬಳಕೆ ಬಹಳ ನಿಧಾನಗತಿಯಲ್ಲಿ ಸಾಗುತ್ತದೆ.

ಕಟ್ಟಿಗೆಗಾಗಿ ಗೇರುಮರ ಹಾಗೂ ಇತರ ಕೆಲವು ಕಾಡಿನ ಮರಗಳ ಮತ್ತು ತೆಂಗಿನ ಮರವನ್ನು ಜನರು ಆಶ್ರಯಿಸಿದ್ದಾರೆ. ಗೇರು ಅಭಿವೃದ್ಧಿ ನಿಗಮದಿಂದ ಏಲಂ ಮುಖಾಂತರ ದೊರೆಯುವ ಕಟ್ಟಿಗೆಯನ್ನೂ ಜನರು ಕೆಲವೆಡೆಗಳಲ್ಲಿ ಉಪಯೋಗಿಸುತ್ತಾರೆ. ಸಣ್ಣ ಭೂಹಿಡುವಳಿದಾರರು ಕಟ್ಟಿಗೆಯನ್ನು ಸಂಗ್ರಹಿಸಲು ಅತಿಹೆಚ್ಚು ಕಷ್ಟಪಡುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರೂ ಆರ್ಥಿಕವಾಗಿ ಹಿಂದುಳಿದಿರುವುದು ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸಿದಂತೆ ಮಾಡಿದೆ. ಆಧುನಿಕ ರೀತಿಯ ಯಾವುದೇ ಒಲೆಗಳಿಗೆ ಈ ಪಂಚಾಯಕಿನಲ್ಲಿ ಪ್ರಚಾರವಾಗಲೀ, ಹೊಗೆ ಇಲ್ಲದ ಒಲೆಗಳ ಬಳಕೆ ಕಡಿಮೆ ಎನ್ನಬಹುದು. ಅಸ್ತ್ರ ಒಲೆಗಳು ಗೃಹಿಣಿಯರ ಪ್ರಾವೀಣ್ಯ ಕೊರತೆ ಮತ್ತು ಬಿಡುವಿಲ್ಲದ ಕೆಲಸ ಚೈತನ್ಯ ನಷ್ಟಕ್ಕೆ ಕಾರಣವಾಗಿದೆ.

ಸರಿ ಸುಮಾರು 400 ಮನೆಗಳಿಗೆ ವಿದ್ಯುತ್ ಸಂಪರ್ಕವು ದೊರೆತಿದೆ. ಕೃಷಿ ಬಳಕೆಗಾಗಿ 160 ವಿದ್ಯುತ್ ಸಂಪರ್ಕಗಳನ್ನು ನೀಡಲಾಗಿದೆ. ಪ್ರಸ್ತುತ 200ಕ್ಕಿಂತಲೂ ಹೆಚ್ಚಿನ ಕುಟುಂಬಗಳು ವಿದ್ಯುತ್ತಿಗಾಗಿ ಅರ್ಜಿ ಸಲ್ಲಿಸದ್ದು ವಿದ್ಯುತ್ ಸಂಪರ್ಕ ಲಭಿಸಲು ಬಾಕಿಯಿದೆ. ಕೃಷಿ ಉಪಯೋಗಕ್ಕಾಗಿ ವಿದ್ಯುತ್ ಸಂಪರ್ಕ ಕಲ್ಪಿಸದೇ ಇದ್ದುದು ಜನರು ಇತರ ಇಂಧನಗಳಾದ ಸೀಮೆ ಎಣ್ಣೆ, ಡೀಸೆಲ್ ಮುಂತಾದುವನ್ನು ಆಶ್ರಯಿಸಲು ಕಾರಣವಾಗಿದೆ. ಈ ಪಂಚಾಯತಿನಲ್ಲಿ ಒಟ್ಟು 10 ವಿದ್ಯುತ್ ಪರಿವರ್ತಕಗಳು ಇದ್ದರೂ ಇಲ್ಲಿನ ವಿದ್ಯುತ್ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಸಬ್‌ಸ್ಟೇಶನ್‌ಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಆಗಾಗ ನಡೆಯುತ್ತಿರುವ ದುರಸ್ತಿ ಕಾರ್ಯಗಳು ವಿದ್ಯುತ್ ಪೊಟಕುಗೊಳ್ಳಲು ಕಾರಣವಾಗಿದೆ. ಪಂಚಾಯತಿನಲ್ಲಿ ಎಲ್ಲೂ ದಾರಿದೀಪಗಳನ್ನು ಹಾಕಿಲ್ಲ. ಹಲವಾರು ಯೋಜನೆಗಳ ಅಡಿಯಲ್ಲಿ ಪಂಚಾಯತಿನ 5 ಕೋಲನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಒಟ್ಟು 55 ಕುಟುಂಬಗಳು ಮಾತ್ರ ಈ ಸವಲತ್ತನ್ನು ಪಡಕೊಂಡಿವೆ. 35 ಕುಟುಂಬಗಳು ವಿದ್ಯುತ್ ಬಿಲ್ ಪಾವತಿಸುತ್ತಿದ್ದಾರೆ. 20 ಕುಟುಂಬಗಳಿಗೆ ಉಚಿತವಾದ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದೆ.

ಸಮಸ್ಯೆಗಳು:-

1. ಪಂಚಾಯತಿನ ಬಹುತೇಕ ಮನೆಗಳಿಗೆ ವಿದ್ಯುತ್ ಸೌಲಭ್ಯವಿಲ್ಲ.

2. ವೋಲ್ಟೇಜ್ ಕೊರತೆ ಮತ್ತು ಆಗಾಗ ಇರುವ ವಿದ್ಯುತ್ ಕಡಿತಗಳಿಂದಾಗಿ ಜನರು ಅತೀವ ಸಂಕಷ್ಟಕ್ಕೊಳಗಾಗುತ್ತಿದ್ದಾರೆ.

3. ವಿದ್ಯುತ್ ಇಲಾಖೆಯ ನೌಕರರ ಸೇವೆಯು ತೃಪ್ತಿಕರವಾಗಿಲ್ಲ.

4. ಎಲ್ಲಾ ಕೋಲನಿಗಳಿಗೂ ಈವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿಲ್ಲ.

5. ಪಂಚಾಯತಿನ ಯಾವುದೇ ಭಾಗಗಳಲ್ಲಿ ದಾರಿದೀಪಗಳ ವ್ಯವಸ್ಥೆ ಇಲ್ಲ.

6. ಕೈಗಾರಿಕೆ ಮತ್ತು ಕೃಷಿ ರಂಗದಲ್ಲಿ ಹೊಸ ವಿದ್ಯುತ್ ಸಂಪರ್ಕವನ್ನು ಒದಗಿಸುವಲ್ಲಿ ಕಾಲವಿಳಂಬ ಇಲ್ಲವಾಗಿಸಬೇಕು.

7. ಸಂಪರ್ಕಗಳಿಗನುಸಾರವಾಗಿ ಪರಿವರ್ತಕಗಳು ಸ್ಥಾಪಿಸಲ್ಪಟ್ಟಿಲ್ಲ.

8. ಗೃಹೋಪಯೋಗಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕಟ್ಟಿಗೆ ಲಭ್ಯವಿಲ್ಲ.

9. ಸೀಮೆ ಎಣ್ಣೆಗೆ ಅನುಜ್ಞಾಪತ್ರ (Permit). ಅನಿಲ ಸಂಪರ್ಕ ಮುಂತಾದುವುಗಳು ತಕ್ಕ ಸಮಯದಲ್ಲಿ ದೊರೆಯುತ್ತಿಲ್ಲ.

10. ಹೊಗೆ ಇಲ್ಲದ ಒಲೆಗಳು, ಹೆಚ್ಚು ಕಾರ್ಯಕ್ಷಮತೆ ಇರುವ ಒಲೆಗಳು ಬಳಕೆಯಲ್ಲಿ ಇರುವುದು ವಿರಳ.

11. ಸೌರಶಕ್ತಿಯ ಬಗ್ಗೆ ಹೆಚ್ಚಿನ ಜನರು ತಿಳುವಳಿಕೆ ಹೊಂದಿಲ್ಲ.

12.ಜೈವಿಕ ಅನಿಲ, ಗೋಬರ್‌ಗೇಸ್ ಮುಂತಾದುವುಗಳು ಹೆಚ್ಚಿನ ಕಡೆಗಳಲ್ಲಿ ಉಪಯೋಗಿಸಲ್ಪಡುತ್ತಿಲ್ಲ.

13. ವ್ಯಾಪಾರಿಗಳು ಸೀಮೆ ಎಣ್ಣೆ ಬಳಕೆದಾರರನ್ನು ಹೆಚ್ಚು ಶೋಷಣೆಗೆ ಒಳಪಡಿಸುತ್ತಾರೆ.

14. ANERT ಮುಂತಾದ ಸಂಸ್ಥೆಗಳ ಬಗ್ಗೆ ಜನರು ತಿಳಿದಿಲ್ಲ.

15. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗಿರುವ ಸವಲತ್ತುಗಳು ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಡುವುದಿಲ್ಲ.

ಸಾಧ್ಯತೆಗಳು

1. ಪಂಚಾಯತಿನ ಹಲವು ಭಾಗಗಳಲ್ಲಿ ದಾರಿದೀಪಗಳ ವ್ಯವಸ್ಥೆ ಮಾಡಬೇಕು.

2. ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ದುರಸ್ತಿ ಕೆಲಸಗಳನ್ನು ತಕ್ಕ ಸಮಯಗಳಲ್ಲಿ ಕೈಗೊಳ್ಳಬೇಕು.

3. ಹೆಚ್ಚು ಪರಿವರ್ತಕಗಳನ್ನು ಸ್ಥಾಪಿಸಬೇಕು.

4. ವಿದ್ಯುತ್ತಿಗಾಗಿ ಅರ್ಜಿ ಸಲ್ಲಿಸಿದ ಎಲ್ಲಾ ಗ್ರಾಹಕರಿಗೂ ಸಂಪರ್ಕ ಕಲ್ಪಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

5. ಪಂಚಾಯತಿನ ಎಲ್ಲಾ ಕೋಲನಿಗಳಿಗೂ ವಿದ್ಯುತ್ ಸಂಪರ್ಕ ನೀಡಬೇಕು.

6. ವಿದ್ಯುತ್ ಇಲಾಖೆಯ ನೌಕರರಿಗೆ ಹೆಚ್ಚು ಸಹಕಾರಿ ಮತ್ತು ಸೇವಾ ಮನೋಭಾವವಿರಬೇಕು.

7. ಮುಂಚಿತವಾಗಿ ತಿಳಿಸದ ವಿದ್ಯುತ್ ಕಡಿತಗಳನ್ನು ನಿಷೇಧಿಸಬೇಕು.

8. ಸೀಮೆ ಎಣ್ಣೆ ಪರವಾನಿಗೆಯನ್ನು ಅರ್ಹರಾದವರೆಲ್ಲರಿಗೂ ನೀಡಬೇಕು.

9. ಹೊಗೆ ಇಲ್ಲದ ಒಲೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು.

10. ಸೌರಶಕ್ತಿಯ ಒಲೆಗಳು ಮತ್ತು ದೀಪಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು.

11. ಗೋಬರ್‌ಗೇಸ್, ಬಯೋಗೇಸ್ ಘಟಕಗಳನ್ನು ನಿರ್ಮಿಸಲು ಸರಬೇತು ನೀಡಬೇಕು.

12. ಚೈತನ್ಯ ಉಳಿತಾಯದ ಬಗ್ಗೆ ಗೃಹಿಣಿಯರಿಗೆ ಮಾಹಿತಿಯನ್ನು ನೀಡಬೇಕು.

13. ಕಟ್ಟಿಗೆ ದೊರೆಯಲು ಬರಡು ಭೂಪ್ರದೇಶಗಳಲ್ಲಿ ಹೆಚ್ಚು ಮರಗಳನ್ನು ಬೆಳೆಸಬೇಕು.

ಮಾರುಕಟ್ಟೆ:-

ಏತಡ್ಕ, ಮಾರ್ಪನಡ್ಕ ಮತ್ತು ಮವ್ವಾರು ಪಂಚಾಯತಿನ ಪ್ರಧಾನ ವ್ಯಾಪಾರೀ ಕೇಂದ್ರಗಳಾಗಿವೆ. ಈ ಮೂರು ಸ್ಥಳಗಳೂ ದೊಡ್ಡ ವ್ಯಾಪಾರೀ ಕೇಂದ್ರಗಳಾಗಿ ಅಭಿವೃದ್ಧಿಯಾಗಿಲ್ಲ. ಅತಿ ಚಿಕ್ಕ ವಸ್ತುಗಳಿಗಾಗಿಯೂ ಕೆಲವೊಮ್ಮೆ ಜನರು ಅನ್ಯ ಸ್ಥಳಗಳನ್ನು ಆಶ್ರಯಿಸಬೇಕಾಗುತ್ತದೆ. ಇಲ್ಲಿ ಉತ್ಪಾದನೆಯಾಗುವ ವಸ್ತುಗಳನ್ನು ಮಾರಲು ವಾರಸಂತೆಗಳು ಈ ಪಂಚಾಯತಿನ ಚರಿತ್ರೆಯಲ್ಲೇ ಇಲ್ಲವೆನ್ನಬಹುದು.

ಅಡಿಕೆ, ಕರಿಮೆಣಸು ತೆಂಗಿನಕಾಯಿ, ಗೇರುಬೀಜ, ಬಾಳೆ ಈ ಪ್ರದೇಶದ ಪ್ರಧಾನ ಕೃಷಿ ಮಾರಾಟ ಉತ್ಪನ್ನಗಳಾಗಿವೆ. ಮಾರಾಟ ಮಾಡಲು ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಅಡಿಕೆ ಶೇಖರಿಸಲು ಬೇಕಾದ ಒಂದು ಸಂಸ್ಥೆ ಇಲ್ಲಿ ಅಗತ್ಯವಾಗಿದೆ. ಸಹಕಾರೀ ರಂಗದಲ್ಲಿ ವ್ಯಾಪಾರೀ ಕೇಂದ್ರಗಳ ಸ್ಥಾಪನೆ ಮಾಡುವುದು ಉಚಿತವೆನ್ನಬಹುದು. ಪಂಚಾಯತಿನ ಕೇಂದ್ರಭಾಗದಲ್ಲಿ ಸಕ್ರೀಯವಾದ ವಾರಸಂತೆಯನ್ನು ಆರಂಭಿಸಬೇಕು. ಪಂಚಾಯತಿನ ಯೋಗ್ಯವಾದ ಸ್ಥಳಗಳಲ್ಲಿ ಮಾವೇಲಿ ಸ್ಟೋರ್‌ಗಳನ್ನು ಪ್ರಾರಂಭಿಸಬೇಕು. ಉತ್ಪಾದನೆ ಮತ್ತು ಮಾರಾಟವನ್ನು ಸಮತೋಲನವಾಗಿರುಸುವ ಸ್ವಾವಲಂಬಿ ಗ್ರಾಮಪಂಚಾಯತು ಎಂಬ ಆಶಯವನ್ನು ಸಾಕಾರಗೊಳಿಸಲು ಮಾರುಕಟ್ಟೆಗಳನ್ನು ಪ್ರಾರಂಭಿಸುವುದರ ಅಗತ್ಯವಿದೆ.

ವಿದ್ಯುತ್ತೀಕರಿಸಿದ ಕೋಲನಿಗಳು

ವಾರ್ಡು	ಕೋಲನಿ	ವಿದ್ಯುತ್ ಸಂಪರ್ಕ ದೊರಕಿದ ಕುಟುಂಬಗಳು	ಉಚಿತ ವಿದ್ಯುತ್ತನ್ನು ಪಡೆಯುವವರ ಸಂಖ್ಯೆ	ಹಣ ಕಟ್ಟಿ ವಿದ್ಯುತ್ತನ್ನು ಪಡೆಯುವವರ ಸಂಖ್ಯೆ
1	ಕುಂಬಡಾಜೆ	10	-	10
2	ಜಯನಗರ	12	-	12
3	ಬೆದ್ರುಕೂಡ್ಲು	10	-	-
4	ಮಾಚಾವು	13	-	13
5	ಕೋಪಾಳಮೂಲೆ	10	-	-

ವಿದ್ಯುತ್ ಸಂಪರ್ಕ ಲಭಿಸಲು ಬಾಕಿ ಇರುವ ಅಪೇಕ್ಷಿತರ ಸಂಖ್ಯೆ

	ವಿಭಾಗ	ಸಂಖ್ಯೆ
A	ಸಾಮಾನ್ಯ	160
B	ಒ.ಟಿ.ಪಿ.	4
C	ಒ.ವೈ.ಇ.ಪಿ.	2

ವಿದ್ಯುತ್ ಉಪಯೋಗ ಪಡೆಯುವವರು

ಕ್ರಮಸಂಖ್ಯೆ	ವಿಭಾಗ	ಸಂಖ್ಯೆ
1	ಗೃಹೋಪಯೋಗಿ	400
2	ವ್ಯಾಪಾರಿ	50
3	ಕೈಗಾರಿಕೆ	-
4	ಕೃಷಿ	160

ಟ್ರಾನ್ಸ್‌ಫೋರ್ಮರುಗಳು

ಕ್ರಮಸಂಖ್ಯೆ	ಸ್ಥಳ	ಶಕ್ತಿ
1.	ಎ.ಪಿ. ಸರ್ಕಲ್	100KVA
2.	ಕುಂಬಡಾಜೆ	163KVA
3.	ಮಾರ್ಪನಡ್ಕ	100KVA
4.	ಪೊಡಿಪ್ಪಳ	100KVA
5.	ಏತಡ್ಕ	163KVA
6.	ಉಬ್ರಂಗಳ	100KVA
7.	ಕರುವಲ್ತಡ್ಕ	100KVA
8.	ಬಿ.ಜಿ.ಸರ್ಕಲ್	100KVA
9.	ಪೊಸಳಿಗೆ	100KVA
10.	ಉಪ್ಪಂಗಳ	100KVA
11.	ಮುನಿಯೂರು	100KVA

ಮಾರ್ಗಗಳು

ಕ್ರ.ಸಂ.	ಹೆಸರು	ಉದ್ದ
1	ಕರುವಲ್ತಡ್ಕ- ಕುಂಬಡಾಜೆ	800ಮೀ
2.	ನಾರಂಪಾಡಿ-ಏತಡ್ಕ	8ಕಿ.ಮೀ
3.	ಅನ್ನಡ್ಕ- ಮುಗುಳಿಮೂಲೆ	2.800
4.	ಮವ್ವಾರು- ಕುರುಮುಜ್ಜಿ ಕಟ್ಟೆ	1.400
5.	ತಲೇಕ-ಬಾಳ್ಚರ	1
6.	ಮವ್ವಾರು-ಗೋಸಾಡ	1.600
7.	ಪಳ್ಳತ್ತಡ್ಕ-ತಂಬು	2.400
8.	ಪಿಲಾಂಕಟ್ಟೆ - ಕರುವಲ್ತಡ್ಕ	2.200
9.	ಪಿಲಾಂಕಟ್ಟೆ - ಅಗಲ್ಪಾಡಿ	1.800
10.	ಅಗಲ್ಪಾಡಿ - ಜಯನಗರ	1
11.	ಗಾಡಿಗುಡ್ಡೆ - ಮುಳ್ಳೇರಿಯ	400
12.	ಕುರುಮುಜ್ಜಿಕಟ್ಟೆ - ಕೇಕೆಮೂಲೆ	1
13.	ಕೊರೆಕ್ಕಾನ - ಬಳ್ಳಪದವು	2.400
14.	ಶಾಂತಿಪಳ್ಳ - ಬೈರಮೂಲೆ	1
15.	ಗೋಸಾಡ- ಗೋಸಾಡ ದೇವಸ್ಥಾನ	1.200
16.	ಪಿಲಾಂಕಟ್ಟೆ - ಅಗಲ್ಪಾಡಿ	400
17.	ಆನೆಪಳ್ಳ - ಬಾಳೆಗದ್ದೆ	200
18.	ಮವ್ವಾರು - ಮಠದಮೂಲೆ	1
19.	ಜಯನಗರ - ಉಪ್ಪಂಗಳ	1
20.	ಕರುವಲ್ತಡ್ಕ - ಗೋಳಿಯಡಿ	500
21.	ಬೆಳ್ಳಿಗೆ - ತಲೆಬೈಲು	1
22.	ಮಠದಮೂಲೆ - ಗೋಸಾಡ	500
23.	ಮವ್ವಾರು - ಮವ್ವಾರು ಶಾಲೆ	500
24.	ಏತಡ್ಕ - ಸುಳ್ಯಪದವು	2
25.	ಅಗಲ್ಪಾಡಿ ಶಾಲೆ - ಜಯನಗರ	200
26.	ಏತಡ್ಕ - ಪಡ್ರೆ	1
27.	ಗಾಡಿಗುಡ್ಡೆ - ಚಿಪ್ಪದವು	1.200
28.	ನಾರಂಪಾಡಿ - ಚರ್ಚು	1.400
29.	ಬೆಳ್ಳಿಗೆ - ಬಲೆಕ್ಕಳ	1
30.	ನೇರಪ್ಪಾಡಿ - ಮುನಿಯೂರು	300
31.	ತಂಬು - ಕಟ್ಟದಮೂಲೆ	1
32.	ಪೇರಂತ್ತೊಟ್ಟೆ - ಉಬ್ರಂಗಳ	1
33.	ಉಬ್ರಂಗಳ - 2ನೇ ಮೈಲುಕಲ್ಲು	500
34.	ಪಾತೇರಿ - ಮರಿಕ್ಕಾನ	1
35.	ಅಗಲ್ಪಾಡಿ - ಪಿಲಾಂಕಟ್ಟೆ	1
36.	ಮವ್ವಾರು - ಗೋಸಾಡಬೈಲು	1
37.	ಕುಂಬಡಾಜೆ -ಬೆಳಿಂಜ	4.285
38.	ಕುಂಬಡಾಜೆ -ಬೆಳಿಂಜ	1
39.	ಕರುವಲ್ತಡ್ಕ - ಉಪ್ಪಂಗಳ	800
40.	ಕುಂಬಡಾಜೆ - ಕಟ್ಟದ ಕೋರಿಕಾರು	1
41.	ಜೀಂತಡ್ಕ - ಪುತ್ರಕಳ	1
42.	ನೆಲ್ಲಿಕುಂಜೆ -ತಂಬು	1.500
43.	ಗೋಸಾಡ - ನಾಟೆಕಲ್ಲು	1

ಕ್ರ.ಸಂ.	ಹೆಸರು	ಉದ್ದ
44.	ಏತಡ್ಕ - ಕೂಟಲು	500
45.	ಪೆರಿಂಬಳ - ಗಾಡಿಗುಡ್ಡೆ	1
46.	ಅಜಿಲ - ಮುಕ್ಕೂರು	1
47.	ಕುದಿಂಗಿಲ - ಬಯಲು	1
48.	ಬೆಳಿಂಜ - ಗಂಡಿತರು	1
49.	ಸಂಕೇಷ - ಚಿಪ್ಪದವು	2
50.	ಬಾಂಡ್ಲಮೂಲೆ - ಪುತ್ರಕಳ	1
51.	ಬಜೆಕೂಡ್ಲು - ನಾಟೆಕಲ್ಲು	1
52.	ಕೀರಿಕ್ಕಾಡು - ಕಟ್ಟದಮೂಲೆ	1
53.	ನಾಟೆಕಲ್ಲು - ಮುಕ್ಕೂರು	1
54.	ಕರುವಲ್ತಡ್ಕ - ಅಗಲ್ಪಾಡಿ	500
55.	ಕೊರೆಕ್ಕಾನ - ಮಾರ್ಪನಡ್ಕ	1
56.	ಬಳ್ಳಪದವು - ಅಗಲ್ಪಾಡಿ	1
57.	ಮರಿಕ್ಕಾನ - ಬೆಳಿಂಜ	1
58.	ಬೆಳಿಂಜ - ಮುಕ್ಕೂರು	1
59.	ಬೆಳಿಂಜ - ಕರ್ಕಡಗೋಳಿ	1

ಕ್ರ.ಸಂ.	ಹೆಸರು	ಉದ್ದ
60.	ಮವ್ವಾರು ಶಾಲೆ - ಬೆಳಿಂಜ	500ಮೀ
61.	ಮವ್ವಾರು ಶಾಲೆ -ತಲೆಬೈಲು	750ಮೀ
62.	ಬೆಳಿಂಜ - ಕರ್ಕಡಗೋಳಿ	1ಕಿ.ಮೀ.
63.	ಬೆಳಿಂಜ - ಗಾಡಿಗುಡ್ಡೆ	1ಕಿ.ಮೀ.
64.	ಪುತ್ರಕಳ - ತಂಬು	1ಕಿ.ಮೀ.
65.	ಉಬ್ರಂಗಳ - ಏತಡ್ಕ	1ಕಿ.ಮೀ
66.	ಉಬ್ರಂಗಳ - ಎಯ್ಯುರಿ	1ಕಿ.ಮೀ
67.	ಕುದಿಂಗಿಲ - ಮಾಚಾವು	1.170
68.	ನಿಡ್ಪಣ ಬೈಲು - ತಂಬು	155ಮೀ.
69.	ಕುಂಬಡಾಜೆ - ನಿಡ್ಪಣ ಬೈಲು	551
70.	ಕೊರೆಕ್ಕಾನ - ಹರಿಜನ ಕೋಲನಿ	220
71.	ಮುನಿಯೂರು - ಕೀರಿಕ್ಕಾಡು	375
72.	ಕಡೆಕ್ಕಳಮೂಲೆ - ಪುತ್ರಕಳ ಕೋಲನಿ	865
73.	ಉಬ್ರಂಗಳ - ಕರುವಲ್ತಡ್ಕ	525
74.	ಸೀತಾಂಗೋಳಿ - ಚಕ್ಕೂಡ್ಲು	300
75.	ಸಿ.ಎಚ್.ನಗರ - ಅನ್ನಡ್ಕ	250

With Best Compliments From :

CENTRAL AUTOMOBILES

KANHANGAD

Prop : **Mohammedkunhi.**

ಸಾಮಾಜಿಕ ಅಭಿವೃದ್ಧಿ - ಗೃಹನಿರ್ಮಾಣ

ಗುಡ್ಡ ಬೆಟ್ಟ ಕಣಿವೆ ಹಾಗೂ ಬಯಲುಗಳಿಂದ ಕೂಡಿದ ಭೂಪ್ರಕೃತಿ ನಮ್ಮದಾಗಿದೆ. ಈ ಪ್ರದೇಶಗಳಲ್ಲಿ ಹೆಚ್ಚಿನವುಗಳು ವಾಸ ಯೋಗ್ಯವಾದವುಗಳಲ್ಲ. ಎತ್ತರದ ಭೂಪ್ರದೇಶಗಳಲ್ಲಿ ನೀರಿನ ಅಭಾವ ಕಂಡುಬಂದುದರಿಂದ ಬಹುಪಾಲು ಮನೆಗಳು ಕಣಿವೆ ಹಾಗೂ ಬಯಲು ಪ್ರದೇಶಗಳಲ್ಲಿವೆ. ಅವಿಭಕ್ತ ಕುಟುಂಬಗಳು ಮತ್ತು ಸಾಧಾರಣ ಕುಟುಂಬಗಳು ಕಂಡುಬರುತ್ತವೆ. ಅಂಕಿ ಅಂಶಗಳ ಪ್ರಕಾರ ಹೊಸ ಮನೆ ಹಾಗೂ ಕಟ್ಟಡಗಳ ನಿರ್ಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ನಮ್ಮ ಪಂಚಾಯತಿಗೆ ಹರಿದು ಬರುವ ವಿದೇಶಿ ಹಣದ ಬಹುಪಾಲು ಮನೆಗಳಿಗಾಗಿ ವಿನಿಯೋಗವಾಗಿದೆ. ಹಾಗಾಗಿ ಹೊಸ ಮನೆಯ ನಿರ್ಮಾಣ ವೈಭವೋಪೇತವಾದುದಾಗಿದೆ. ಮಧ್ಯಮ ವರ್ಗದ ಜನರೆಲ್ಲ ಚಂದಿನ ಮನೆಯನ್ನು ಹೊಂದಿರುವವರಾಗಿದ್ದಾರೆ. ಪಂಚಾಯತಿನ ಜನಸಂಖ್ಯೆಯ ಬಹುಪಾಲು ಕಂಡುಬರುವ ಬಡಜನರು ಹುಲ್ಲು ಹಾಸಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ.

ಪಂಚಾಯತಿನ ವ್ಯಾಪ್ತಿಯಲ್ಲಿ ಒಟ್ಟು 2840 ಮನೆಗಳಿವೆ. ಇವುಗಳಲ್ಲಿ 1867 ಮನೆಗಳು ಹಂಚುಛಾವಣಿಯನ್ನು ಹೊಂದಿವೆ. 1009 ಮನೆಗಳು ಹುಲ್ಲು ಛಾವಣಿಯ ಗುಡಿಸಲುಗಳಾಗಿವೆ. ಒಟ್ಟು 54 ಕಾಂಕ್ರೀಟ್ ಛಾವಣಿಯ ಮನೆಗಳಾಗಿವೆ. ಕೆಲವು ಮಾಳಿಗೆಯ ಮನೆಗಳೂ ನಮ್ಮ ಪಂಚಾಯತಿನಲ್ಲಿವೆ.

ಪಂಚಾಯತಿನಲ್ಲಿರುವ ಬಹುತೇಕ ಮನೆಗಳು ಪ್ರಾಥಮಿಕ ಸೌಕರ್ಯಗಳಿಂದ ವಂಚಿತವಾದವುಗಳಾಗಿವೆ. ಹೆಚ್ಚಿನ ಮನೆಗಳಲ್ಲಿ ಪಾಯಿಖಾನೆಯ ವ್ಯವಸ್ಥೆಯೂ ಇರುವುದಿಲ್ಲ. ಜನರು ಆರ್ಥಿಕವಾಗಿ ಹಿಂದುಳಿದಿರುವುದೇ ಇದಕ್ಕೆ ಪ್ರಧಾನ ಕಾರಣ ಎಂಬ ವಿಚಾರವು ಗ್ರಾಮಸಭೆಗಳಿಂದ ನಮಗೆ ತಿಳಿದುಬಂದ ಸತ್ಯವಾಗಿದೆ.

ಗೃಹ ನಿರ್ಮಾಣ ವಸ್ತುಗಳ ಬೆಲೆಯೇರಿಕೆ, ನುರಿತ ಕೆಲಸಗಾರರ ಅಭಾವ ಮುಂತಾದುವುಗಳು ಈ ಕ್ಷೇತ್ರದಲ್ಲಿ ಬಹಳಷ್ಟು ಸಮಸ್ಯೆಗಳನ್ನು ಸೃಷ್ಟಿಸಿವೆ.

ಪ್ರಸ್ತುತ ಪಂಚಾಯತಿನಲ್ಲಿ ಸುಮಾರು 20 ಕೋಲನಿಗಳಿವೆ. ಹೆಚ್ಚಿನ ಮನೆಗಳಲ್ಲಿ ಪ್ರಾಥಮಿಕ ಸೌಕರ್ಯಗಳು ಕೂಡಾ ಇಲ್ಲ. ಸಾರಿಗೆ ಸಂಪರ್ಕ, ವಿದ್ಯುತ್ ಮತ್ತು ಇತರ ಪ್ರಾಥಮಿಕ ಸೌಲಭ್ಯಗಳು ಈ ಕೋಲನಿಗಳಿಗೆ ಲಭಿಸಬೇಕಾಗಿದೆ.

ಪಂಚಾಯತಿನ ವ್ಯಾಪ್ತಿಯಲ್ಲಿರುವ ವಿವಿಧ ಸಂಸ್ಥೆಗಳು ಗೃಹ ನಿರ್ಮಾಣಕ್ಕಾಗಿ ಜನರಿಗೆ ಸಾಲ-ಸೌಲಭ್ಯಗಳನ್ನು ನೀಡಿವೆ. ಕುಂಬ್ಳಾಜೆ ಸೇವಾ ಸಹಕಾರಿ ಬೇಂಕ್ 1993-94ರಲ್ಲಿ ರೂ. 2,13,00; 1994-95ರಲ್ಲಿ 2,02,500 ಹಾಗೂ 1995-96ರಲ್ಲಿ 5,60,00ವನ್ನು ಗೃಹ ನಿರ್ಮಾಣಕ್ಕಾಗಿ ವ್ಯಯಿಸಿದೆ. ಪಂಚಾಯತಿನ ಏಕೈಕ ನೋರ್ತ್ ಮಲಬಾರ್ ಬೇಂಕ್ 1993-96ರ ಕಾಲಾವಧಿಯಲ್ಲಿ 1,80,400 ರೂ. ಗಳನ್ನು ಗೃಹ ನಿರ್ಮಾಣಕ್ಕಾಗಿ ಸಾಲ ನೀಡಿದೆ. ಇತರ ಸಂಸ್ಥೆಗಳಿಂದ 1,90,130ನ್ನು ಗೃಹ ನಿರ್ಮಾಣಕ್ಕಾಗಿ ಸಾಲ ಪಡೆಯಲಾಯಿತು. IAY ಯೋಜನೆಯ ಪ್ರಕಾರ 20 ಹಾಗೂ MWS ಯೋಜನೆಯ ಪ್ರಕಾರ 14 ಮನೆಗಳು ನಮ್ಮ ಪಂಚಾಯತಿನಲ್ಲಿ ನಿರ್ಮಿತವಾಗಿವೆ. ಗೃಹ ನಿರ್ಮಾಣ ಮಂಡಳಿಯು ಪಂಚಾಯತಿನಲ್ಲಿ ಸುಮಾರು 20 ಮನೆಗಳನ್ನು ಕಟ್ಟಲು ಸಾಲ ನೀಡಿದೆ. ಪಂಚಾಯತ್ J.R.Y.ಯಲ್ಲಿ ಮನೆಗಳನ್ನು ಕಟ್ಟಲು ಧನಸಹಾಯ ನೀಡಲಾಗುತ್ತಿದೆ.

ಮನೆರಹಿತರಿಗೆ ಮನೆ, ಹಳೆಯ ಮನೆಗಳ ದುರಸ್ತಿ, ಭೂರಹಿತರಿಗೆ ಅರ್ಹ ರೀತಿಯಲ್ಲಿ ಭೂಮಿಯ ಹಂಚುವಿಕೆ - ಇತ್ಯಾದಿಗಳಿಗೆ ಹೊಸ ಯೋಜನೆಯಲ್ಲಿ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ.

ಸಮಸ್ಯೆಗಳು

1. ಗೃಹನಿರ್ಮಾಣಕ್ಕೆ ಅಗತ್ಯವಿರುವ ಕಚ್ಚಾವಸ್ತುಗಳ ಬೆಲೆಯೇರಿಕೆ.

2. ನುರಿತ ಕೆಲಸಗಾರರ ಅಭಾವ.

3. ಕಾರ್ಮಿಕರ ಸಂಬಳದಲ್ಲಿನ ಹೆಚ್ಚಳ.

4. ಗೃಹ ನಿರ್ಮಾಣ ಸಾಲದ ಮೇಲಿನ ಅತೀ ಹೆಚ್ಚಿನ ಬಡ್ಡಿದರ ಮತ್ತು ಸಾಲ ಮಂಜೂರಾತಿಗೆ ತಗಲುವ ಕಾಲ ವಿಳಂಬ.

5. ಕಡಿಮೆ ಖರ್ಚಿನಲ್ಲಿ ನಿರ್ಮಿಸಬಹುದಾದ 'ನಿರ್ಮಿತ' ಮನೆಗಳ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಿಲ್ಲ.

6. ಕೋಲನಿಗಳ ಶೋಚನೀಯಾವಸ್ಥೆ.

7. ಮನೆಗಳಿಗೆ ಕುಡಿಯುವ ನೀರು ಪಾಯಿಖಾನೆ ಮುಂತಾದುವುಗಳು ಇಲ್ಲದಿರುವುದು.

8. ಕೃಷಿ ಭೂಮಿಗೆ ಮಣ್ಣು ತುಂಬಿಸಿ ಗೃಹ ಅಥವಾ ಕಟ್ಟಡ ನಿರ್ಮಾಣಕ್ಕಾಗಿ ಬಳಸುವುದು ಹಲವಾರು ರೀತಿಯ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಕಾರಣವಾಗುತ್ತದೆ.

9. ಪಂಚಾಯತಿನ ಒಳ ಪ್ರದೇಶಗಳು ಸಾರಿಗೆ ವ್ಯವಸ್ಥೆಯಿಂದ ವಂಚಿತವಾಗಿರುವುದರಿಂದ ಗೃಹ ನಿರ್ಮಾಣ ಸರಕುಗಳ ಸಾಗಾಟಕ್ಕೆ ತೊಂದರೆಯುಂಟಾಗುತ್ತದೆ.

ಸಾಧ್ಯತೆಗಳು

1. ಗೃಹ ನಿರ್ಮಾಣ ಸಾಲ ಪಡೆಯುವಲ್ಲಿ ಎದುರಾಗುವ ಕಾಲವಿಳಂಬವನ್ನು ಇಲ್ಲವಾಗಿಸಬೇಕು.

2. ಗೃಹ ನಿರ್ಮಾಣ ಸಾಲಗಳ ಮೇಲಿನ ಬಡ್ಡಿ ದರವನ್ನು ಕಡಿಮೆಗೊಳಿಸಬೇಕು.

3. ಗೃಹ ನಿರ್ಮಾಣ ವಸ್ತುಗಳ ಬೆಲೆಯೇರಿಕೆಯನ್ನು ನಿಯಂತ್ರಿಸಬೇಕು.

4. ಆರ್ಥಿಕವಾಗಿ ಹಿಂದುಳಿದವರಿಗೆ ಬಡ್ಡಿ ರಹಿತ ಸಾಲನೀಡಬೇಕು.

5. ಆಡಂಬರ ರೀತಿಯ ಮನೆಗಳ ನಿರ್ಮಾಣಕ್ಕೆ ಕಡಿವಾಣ ಹೇರಬೇಕು.

6. ಮಿಗತೆ ಭೂಮಿ, ಪರಂಬೋಕು ಭೂಮಿಗಳನ್ನು ಭೂರಹಿತರಿಗೆ ಹಂಚಬೇಕು.

7. ಪ್ರಕೃತಿ ವಿಕೋಪದಿಂದ ಮನೆ ನಾಶವಾದವರಿಗೆ ತತ್ಕಾಲಿಕವಾಗಿ ವಾಸಿಸಲು ಇರುವ ಕಟ್ಟಡಗಳನ್ನು ನಿರ್ಮಿಸಬೇಕು.

8. ಕಡಿಮೆ ಖರ್ಚಿನಲ್ಲಿ ನಿರ್ಮಿಸಬಹುದಾದ ಮನೆಗಳ ಬಗ್ಗೆ ಮಾಹಿತಿಯನ್ನು ನೀಡುವುದು ಅಗತ್ಯವಾಗಿದೆ.

9. ವಿವಿಧ ಯೋಜನೆಗಳ ಪ್ರಕಾರ ನಿರ್ಮಿಸಿ ಜನರಿಗೆ ನೀಡುವ ಮನೆಗಳ ಗುಣಮಟ್ಟವನ್ನು ತಕ್ಕುದಾದ ರೀತಿಯಲ್ಲಿ ಪರಿಶೋಧಿಸಬೇಕು.

10. ಭೂರಹಿತ ಕಾರ್ಮಿಕರಿಗೆ ಮನೆ ಸೈಟುಗಳನ್ನು ನೀಡಿದವರಿಗೆ ಮನೆಕಟ್ಟಲು ಆರ್ಥಿಕ ಸಹಾಯ ನೀಡಬೇಕು.

ಸಾಮಾಜಿಕ ಅಭಿವೃದ್ಧಿ

IRDP ಸಮೀಕ್ಷೆ ಪ್ರಕಾರ 1297 ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಕೆಳಗಿವೆ. ಇವುಗಳಲ್ಲಿ 193 ಪರಿಶಿಷ್ಟ ಜಾತಿ 100 ಪರಿಶಿಷ್ಟ ಪಂಗಡ ಮತ್ತು 1004 ಇತರ ಮನೆಗಳಾಗಿವೆ. ಹಲವಾರು ಯೋಜನೆಗಳಡಿಯಲ್ಲಿ ಸುಮಾರು 500 ಕುಟುಂಬಗಳಿಗೆ ಆರ್ಥಿಕ ಸಹಾಯವು ಲಭಿಸಿರುತ್ತದೆ. 25 ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಮೇಲಿದ್ದು 1992ರ ಅಂಕೆ ಸಂಖ್ಯೆಗಳ ನಂತರದ ನಾಲ್ಕು ವರ್ಷಗಳಲ್ಲಿ 22 ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ಸೇರ್ಪಡೆಯಾಗಿದೆ.

1RDP ಸಮೀಕ್ಷೆಯಲ್ಲಿ ಸೇರಿರುವ ಮಂದಿಗಳಲ್ಲಿ 9 ಮಂದಿಗೆ 'ಟ್ರೈಸಂ' ಯೋಜನೆಯ ಪ್ರಕಾರ ತರಬೇತಿ ನೀಡಲಾಗಿದೆ. ಮಾತ್ರವಲ್ಲದೆ ಎಂಬ್ರೋಯಿಡರಿ, ಹೊಲಿಗೆ, ಪ್ಲಾಸ್ಟಿಕ್ ಕೆಲಸ ಮುಂತಾದುವುಗಳ ಬಗ್ಗೆ ತರಬೇತಿ ನೀಡುವ ಎರಡು ಮಹಿಳಾ ಸಮಾಜಗಳು ಕಾರ್ಯ ನಿರ್ವಹಿಸುತ್ತವೆ. ಪ್ರತಿವರ್ಷ 40 ಜನರಂತೆ ತರಬೇತಿ ಪಡೆದು ಬರುತ್ತಿದ್ದಾರಾದರೂ ಆರ್ಥಿಕ ಅಡಚಣೆಯಿಂದ ಸ್ವಂತವಾಗಿ ಕಾರ್ಯಪ್ರವೃತ್ತರಾಗಿಲ್ಲ.

ಸಮಾಜ ಕಲ್ಯಾಣ ಇಲಾಖೆಯ ಮೂಲಕ ಶಿಶು ಸಂರಕ್ಷಣಾ ಯೋಜನೆಯಡಿಯಲ್ಲಿ ಕಾರ್ಯವೆಸಗುವ ಕೇವಲ 2 ಬಾಲವಾಡಿಗಳು ಮಾತ್ರವೇ ಈ ಪಂಚಾಯತಿನಲ್ಲಿವೆ. ಇತರ ಯಾವುದೇ ಮಾತೃ, ಶಿಶು ಅಭಿವೃದ್ಧಿ ಸಂಸ್ಥೆಗಳು ಈ ಪಂಚಾಯತಿನಲ್ಲಿಲ್ಲ. ಮಾತೃಶಿಶು ಸಂರಕ್ಷಣೆಯ ಪರವಾಗಿ ವೈದ್ಯಕೀಯ ಶಿಬಿರಗಳು ರೋಗ ಪ್ರತಿರೋಧ ಚುಚ್ಚು ಮದ್ದು, ಆರೋಗ್ಯಾಧ್ಯಯನ ಶಿಬಿರಗಳು ನಡೆಯುತ್ತಿದ್ದರೂ ಇವುಗಳನ್ನು ಸಮಾಜದ ಇತರ ವಲಯಗಳಿಗೂ ವ್ಯಾಪಿಸುವಂತೆ ಮಾಡಬೇಕಾಗಿದೆ. ವಿವಿಧ ಯೋಜನೆಗಳ ಮೂಲಕ ಕೇವಲ 122 ಮಂದಿಗೆ ಮಾತ್ರವೇ ಪೆನ್ಶನ್ ಲಭಿಸುತ್ತದೆ. ಅರ್ಹ ವ್ಯಕ್ತಿಗಳಿಗೆ ಈ ಸೌಲಭ್ಯ ಇನ್ನೂ ದೊರೆತಿಲ್ಲ ಎಂಬುದು ಖೇದಕರವಾದ ವಿಷಯವಾಗಿದೆ. ವಿದ್ಯಾವಂತ ನಿರುದ್ಯೋಗಿಗಳು ನಮ್ಮ ಪಂಚಾಯತಿನಲ್ಲಿ ಸಾಕಷ್ಟಿದ್ದಾರೆ. ಹೊಸ ಯೋಜನೆಯ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕುರಿತು ಚಿಂತಿಸಬೇಕಾಗಿದೆ. ಹಳೆಯ ತಲೆಮಾರಿನ ಅನುಭವ ಸಂಪತ್ತು ಹಾಗೂ ಸ್ವೀಕಾರಾರ್ಹ ಆಚಾರ - ವಿಚಾರಗಳನ್ನು ಹೊಸ ತಲೆಮಾರಿಗೆ ವರ್ಗಾಯಿಸುವ ಜವಾಬ್ದಾರಿಯುತ ಕ್ರಮಗಳು ಅಗತ್ಯವಾಗಿ ನಡೆಯಬೇಕಾಗಿವೆ.

ಸಮಸ್ಯೆಗಳು

1. ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ.
2. ವಾರ್ಡಿಗೊಂದರಂತೆ ಅಂಗನವಾಡಿಗಳಿಲ್ಲ.
3. ಎಲ್ಲಾ ವಾರ್ಡುಗಳಲ್ಲಿ ಮಹಿಳಾಸಮಾಜ ರೂಪೀಕರಣಗೊಂಡಿಲ್ಲ.
4. ಪಂಚಾಯತಿನಲ್ಲಿ ಸಾಂಸ್ಕೃತಿಕ ನಿಲಯಗಳಿಲ್ಲ.
5. ಕಟ್ಟಡ ನಿರ್ಮಾಣ ಕೂಲಿಕಾರ್ಮಿಕರ ಕಲ್ಯಾಣ ಯೋಜನೆಗಳು ಕಾರ್ಯರೂಪಕ್ಕೆ ಬರಲು ಇರುವ ಕಾಲವಿಳಂಬ.
6. ತಾಯಿ ಮತ್ತು ಮಗುವಿನ ಆರೋಗ್ಯ ಬಗ್ಗೆ ತಿಳುವಳಿಕೆ ಇಲ್ಲದಿರುವುದು.
7. ಅರ್ಹ ವ್ಯಕ್ತಿಗಳಿಗೆ ಮಿಗತೆ ಭೂಮಿ ದೊರೆಯದಿರುವುದು.

ಸಾಧ್ಯತೆಗಳು.

1. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು.
2. ಕಿರುಕೈಗಾರಿಕೆಗಳಿಗೆ ಆರ್ಥಿಕ ಸಹಾಯ ನೀಡಬೇಕು.
3. ಎಲ್ಲಾ ವಾರ್ಡುಗಳಲ್ಲಿಯೂ ಅಂಗನವಾಡಿಗಳನ್ನು ನಿರ್ಮಿಸಬೇಕು.
4. ಎಲ್ಲಾ ವಾರ್ಡುಗಳಲ್ಲಿಯೂ ಮಹಿಳಾ ಸಮಾಜವನ್ನು ರೂಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
5. ಸಾಂಸ್ಕೃತಿಕ ಸಂಸ್ಥೆಗಳನ್ನು ವಿಕೀಕರಣಗೊಳಿಸುವ ಕ್ರಮ ಕೈಗೊಳ್ಳಬೇಕು.
6. ಎಲ್ಲ ವಲಯಗಳಲ್ಲಿರುವ ಕಾರ್ಮಿಕರನ್ನು ಕಾರ್ಮಿಕರ ಕಲ್ಯಾಣ ನಿಧಿಗೆ ಸದಸ್ಯರಾಗುವಂತೆ ಪ್ರೋತ್ಸಾಹಿಸಬೇಕು.
7. ಮಾತೃ-ಶಿಶು ಆರೋಗ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.
8. ಸರಕಾರಿ ಭೂಮಿಗಳನ್ನು ಇತರರು ಆಕ್ರಮಿಸದಂತೆ ತಡೆದು ಅದನ್ನು ಅರ್ಹ ವ್ಯಕ್ತಿಗಳಿಗೆ ಹಂಚಬೇಕು. ಇಂತಹ ಭೂಮಿಗಳಲ್ಲಿ ಸಾಮಾಜಿಕ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲು ಅವಕಾಶ ನೀಡಬೇಕು.
9. ಗ್ರಾಹಕ ಹಿತರಕ್ಷಣಾ ಸಮಿತಿಯನ್ನು ರೂಪಿಸಬೇಕು.

ಪೆನ್ಶನ್ ಆರ್ಥಿಕ ಸಹಾಯ ಲಭಿಸಿದವರ ವಿವರ.

1	ವಿಧವಾ ವೇತನ	62
2	ವಿಕಲಾಂಗ ವೇತನ	37
3	ವೃದ್ಧಾಪ್ಯ ವೇತನ	20
4	ಕ್ಷಯರೋಗ ವೇತನ	3

TRYSEM.

ವಿಭಾಗ	92-93	93-94	94-95	95-96
ಪರಿಶಿಷ್ಟ ಜಾತಿ		1	2	
ಪರಿಶಿಷ್ಟ ವರ್ಗ				
ಇತರ		3	1	1
ಒಟ್ಟು	3	2	2	1

ದಾರಿದ್ರ್ಯ ರೇಖೆಗಿಂತ ಕೆಳಗಿರುವ ಕುಟುಂಬಗಳು

ವಿಭಾಗ	1992	1996
ಪರಿಶಿಷ್ಟ ಜಾತಿ	178	193
ಪರಿಶಿಷ್ಟ ವರ್ಗ	88	100
ಇತರ	803	1004
ಒಟ್ಟು	1069	1297

ಕಟ್ಟಡಗಳ ಮಾದರಿ

ವಾರ್ಡ್	ಕಟ್ಟಡಗಳ ಸಂಖ್ಯೆ	1ಕ್ಕಿಂತ ಹೆಚ್ಚು ಮಾಳಿಗೆ ಇರುವ ಮನೆಗಳ ಸಂಖ್ಯೆ	ಮಾಡಿನ ಸ್ವರೂಪ			
			ಕೋಂಕ್ರೀಟ್	ಹಂಚು	ಮುಳಿ	ಇತರ
I	316		9	193	111	3
II	325		6	206	113	
III	346		2	224	119	1
IV	379	1	5	244	129	
V	347		12	246	188	1
VI	372		9	242	121	
VII	413		5	296	112	1
VIII	342	4	6	216	116	

ಮನೆ ನಿರ್ಮಾಣಕ್ಕಿರುವ ವಿವರಗಳು IRDP

ವಾರ್ಡ್	ಮನೆ ಅಗತ್ಯ ವಿರುವ ಕುಟುಂಬಗಳ ಸಂಖ್ಯೆ	ನೀಡಲ್ಪಟ್ಟ ಮನೆಗಳು	ಕೆಲಸ ಸಂಪೂರ್ಣ ವಾದ ಮನೆಗಳು	ಕೆಲಸ ಪೂರ್ತಿ ಯಾಗಲು ಬಾಕಿ ಇರುವ ಮನೆಗಳು	ನೀಡಬೇಕಾದ ಮನೆಗಳು
I	86	14	12	2	72
II	95	3	2	1	92
III	82	3	3	3	79
IV	104	6	6	6	98
V	46	6	6	6	40
VI	83	10	9	1	73
VII	98	10	9	1	88
VIII	112	21	14	7	91

ಗ್ರಾಮೀಣ ಸ್ವೋದ್ಯೋಗಿಗಳಿಗೆ ನೀಡಿರುವ ಉಪಕರಣಗಳು

ವಾರ್ಡ್	ಸ್ವೋದ್ಯೋಗಿಗಳ ಸಂಖ್ಯೆ (IRDP)	ಸಹಾಯ ಲಭಿಸಿದವರು	ಸಹಾಯಕ್ಕೆ ಅರ್ಹತೆಯುಳ್ಳವರು
I	10	2	8
II	10	7	3
III	13	6	7
IV	12	10	2
V	14	2	12
VI	13	6	7
VII	12	1	11
VIII	13	11	2

IRDP ಸರ್ವೆ ಪ್ರಕಾರ ದಾರಿದ್ರ್ಯ ರೇಖೆಗಿಂತ ಕೆಳಗೆ ಇರುವ ಕುಟುಂಬಗಳು

ವಾರ್ಡ್	ಸರ್ವೆ ಪ್ರಕಾರ ಕಂಡುಬಂದ ಒಟ್ಟು ಕುಟುಂಬಗಳ ಸಂಖ್ಯೆ	ಇದರಲ್ಲಿ SC/ ST ಕುಟುಂಬಗಳು	ಇಷ್ಟರತನಕ ಧನಸಹಾಯ ದೊರಕಿದ ಕುಟುಂಬಗಳು	ಇದರಲ್ಲಿ SC/ ST	ಧನಸಹಾಯ ದೊರಕಿ ದಾರಿದ್ರ್ಯ ರೇಖೆಗಿಂತ ಮೇಲಕ್ಕೆ ಬಂದ ಕುಟುಂಬಗಳು	ದಾರಿದ್ರ್ಯ ರೇಖೆಗಿಂತ ಕೆಳಗಿರುವ ಒಟ್ಟು ಕುಟುಂಬಗಳು (ಧನ ಸಹಾಯ ಲಭಿಸಿದವರೂ ಕೂಡ)
I	144	35	7	3	2	144
II	159	40	9	11	3	159
III	137	28	16	5	3	137
IV	174	31	24	6	4	174
V	77	34	3	2	1	77
VI	139	29	7	3	2	139
VII	298	22	6	4	4	298
VIII	188	81	3	18	6	188

ಸಂಸ್ಕೃತಿ

ಕುಂಬಳೆ ಸೀಮೆಯ ಸಾಂಸ್ಕೃತಿಕ ಇತಿಹಾಸದಲ್ಲಿ ಕುಂಬ್ಡಾಜೆ ಪಂಚಾಯತಿಗೂ ಅದರದ್ದೇ ಆದ ಮಹತ್ತರ ಸ್ಥಾನವಿದೆ. ಪಾರ್ತಿಸುಬ್ಬನಿಂದ ಪರಿಪಕ್ವಗೊಂಡ ಯಕ್ಷಗಾನ ಕಲೆಗೆ ನಮ್ಮ ಪಂಚಾಯತಿನಲ್ಲೂ ಸಾಕಷ್ಟು ಸ್ಥಾನಮಾನಗಳಿದ್ದುವು. ಕಲಾಗಾರರ ಬಹುದೊಡ್ಡ ಗಡಣವೇ ಹಿಂದಿನ ಕಾಲದಲ್ಲಿ ನಮ್ಮ ಪಂಚಾಯತಿನಲ್ಲಿ ಅಸ್ತಿತ್ವದಲ್ಲಿತ್ತು ಎಂದರೆ ಹೆಚ್ಚಾಗಲಾರದು. ಹಾಡು, ನಾಟ್ಯ, ಸಂಭಾಷಣೆ, ತಾಳಮೇಳಗಳು, ಆಚಾರ್ಯದ ಸ್ಥಾನ, ಭಾಶಾಭಿವ್ಯಕ್ತಿ ಇತ್ಯಾದಿ ಹಲವಾರು ಕಲಾಪ್ರಕಾರಗಳು ಹಾಸುಹೊಕ್ಕಾಗಿರುವ ಯಕ್ಷಗಾನ ಕಲೆಯು ಕಥಕಳಿಯ ದ್ರಷ್ಟಾರರಿಗೆ ಒಂದು ರೀತಿಯ ಉತ್ತೇಜನವನ್ನು ನೀಡಿತ್ತು ಎಂದರೆ ವಿಶೇಷ ತಪ್ಪಾಗಲಾರದು ಎಂದೆನಿಸುತ್ತದೆ. "ಕೊಟ್ಟಾರಕರ"ದ ರಾಜರು ಕೊಲ್ಲೂರಮ್ಮನ ದರ್ಶನ ಪಡೆದು ಮರಳುವ ವೇಳೆ ಪಾರ್ತಿಸುಬ್ಬನ ಭೇಟಿಯಾಗಲು ದೊರೆತ ಸುವರ್ಣ ಸಂದರ್ಭವು ರಾಜರ "ಕಥಕಳಿಯ"ಯ ಕುರಿತಾಗಿರುವ ಕನಸು ನನಸಾಗಲು ಸ್ವಲ್ಪವಾಟ್ಟಿಗೆ ಉತ್ತೇಜನವಿತ್ತಿತು ಎಂದರೆ ಅತಿಶಯೋಕ್ತಿಯಾಗಲಾರದು. "ಕೊಟ್ಟಾರಕರ" ರಾಜರ ಹಾಗೂ "ಕೋಟಯಂ" ರಾಜರ ಕರಸಂಜಾತವಾದ "ಕಥಕಳಿ" ಎಂಬ ಮೇರುಕಲೆಗೂ ಯಕ್ಷಗಾನಕ್ಕೂ ಎಷ್ಟರ ಮಟ್ಟಿನ ಸಾಮೀಪ್ಯವಿದೆ ಎಂಬುದು ಸಂಶೋಧನಾತ್ಮಕ ವಿಷಯವಾಗಿರುತ್ತದೆ.

ಕುಂಬ್ಡಾಜೆ ಪಂಚಾಯತಿಗೆ ಒಳಪಟ್ಟ ಯಕ್ಷಗಾನ ಕಲಾವಿದರಲ್ಲಿ ಪ್ರಾತಃಸ್ಮರಣೀಯರೆಂದರೆ ದಿವಂಗತರಾದ ಮವ್ವಾರು ಕಿಟ್ಟಣ್ಣ ಭಾಗವತರು, ಅಗಲ್ಪಾಡಿ ಮಹಾಲಿಂಗ ಮಣಿಯಾಣಿಗಳು. ಮಹಾಲಿಂಗ ಮಣಿಯಾಣಿಗಳ ಯಕ್ಷಗಾನ ವೇಷಗಾರಿಕೆಗೆ ಕರ್ನಾಟಕ ಸರಕಾರದ ಪ್ರಶಸ್ತಿ ಪ್ರದಾನವಾಗಿದೆ. ಮೂಲತಃ ಗೋಸಾಡದವರಾದ ದಿ. ನಾರಂಪಾಡಿ ಸುಬ್ಬಯ್ಯ ಶೆಟ್ಟರು, ಅಗಲಪಾಡಿ ಅಚ್ಯುತ ಮಣಿಯಾಣಿ, ಅಗಲಪಾಡಿ ಕುಂಞ್ಞಿಕೃಷ್ಣ ಮಣಿಯಾಣಿ, ಉಪ್ಪಂಗಳ ಕುಂಞ್ಞಿರಾಮ ಮಣಿಯಾಣಿ, ಅಗಲಪಾಡಿ ನಾರಾಯಣನ್ ಮಂಜಪ್ಪ, ಕಂಡೆತ್ತೋಡಿ ನಾರಾಯಣ ಕೇಕುಣ್ಣಾಯ, ಕೀರಿಕ್ಕಾಡು ವಿಷ್ಣುಭಟ್, ಮಠದಮೂಲೆ ಮಂಜಪ್ಪ ಶೆಟ್ಟಿ ಎಂಬವರೆಲ್ಲರೂ ಯಕ್ಷಗಾನ ಕಲಾಕ್ಷೇತ್ರದಲ್ಲಿ ಹೆಸರಾಂತ ಕಲಾವಿದರಾಗಿದ್ದರು. ಆ ಕಾಲದಲ್ಲಿ ಉಬ್ರಂಗಳ, ಅಗಲಪಾಡಿ ಎಂಬೀ ಕ್ಷೇತ್ರ ಪರಿಸರಗಳಲ್ಲಿ ಯಕ್ಷಗಾನ ತರಗತಿಗಳೂ ಜರಗುತ್ತಿದ್ದುವು. ವಿದ್ಯಾಕೇಂದ್ರಗಳಲ್ಲೂ, ಭಜನಾ ಮಂದಿರಗಳಲ್ಲೂ ಯಕ್ಷಗಾನ ಕಲಾಪ್ರದರ್ಶನವು ನಡೆಯುತ್ತಲಿತ್ತು. ಆದರೆ, ಈ ದಿನಗಳಲ್ಲಿ ನಮ್ಮ ಪಂಚಾಯತು ಕುಂಬ್ಡಾಜೆಯಲ್ಲಿ ಯಕ್ಷಗಾನ ಕಲೆಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲ.

ಗಿರಿಜನ ಹಾಗೂ ಗಿರಿವರ್ಗ ಜನಾಂಗದವರೆಲ್ಲ ಹಿಂದಿನ ಕಾಲಗಳಲ್ಲಿ ಅವೆಷ್ಟೋ ಉತ್ತಮ ಕಲಾಪ್ರಕಾರಗಳಿದ್ದುವು. "ಆಟಿಕಳಂಜ" "ಸೋಣೆ ಜೋಗಿ","ಬೇಡ", "ಕನ್ಯಾಪು" ಎಂಬ ಕಲಾರೂಪಗಳು ಅವುಗಳಲ್ಲಿ ಪ್ರಾಮುಖ್ಯವಾದವುಗಳಾಗಿರುತ್ತವೆ. "ಆಟಿಕಳಂಜ" ಕರ್ಕಾಟಕ ಮಾಸದಲ್ಲಿ ಮನೆ ಮನೆಗಳಲ್ಲಿ ಪ್ರದರ್ಶಿಸಲ್ಪಡುತ್ತದೆ. ಸಿಂಹ ಮಾಸದಲ್ಲಿ ಪ್ರದರ್ಶಿಸಲ್ಪಡುವುದೇ "ಸೋಣೆ ಜೋಗಿ" ಮತ್ತು "ಬೇಡ". ಬೆಳೆಕಟಾವು ಕಳೆದ ಮೇಲೆ ಮಕರ ಮಾಸದಲ್ಲಿ ಗಿರಿಜನ ಹೆಂಗಸರು ಪ್ರತಿ ಮನೆಯಲ್ಲೂ ಪ್ರದರ್ಶಿಸುವ "ಮಾದಿರ" ನಾಟ್ಯವಿಶೇಷವು ಈಗೀಗ ತೀರಾ ವಿರಳವಾಗುತ್ತಾ ಬಂದಿರುತ್ತದೆ.

ಇನ್ನು "ಕಾವು" ಎಂಬ ಹೆಸರಿನಲ್ಲಿರುವ ಕೆಲವು ದೈವಸ್ಥಾನಗಳಲ್ಲಿ ಹತ್ತು ಹಲವು ಭೂತಕೋಲಗಳು ನಡೆಯುತ್ತಿವೆ. ಪೂಮಾಣಿ, ಕಿನ್ನಿಮಾಣಿ, ವಯನಾಡು ಕುಲವ, ಚಾಮುಂಡಿ, ಧೂಮಾವತಿ , ಬೀರ್ನಾಳು ಇತ್ಯಾದಿ 40ಕ್ಕೆ ಒಂದು ಕಡಿಮೆ ಭೂತಗಳಿಗೆ ಕೋಲ ರೂಪವಾದ ಹರಕೆ ಸಲ್ಲುತ್ತದೆ. ಭೂತಕೋಲ ಕಟ್ಟುವವರಲ್ಲಿ ಮಾರನಡ್ಕದ ಬೀರ ಕೃಷ್ಣ ಪಣಿಕ್ಕರ್ ಪಂಬೆಕೋಪಾಲ ಕುಂಟಕೋಪಾಲ ಎಂಬವರು ಬಹಳ ಹೆಸರು ವಾಸಿಯಾಗಿದ್ದರು.

ಹಳೆಯ ಸಂಪ್ರದಾಯಸ್ಥರ ಹಾಗೂ ದನಿಗಳ ಅಧಿಕಾರ ಚೆಲ್ಲಾಟದ ಪ್ರಭುತ್ವದ ಹಾಗೂ ಠೀವಿಗಳ ಅಳಿದುಳಿದ ಕುರುಹೋ ಎಂಬಂತೆ ಕುಂಬಳೆ ಸೀಮೆಯಲ್ಲಿ "ಕೋಳಿಕಟ್ಟ" ಅಲ್ಲಲ್ಲಿ ಎದ್ದು ಕಾಣುತ್ತದೆ. ಕಂಬಳ ಸ್ಪರ್ಧೆ ನಮ್ಮ ಪಂಚಾಯತಿನಲ್ಲಿ ಹಿಂದಿನಿಂದಲೇ ನಡೆದು ಬರುತ್ತಿದ್ದ ಒಂದು ಸ್ಪರ್ಧೆಯಾಗಿದೆ. ಗೋಸಾಡ, ಅಗಲಪಾಡಿ, ಉಬ್ರಂಗಳ ದೇಲಂಪಾಡಿ ಉಮಾಮಹೇಶ್ವರ ಆಳಿಂಜ ಎಂಬೀ ದೇವಸ್ಥಾನಗಳ ಪರಿಸರಗಳಲ್ಲಿ ಈ ಹಿಂದೆ ಅದೆಷ್ಟೋ ಸಾಂಸ್ಕೃತಿಕ ಹಾಗೂ ಕಲಾ ಕಾರ್ಯಕ್ರಮಗಳು ಆಗಿಂದಾಗ್ಗೆ ಜರಗುತ್ತಲೇ ಇದ್ದುವು. ಬಹಳ ಹಿಂದಿನ ಕಾಲಗಳಲ್ಲಿ ಅಗಲಪಾಡಿಯು ಒಂದು ಸತ್ರದ ರೂಪದಲ್ಲಿತ್ತು. ಆ ಬಳಿಕ ಅದೊಂದು ದೇವಸ್ಥಾನವಾಗಿ ರೂಪಾಂತರಗೊಂಡಿತು ಎಂದು ಹೇಳಲಾಗುತ್ತದೆ.

ಉಬ್ರಂಗಳದ ಶಾಸ್ತಾರ ದೇವರು ತುಂಬ ಹೆಸರುವಾಸಿಯಾಗಿರುತ್ತಾರೆ. ಈ ಶಾಸ್ತಾರ ದೇವರನ್ನು ಉತ್ತರ ಶಬರಿಮಲೆ ಅಯ್ಯಪ್ಪ ಎಂದು ಸಂಬೋಧಿಸುವ ರೂಢಿ ಇದೆ.

ತುಳುನಾಡಿನ ಎಲ್ಲಾ ಕಲಾರೂಪಗಳಲ್ಲಿ ಕುಂಬ್ಡಾಜೆ ಪಂಚಾಯತು ಪ್ರಥಮಸ್ಥಾನ ವಹಿಸುವುದಿದ್ದರೂ ಕೇರಳೀಯರ ತಾಜಾ ಹಬ್ಬವಾದ "ಓಣಂ" "ತಿರುವಾದಿರ" - ಎಂಬೀ ಹಬ್ಬಗಳನ್ನು ಆಚರಿಸಲಾಗುತ್ತಿಲ್ಲ. ಈ ಕಾರಣದಿಂದ "ಓಣಂ ಇಲ್ಲದ ಊರು" ಎಂದು ನಮ್ಮ ಪಂಚಾಯತನ್ನು ಸಂಬೋಧಿಸಿದರೆ ಹೆಚ್ಚಾಗಲಾರದೇನೊ!

ಸಪ್ತ ಭಾಷೆಗಳ ಆಡುಂಬೊಲವೆಂದು ನಮ್ಮ ಕಾಸರಗೋಡನ್ನು ಕರೆಯುವ ರೂಢಿಯಿದೆ. ಇವುಗಳಲ್ಲಿ ಕನ್ನಡ, ಮಲಯಾಳ, ತುಳು, ಮರಾಠಿ, ಕೊಂಕಣಿ ಎಂಬೀ ಭಾಷೆಗಳನ್ನಾಡುವವರು ನಮ್ಮ ಕುಂಬ್ಡಾಜೆ

ಪಂಚಾಯತಿನಲ್ಲಿದ್ದಾರೆ. ಆಡುಭಾಷೆಯಲ್ಲಿ ತುಳುವಿಗೆ ಹೆಚ್ಚಿನ ಆದ್ಯತೆ ಇದೆ. ಭಾಷೆಯ ವಿಷಯದಲ್ಲೆಂಬಂತೆ ಆಚಾರ - ವಿಚಾರಗಳಲ್ಲೂ ಈ ತಾರತಮ್ಯ ಎದ್ದು ಕಾಣುತ್ತದೆ.

ಮದುವೆ, ಉತ್ತರಕ್ರಿಯಾದಿಗಳು - ಇವುಗಳಲ್ಲೂ ಹಲಕೆಲವು ಪ್ರಬೇಧಗಳಿವೆ. ಗಿರಿವರ್ಗ ಜನಾಂಗದವರಲ್ಲಿ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ಹಣ ಕೊಡುವುದರ ಬದಲು ಗಂಡಿನ ಕಡೆಯವರು ಹೆಣ್ಣಿಗೆ ಹಣ ಕೊಡುವ ಸಂಪ್ರದಾಯ ಇಂದಿಗೂ ಪ್ರಚಲಿತವಾಗಿದೆ.

"ಆನಂದತೀರ್ಥ" ಎಂಬ ಸಮಾಜೋದ್ಧಾರಕರು ದಲಿತ ಜನರಿಗೆ ದೇವಸ್ಥಾನಕ್ಕೆ ಪ್ರವೇಶ ದೊರಕುವಂತೆ ಮಾಡಿ ಬಹುದೊಡ್ಡ ಕ್ರಾಂತಿಯನ್ನೇ ಎಬ್ಬಿಸಿ ಬಿಟ್ಟರು !

ಕುಂಬ್ಡಾಜೆಯಲ್ಲಿ ಐತಿಹಾಸಿಕ ಪ್ರಾಧಾನ್ಯತೆಯಿರುವ ಕೆಲವೊಂದು ಅವಶೇಷಗಳು ಶೋಧಿಸಲ್ಪಟ್ಟ ಘಟನೆಯು ನಮ್ಮ ಪಂಚಾಯತಿನ ಸಾಂಸ್ಕೃತಿಕ ಹಿನ್ನೆಲೆಗೆ ಬೆಳಕು ಚೆಲ್ಲುವ ವಿಷಯವೇ ಆಗಿರುತ್ತದೆ.

ನಮ್ಮ ಪಂಚಾಯತಿನ ಹಿಂದಿನ ಕಾಲಘಟ್ಟದಲ್ಲಿ ಮುಸ್ಲೀಮರು ಹಿಂದುಗಳೊಡನೆ ಸಹಬಾಳ್ವೆ ನಡೆಸುತ್ತಿದ್ದರು. ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಮುಸ್ಲೀಮರೂ ಹಿಂದುಗಳೂ ಪರಸ್ಪರ ಒಡಹುಟ್ಟುಗಳಂತೆ ವರ್ತಿಸುತ್ತಿದ್ದರು ಎಂಬುದು ಹೆಮ್ಮೆಯ ವಿಷಯವೇ ಆಗಿರುತ್ತದೆ. ದೇವಸ್ಥಾನ ಹಾಗೂ ಮಸೀದಿಗಳ ನಿರ್ಮಾಣ ಕಾರ್ಯಗಳಲ್ಲಿ ಅವರು ಪರಸ್ಪರ ಸಹಕರಿಸುತ್ತಿದ್ದರು. "ಕುಂಬ್ಡಾಜೆ ಮಸೀದಿ"ಯು ನಮ್ಮ ಪಂಚಾಯತಿನ ಅತಿಪುರಾತನ ಮಸೀದಿಯಾಗಿರುತ್ತದೆ. ಟಿಪ್ಪೂ ಸುಲ್ತಾನನ ಕಾಲದಲ್ಲಿ ಆ ಮಸೀದಿಯನ್ನು ನಿರ್ಮಿಸಲಾಯಿತು. ಮವ್ವಾರಿನ "ಷಡಾನನ" ಪುಸ್ತಕ ಭಂಡಾರವು ನಮ್ಮ ಪಂಚಾಯತಿನ ಮಟ್ಟಿಗೆ ತುಂಬ ಹಳೆಯ ಒಂದು ಸಂಸ್ಥೆಯಾಗಿರುತ್ತದೆ. ಬಹಳಷ್ಟು ಕಲಾ ಶಾರೀರಿಕ ಕ್ಲಬ್ಬುಗಳು ಈ ಪಂಚಾಯತಿನಲ್ಲಿ ಅಸ್ತಿತ್ವದಲ್ಲಿದ್ದರೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ಕೊಡಬಲ್ಲ ಸಂಸ್ಥೆಗಳು ತೀರಾ ವಿರಳ ಎಂದರೆ ತಪ್ಪಾಗಲಾರದು. ಇಡೀ ಪಂಚಾಯತಿನಲ್ಲಿರುವ ಪುಸ್ತಕ ಭಂಡಾರವೆಂದರೆ ಕೆವಲ ಮೂರು ಮಾತ್ರ. ಇವುಗಳಲ್ಲೊಂದಿ ಪಂಚಾಯತು ಲೈಬ್ರೆರಿಯಾಗಿರುತ್ತದೆ. ಉಪಕಾರ ದೃಷ್ಟಿಯಿಂದ ಪ್ರಸ್ತುತ ಪುಸ್ತಕ ಭಂಡಾರವು ಸಾಕಷ್ಟು ಉತ್ತಮ ಸ್ಥಿತಿಯಲ್ಲಿರುವುದಿಲ್ಲ. ಪುಸ್ತಕಗಳ ಸಂಖ್ಯೆ ಸಾಕಷ್ಟು ಇಲ್ಲದಿರುವುದರಿಂದಲೂ ನೂತನ ಪುಸ್ತಕಗಳು ಕಡಿಮೆಯಾಗಿರುವುದರಿಂದಲೂ ವಾಚಕರು ಪ್ರಸ್ತುತ ಲೈಬ್ರೆರಿಗೆ ಸಂದರ್ಶನ ನೀಡಲು ಹಿಂಜರಿಯುತ್ತಿದ್ದಾರೆ. ಪುಸ್ತಕಗಳ ಸಂಖ್ಯೆಯಲ್ಲಿ ಏತಡ್ಕ ಹಾಗೂ ಷಡಾನನ ಕುಂಬ್ಡಾಜೆ ಗ್ರಾಮಸೇವಾ ಸಂಘ ಲೈಬ್ರೆರಿ ಏತಡ್ಕ 1948 ಪುಸ್ತಕ ಭಂಡಾರವು ತುಂಬ ತೃಪ್ತಿಕರವಾಗಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ನಮ್ಮ ಪಂಚಾಯತಿನ "ವಿಚಿತ್ರ ಏತಡ್ಕ" ಎಂಬ ಅಂಕಿತನಾಮದಿಂದ ಪ್ರಸಿದ್ಧರಾದ ಶ್ರೀ. ಏತಡ್ಕ ಹರಿಹರಭಟ್ಟರ ಸೇವೆಯು ನಿಜವಾಗಿಯೂ ಪ್ರಶಂಸನೀಯವೇ ಆಗಿದೆ. ಅವರು ತಮ್ಮ ಸರಳ ಹಾಗೂ ಹಾಸ್ಯರಸ ಪ್ರಧಾನವಾದ ಕಿರುಗವನಗಳ ಸೃಷ್ಟಿಯಿಂದ ಸಾಹಿತ್ಯರಸಿಕರ ಹೃದಯವನ್ನು ಸೂರೆಗೈಯಲು ಸಮರ್ಥರಾಗಿದ್ದಾರೆ ಎಂದರೆ ಹೆಚ್ಚಾಗಲಾರದು. ಕಳೆದ ತಿಂಗಳಲ್ಲಿ ಶ್ರೀ ಭಟ್ಟರ ಆರಾಧಕರು ಪಳ್ಳತ್ತಡ್ಕದ ಮುದ್ದು ಮಂಟಪದಲ್ಲಿ ಅವರ ಸಪ್ತತಿ ಸಮಾರಂಭವನ್ನು ಏರ್ಪಡಿಸಿದ್ದರು. ಪ್ರಸ್ತುತ ಸಮಾರಂಭಕ್ಕೆ ಜ್ಞಾನಪೀಠಪ್ರಶಸ್ತಿ ವಿಜೆತ ಶ್ರೀಮಾನ್ ಯು. ಆರ್. ಅನಂತಮೂರ್ತಿ ಇವರು ಪ್ರಧಾನ ಅತಿಥಿಗಳಾಗಿದ್ದರು ಎಂಬುದು ನಮಗೆಲ್ಲ ಹೆಮ್ಮೆ ತರುವ ವಿಷಯಗಳೇ ಆಗಿರುತ್ತದೆ.

ಕಲಾಸಾಂಸ್ಕೃತಿಕ ಹಾಗೂ ಆಟೋಟ ಚಟುವಟಿಕೆಗಳಲ್ಲಿ ನಮ್ಮ ಪಂಚಾಯತು ಸಾಕಷ್ಟು ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಲಾಗುವುದಿಲ್ಲ. ಕೆಲವು ಸ್ಪೋರ್ಟ್ಸ್ ಕ್ಲಬ್ಬುಗಳಿವೆಯಾದರೂ ಅವುಗಳ ಕೀರ್ತಿ ನಮ್ಮ ಪಂಚಾಯತಿನ ಹೊರವಲಯಕ್ಕೆ ತಲಪುವುದೇ ಇಲ್ಲ.

ಸಮಸ್ಯೆಗಳು

1. ಪಂಚಾಯತಿನ ಹಲವು ಕಡೆಗಳಲ್ಲಿ ಸಾಂಸ್ಕೃತಿಕ ಕೇಂದ್ರಗಳು ಸಾಕಷ್ಟು ಇರುವುದಿಲ್ಲ.

2. ಜನವಿದ್ಯಾ ಕೇಂದ್ರಗಳ ಚಟುವಟಿಕೆಯು ಫಲಪ್ರದವಾಗಿಲ್ಲ.

3. ಹೆಚ್ಚಿನ ವಾರ್ಡುಗಳಲ್ಲಿ ವಾರ್ತಾಪತ್ರಿಕೆ ಓದುವ ವ್ಯವಸ್ಥೆಯಾಗಲಿ ಪುಸ್ತಕ ಭಂಡಾರಗಳಾಗಲಿ ಇರುವುದಿಲ್ಲ.

4. ಪುರಾತನ ಕಲಾಪ್ರಕಾರಗಳನ್ನು ಕಾಪಾಡಿಕೊಂಡು ಬರುವುದಕ್ಕಿರುವ ಯಾವುದೇ ವ್ಯವಸ್ಥೆ ಈ ಪಂಚಾಯತಿನಲ್ಲಿಲ್ಲ.

5. ಸಮಾಜಸೇವಾ ಕ್ಷೇತ್ರದಲ್ಲೂ ಮುಂದಾಳುತನದ ತರಬೇತಿ ಕೇಂದ್ರಗಳಲ್ಲೂ ಯಾವುದೇ ರೀತಿಯ ಉತ್ತೇಜನ ನೀಡಲಾಗುತ್ತಿಲ್ಲ.

6. ವಿದ್ಯಾ ಸಂಸ್ಥೆಗಳಲ್ಲಿ ಕಲೆ ಹಾಗೂ ಆಟೋಟಗಳಿಗೆ ಸಲುವ ಪ್ರೋತ್ಸಾಹವು ಅಷ್ಟೊಂದು ಸೃಪ್ತಿದಾಯಕವಾಗಿಲ್ಲ.

7. ಶಾಲಾಲೈಬ್ರರಿಗಳು ಮಕ್ಕಳಿಗೆ ಸಾಕಷ್ಟು ಪ್ರಯೋಜನಪ್ರದವಾಗಿಲ್ಲ.

8. ಸ್ವಯಂ ಸೇವಾ ಸಂಸ್ಥೆಗಳಿಗೂ ಪಂಚಾಯತಿನಿಂದ ಯಾವುದೇ ರೀತಿಯ ಆರ್ಥಿಕ ನೆರವು ದೊರಕುತ್ತಿಲ್ಲ.

9. ಪಂಚಾಯತ್ ದಿನಾಚರಣೆ, ಓಣಂ ಸ್ಪೋರ್ಟ್ಸ್,ಕೇರಳೋತ್ಸವ ಎಂಬೀ ಹಬ್ಬಗಳಲ್ಲಿ ಸಾರ್ವಜನಿಕರ ಸಹಭಾಗಿತ್ವವು ಸಾಕಷ್ಟು ಇರುವುದಿಲ್ಲ.

10. ಕಲೆ ಮತ್ತು ಆಟೋಟಗಳಿಗೆ ಸಂಬಂಧಿಸಿದ ಯಾವುದೇ ತರಬೇತಿ ಕೇಂದ್ರಗಳು ನಮ್ಮ ಪಂಚಾಯತಿನಲ್ಲಿಲ್ಲ.

11. ವಿವಿಧ ಸ್ವಯಂಸೇವಾ ಸಂಸ್ಥೆಗಳಲ್ಲಿ ಪರಸ್ಪರ ಸ್ಪರ್ಧಾ ಮನೋಭಾವ ಇರುವುದು.

ಕೊರತೆಗಳನ್ನು ನೀಗಾಡುವುದಕ್ಕಿರುವ ಸೂಚನೆಗಳು

1. ಪುಸ್ತಕ ಭಂಡಾರ, ಸ್ವಯಂ ಸೇವಾ ಸಂಸ್ಥೆಗಳು, ಇನ್ನಿತರ ಸಾರ್ವಜನಿಕ ಕೇಂದ್ರಗಳಿಗೆ ಪತ್ರಿಕೆ ಹಾಗೂ ಮಾಸಪತ್ರಿಕೆಗಳನ್ನು ಉಚಿತವಾಗಿ ವಿತರಣೆ ಮಾಡುವುದು.

2. ಆಟೋಟ ಸಂಸ್ಥೆಗಳಿಗೆ ಸಂಬಂಧಪಟ್ಟ ಉಪಕರಣಗಳನ್ನು ಒದಗಿಸುವುದು.

3. ಪ್ರತಿಯೊಂದು ವಾರ್ಡಿನಲ್ಲೂ ಕಡಿಮೆಯೆಂದರೆ ಒಂದು ಪುಸ್ತಕ ಭಂಡಾರವನ್ನಾದರೂ ಒದಗಿಸುವ ವ್ಯವಸ್ಥೆಯಾಗಬೇಕು.

4. ಪಂಚಾಯತಿನ ಬೇರೆ ಬೇರೆ ಪ್ರಮುಖ ಕೇಂದ್ರಗಳನ್ನಾರಿಸಿ ಕನಿಷ್ಟ 5 ಉತ್ತಮ ಪುಸ್ತಕ ಭಂಡಾರಗಳನ್ನು ಸ್ಥಾಪಿಸಬೇಕು.

5. ಸಾಕ್ಷರತಾ ಆಂದೋಲನವನ್ನು ಸಜೀವಗೊಳಿಸಬೇಕು.

6. ಕಲಾಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಲವಿರುವ ಶಾಲಾ ಮಕ್ಕಳನ್ನು ಗುರುತಿಸಿ ಪಂಚಾಯತು ಮಟ್ಟದಲ್ಲಿ ಕಮ್ಮಟಗಳನ್ನೇರ್ಪಡಿಸಬೇಕು.

7. ಬೇರ ಬೇರೆ ಸಂಸ್ಥೆಗಳು ಒಂದಾಗಿ ಪಂಚಾಯತು ಮಟ್ಟದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಬೇಕು.

8. ಮದ್ಯವ್ಯಸನದ ವಿರುದ್ಧ ಪರಿಣಾಮಕಾರಿಯಾದ ಬೋಧನಾ ಕಾರ್ಯಗಳನ್ನು ಏರ್ಪಡಿಸಬೇಕು.

9. ಶಾಲೆಗಳಲ್ಲಿ ಕಲಾಸಾಹಿತ್ಯ ಕ್ಷೇತ್ರಗಳ ಮಟ್ಟಿಗೆ ಸಂದರ್ಶಕ ಅಧ್ಯಾಪಕರುಗಳನ್ನು ನೇಮಿಸಬೇಕು.

10. ಪಂಚಾಯತಿನ ಮಿನಿಕ್ರೀಡಾಂಗಣವನ್ನು ಉಪಯೋಗಪ್ರದವಾಗಿಸಬೇಕು.

11 ಪಂಚಾಯತಿನ ಬೇರೆ ಬೇರೆ ಕಡೆಗಳಲ್ಲಿ ಸಾಂಸ್ಕೃತಿಕ ಕೆಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ಪಂಚಾಯತು ಮಟ್ಟದಲ್ಲಿ ಒಂದು ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಬೇಕು.

12. ಪಂಚಾಯತು ಮಟ್ಟದಲ್ಲಿ ಪ್ರತಿ ತಿಂಗಳು ಎಂಬಂತೆ ಒಂದೊಂದು ಹಸ್ತ ಪತ್ರಿಕೆಯನ್ನು ಹೊರಡಿಸಬೇಕು.

13. ಯಕ್ಷಗಾನಕ್ಕೆ ಸಂಬಂಧಿಸಿ ಭಾಗವತಿಕೆ, ನಾಟ್ಯ, ಸಂಭಾಷಣೆ ಇತ್ಯಾದಿಗಳಲ್ಲಿ ಪಂಚಾಯತು ಮಟ್ಟದಲ್ಲಿ ತರಗತಿಗಳನ್ನೇರ್ಪಡಿಸುವ ವ್ಯವಸ್ಥೆ ಆಗಬೇಕು.

14. ಸಾರ್ವಜನಿಕರಲ್ಲಿ ಶಾಸ್ತ್ರೀಯ ಸಂಗೀತದ ಆಗುಹೋಗುಗಳನ್ನು ಬೇರೂರಿಸುವುದಕ್ಕೆ ಸಂಗೀತ ತರಗತಿಗಳು, ವಾಗ್ಗೇಯಕಾರರ ದಿನಾಚರಣೆ, ಪ್ರಚಲಿತ ಪ್ರಸಿದ್ಧ ಸಂಗೀತ ವಿದ್ವಾಂಸರಿಂದ ಸಂಗೀತ ಗೋಷ್ಠಿಗಳೇ ಮುಂತಾದ ಕಾರ್ಯಕ್ರಮಗಳನ್ನು ಪಂಚಾಯತು ಮಟ್ಟದಲ್ಲಿ ಏರ್ಪಡಿಸುವ ಹುನ್ನಾರ ಮಾಡಬೇಕು.

15. ಧಾರ್ಮಿಕ ಉತ್ಸವಗಳ ಅಂಗವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ಜರಗುವ "ಕೋಳಿಅಂಕ"ಕ್ಕೆ ಅನುಮತಿ ನೀಡಬೇಕು.

☎: 460031

Kumbdaje Service Co-operative Bank Ltd.,

No. L 383

P. O. Movvar - 671 543, Kasaragod

With Best compliments
to Your Development seminar held on
8 - 12 - 1996

M. Sanjeeva Shetty,
President

M. K. Maniyani,
Secretary.

ವನಿತಾ

ಸ್ತ್ರೀ-ಸ್ವಾತಂತ್ರ್ಯದ ಕ್ಷೇತ್ರದಲ್ಲಿ ನಮ್ಮ ಪಂಚಾಯತಿನಲ್ಲಿ ಈತನಕ ಗಮನಾರ್ಹವಾದ ಕಾರ್ಯವೊಂದು ನಡೆದಿಲ್ಲವಾದರೂ, ಸ್ತ್ರೀಯರಲ್ಲಿ ಕೆಲವರಾದರೂ ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗೆ ಸಮಾನಾವಾದ ಸ್ಥಾನಮಾನಗಳನ್ನು ಹೊಂದಿದ್ದಾರೆ. ಬಹುಪಾಲು ಮಹಿಳೆಯರು ವಿದ್ಯಾಭ್ಯಾಸ, ಉದ್ಯೋಗ ಮತ್ತು ಸಮಾನತೆ ಎಂಬೀ ಕಾರ್ಯಗಳಲ್ಲಿ ಪುರುಷರಿಗಿಂತ ಹಿಂದುಳಿದಿದ್ದಾರೆ. ಎಲ್ಲಾ ಪಂಚಾಯತುಗಳಲ್ಲಿರುವಂತೆ ನಮ್ಮಲ್ಲಿಯೂ ಸ್ತ್ರೀಯು ಪಂಜರದ ಪಕ್ಷಿಯಾಗಿರುವುದು ಅಭಿವೃದ್ಧಿಗೆ ತೊಡಕನ್ನುಂಟುಮಾಡಿದೆ. ಸ್ವಾವಲಂಬಿಗಳಾಗಲು ಸಾಧ್ಯವಿರುವ ಮಹಿಳೆಯರನ್ನು ಗುರುತಿಸಲು ಈ ತನಕ ನಮ್ಮಿಂದ ಸಾಧ್ಯವಾಗಿಲ್ಲವೆಂಬುದು ನಗ್ನ ಸತ್ಯವಾಗಿದೆ.

ಪಂಚಾಯತಿನಲ್ಲಿರುವ ಒಟ್ಟು ಜನಸಂಖ್ಯೆ 12545ರಲ್ಲಿ 6151 ಮಹಿಳೆಯಾಗಿರುವರು. ಇದು ಪುರುಷ ಸಂಖ್ಯೆಗಿಂತ 143 ಕಡಿಮೆಯಾಗಿದೆ. ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿನಿಯರು 1038. ಇದು ವಿದ್ಯಾರ್ಥಿಗಳ ಸಂಖ್ಯೆಗಿಂತ 136 ಕಡಿಮೆಯಾಗಿರುವುದು. ಸ್ತ್ರೀ ಮನೆ ಯಜಮಾನಿಯಾಗಿರುವ ಕುಟುಂಬಗಳು 64ಇವೆ. ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುವ 1350 ಮಂದಿಯಲ್ಲಿ 1318 ಮಹಿಳೆಯರಾಗಿದ್ದಾರೆ.

ಕೃಷಿ ಮತ್ತು ಬೀಡಿ ಉದ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಸ್ತ್ರೀಯರು ನಿರತರಾಗಿದ್ದಾರೆ. ಹೆಚ್ಚಿನ ಕುಟುಂಬಗಳಿಂದಲೂ ಕನಿಷ್ಠ ಒಬ್ಬರಾದರೂ ಬೀಡಿ ಉದ್ದಿಮೆಯನ್ನು ಅವಲಂಬಿಸಿದ್ದಾರೆ. ಇವರಲ್ಲಿ ಹೆಚ್ಚಿನವರು ಕನಿಷ್ಠ ವೇತನವನ್ನು ಪಡೆಯುತ್ತಾರೆ ಎಂದರೆ ತಿಂಗಳೊಂದರ ಸರಾಸರಿ ರೂ 400/- ಮಾತ್ರ ಆಗಿರುತ್ತದೆ. ಈಗಲೂ ವಿಕಮುಖಿಯಾದ ಶೋಷಣೆಯು ಕಂಡುಬರುತ್ತದೆ. ಕಾರ್ಮಿಕ ಸಂಘಟನೆಗಳ ಅಭಾವ, ಶೋಷಣೆಯ ಅರಿವು ಇಲ್ಲದಿರುವಿಕೆ ಎಂಬಿವುಗಳು ಈ ಕ್ಷೇತ್ರವನ್ನು ಕಷ್ಟಕ್ಕೆ ಈಡುಮಾಡಿದೆ.

ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನವು ಬಹಳ ಹಿಂದುಳಿದಿದೆ. ಕೆಲವೇ ಸ್ತ್ರೀಯರು ಮಾತ್ರ ಉನ್ನತ ವಿದ್ಯಾಭ್ಯಾಸಕ್ಕೆ ಮುಂದುವರಿಯುತ್ತಿದ್ದಾರೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಜನರು ಹೆಚ್ಚಿನ ಆಸಕ್ತಿ ವಹಿಸುವುದಿಲ್ಲ. ಮುಸ್ಲಿಂ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ತೀರಾ ದೊರೆಯುವುದಿಲ್ಲ. ಕೌಟುಂಬಿಕ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಸಾಕಷ್ಟು ಅನುಭವವಿರುವ ಸ್ತ್ರೀಯರು ತೀರಾ ಕಡಿಮೆ.

ಪಂಚಾಯತಿನಲ್ಲಿ ಕೇವಲ ಮೂರು ಮಹಿಳಾ ಸಮಾಜಗಳು ಮಾತ್ರ ಕಾರ್ಯನಿರ್ವಹಿಸುತ್ತವೆ. ಮಹಿಳಾ ಸಹಕಾರೀ ಸಂಘ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸುವ ಮಹಿಳಾ ಸಂಘಟನೆಗಳು ವಿರಳ. ಮಹಿಳೆಯರಿಗಿರುವ ಸ್ವೋದ್ಯೋಗ ತರಬೇತಿ ಕ್ಷೇತ್ರದಲ್ಲಿ ಜಯನಗರ ಮಹಿಳಾ ಸಮಾಜದ ಸೇವೆಯು ಸ್ತುತ್ಯರ್ಹ. ಈ ಸಂಸ್ಥೆಯಿಂದ ನೂರಾರು ಸಂಖ್ಯೆಯಲ್ಲಿ ವನಿತೆಯರು ಹೊಲಿಗೆ, ಕಸೂತಿ, ಪ್ಲೇಸ್ಟಿಕ್ ಕೆಲಸ, ಉಣ್ಣೆನೂಲಿನ ಕೈಗಾರಿಕೆ ಇತ್ಯಾದಿಗಳಲ್ಲಿ ತರಬೇತಿ ಪಡೆದಿದ್ದಾರೆ ಹಾಗೂ ಪಡೆಯುತ್ತಿದ್ದಾರೆ. ಮಹಿಳಾ ಸಮಾಜದ ಸೇವೆಯನ್ನು ಪಡೆಯಲಿಚ್ಛಿಸುವವರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೆಚ್ಚಿನ ವನಿತೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಈ ಸಂಸ್ಥೆಯು ಪರಿಪೂರ್ಣವಾಗಿದೆ.

ಕೇವಲ ಎರಡು ಅಂಗನವಾಡಿ ಕೇಂದ್ರಗಳು ಮಾತ್ರ ಇಲ್ಲಿ ಕಾರ್ಯವೆಸಗುತ್ತಿವೆ. ಎರಡೂ ಕಡೆ ಮಕ್ಕಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ವರ್ಧಿಸುತ್ತಿದೆ. ಹೆಚ್ಚಿನ ಸ್ತ್ರೀಯರಿಗೆ ಉದ್ಯೋಗಾವಕಾಶ ಸಿಗುವುದಕ್ಕಾಗಿ ಪ್ರತಿ ವಾರ್ಡಿನಲ್ಲೂ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವುದು ಅನಿವಾರ್ಯವಾಗಿದೆ. ಮನೆಗಳಲ್ಲಿ ಹಳೆಕಾಲದ ಅಡುಗೆ ಪದ್ಧತಿಯಿಂದ ವನಿತೆಯರು ಇನ್ನೂ ವಿಮೋಚಿತರಾಗಿಲ್ಲ.

ಹೊಗೆರಹಿತ ಒಲೆಗಳ ಪ್ರಚಾರ ಮತ್ತು ಬಳಕೆ ಇಲ್ಲವೆಂದೇ ಹೇಳಬಹುದು. ಕುಟುಂಬ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ನಿರಾಸಕ್ತಿ ಹೊಂದಿದವರೇ ಜಾಸ್ತಿ. 5 ಮಕ್ಕಳಿಗಿಂತ ಹೆಚ್ಚಿರುವ ತಾಯಂದಿರ ಸಂಖ್ಯೆ 147 ಆಗಿದೆ. 15 ಮತ್ತು 45ರ ಮಧ್ಯದ ವಯೋಮಾನವಿರುವ 287 ತಾಯಂದಿರು ಕುಟುಂಬ ಯೋಜನೆಯ ಕ್ರಮವನ್ನು ಅನುಸರಿಸದವರಾಗಿರುವರು.

ವರ್ಷಂಪ್ರತಿ ಹೆರಿಗೆ, ಸರಿಯಾದ ಶುಶ್ರೂಷಾ ಕ್ರಮ ಇಲ್ಲದಿರುವಿಕೆ ತಾಯಂದಿರ ಆರೋಗ್ಯಕ್ಕೆ ಹಾನಿಕರವಾಗಿದೆ. ಮಹಿಳಾ ಸ್ವಾಸ್ಥ್ಯ ಸಂಘಗಳ ಪ್ರತಿ ತಿಂಗಳೂ ಸಭೆಸೇರಿ ಚರ್ಚಿಸುವುದಿದ್ದರೂ ಆರೋಗ್ಯಕರವಾದ ತಿಳುವಳಿಕೆ ತೃಪ್ತಿಕರವಲ್ಲ. ಆಸ್ಪತ್ರೆಯಲ್ಲಿ ಹೆರಿಗೆಯಾಗುವ ತಾಯಂದಿರ ಸಂಖ್ಯೆ ಕೆವಲ ಶೇಕಡಾ 40. ಉಳಿದವರು ಸುರಕ್ಷಿತವಲ್ಲದ, ಅನಾರೋಗ್ಯಕರವಾದ ವಾತಾವರಣದಲ್ಲಿ ಪ್ರಸವಿಸುತ್ತಾರೆ.

ವರದಕ್ಷಿಣೆಯು ಈಗಲೂ ಹೆಣ್ಣುಮಕ್ಕಳ ವಿವಾಹಕ್ಕೆ ತಡೆಯಾಗಿ ಪರಿಣಮಿಸಿದೆ. ಸ್ತ್ರೀಯ ಸಾಮಾಜಿಕ ಸಮತೆಯು ಪುರುಷ ಪ್ರಧಾನ ಸಮಾಜವು ಇನ್ನೂ ಅಂಗೀಕರಿಸಿಲ್ಲ. ಅವರ ದುಡಿಮೆಯ ಮಹತ್ವದ ಕುರಿತು ತಿಳುವಳಿಕೆ ಉಳ್ಳವರು ಈಗಲೂ ಮೌನಿಗಳಾಗಿದ್ದಾರೆ.

ಸಮಸ್ಯೆಗಳು.

1. ಸಂಪೂರ್ಣವಾದ ಸಾಮಾಜಿಕ ಸಮಾನತೆ ಇಲ್ಲ.
2. ಶಿಶು ಸಂರಕ್ಷಣೆಯ ಮೂಲಕ ಸಂವಿಧಾನಗಳನ್ನು ಪಂಚಾಯತಿನಲ್ಲಿ ಪ್ರಚಾರ ಪಡಿಸಿಲ್ಲ.
3. ಸ್ತ್ರೀವಿದ್ಯಾಭ್ಯಾಸಕ್ಕೆ ಸಾಕಷ್ಟು ಪ್ರಾಧಾನ್ಯ ಸಿಗುವುದಿಲ್ಲ.
4. ಸಮಾಜ ಸೇವಾ ಕಾರ್ಯಗಳಲ್ಲಿ ಸ್ತ್ರೀಯರ ಸಹಭಾಗಿತ್ವ ತೀರಾ ಕಡಿಮೆ.
5. ಬಡ ಹೆಣ್ಣುಮಕ್ಕಳ ವಿವಾಹಕ್ಕೆ ಪ್ರತ್ಯೇಕವಾದ ಯೋಜನೆಗಳಿಲ್ಲ.
6. ಸ್ವ-ಉದ್ಯೋಗವನ್ನು ಅವಲಂಬಿಸುವುದರಲ್ಲಿ ಮಹಿಳೆಯರು ಸಾಕಷ್ಟು ಆಸಕ್ತಿ ತೋರುವುದಿಲ್ಲ.
7. ವರದಕ್ಷಿಣೆಯ ಪಿಡುಗು ಹೆಣ್ಣುಮಕ್ಕಳ ವಿವಾಹಕ್ಕೆ ಪ್ರಧಾನ ತಡೆಯಾಗಿದೆ.
8. ಅಂಗನವಾಡಿ ಕೇಂದ್ರಗಳಲ್ಲಿ ಸಾಕಷ್ಟು ಸೌಕರ್ಯಗಳಿಲ್ಲ.

ಅಧ್ಯಾಪಿಕೆಯರಿಗೆ ತೃಪ್ತಿಕರವಾದ ಸಂಬಳ ದೊರೆವ್ಯುವುದಿಲ್ಲ.

9. ಪಾಠೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿನಿಯರ ಸಹಭಾಗಿತ್ವ ಕಡಿಮೆ.

10. ಕುಟುಂಬಗಳಲ್ಲಿ ಗಂಡು-ಹೆಣ್ಣು ತಾರತಮ್ಯ.

11. ನಿರ್ಮಾಣ ಕಾರ್ಯ ಮತ್ತು ಕೃಷಿ ಕಾರ್ಯಗಳಿಗೆ - ಮಹಿಳೆಯರು ಮುಂದುವರಿದು ಬರುತ್ತಿಲ್ಲ.

12. ಖಾಸಗಿ ಬೀಡಿ ಉದ್ದಿಮೆಯು ಮಹಿಳೆಯರಿಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ.

13. ಮಹಿಳಾ ಸಹಕಾರೀ ಸಂಘಗಳು ಇಲ್ಲ.

14. ವಿಧವಾ ಪಿಂಚಣಿಯ ಸೌಲಭ್ಯವನ್ನು ಹೆಚ್ಚಿನ ವಿಧವೆಯರು ಪಡೆಯುತ್ತಿಲ್ಲ. ಕಾನೂನುಗಳ ಚೌಕಟ್ಟು ಇದಕ್ಕೆ ತೊಂದರೆಯಾಗಿದೆ.

ಸಾಧ್ಯತೆಗಳು.

1. ಮಹಿಳಾ ಸಹಕಾರೀ ಸಂಘಗಳ ಸ್ಥಾಪನೆ.

2. ಪ್ರತಿವಾರ್ಡಿನಲ್ಲೂ ಅಂಗನವಾಡಿಗಳ ಸ್ಥಾಪನೆ.

3. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವುದು.

4. ವರದಕ್ಷಿಣೆ ತಡೆಯುವಿಕೆಗೆ ಸಮಾಜವು ಒಗ್ಗಟ್ಟಾಗಿ ನಿಲ್ಲಬೇಕು.

5. ಸ್ವೋದ್ಯೋಗ ತರಬೇತಿಗೆ ಸಾಲ ಸೌಲಭ್ಯ ಒದಗಿಸುವಿಕೆ.

6. ಬಡ ಮಹಿಳೆಯರ ವಿವಾಹಕ್ಕೆ ಯೋಜನೆಗಳ ರೂಪೀಕರಣ.

7. ಬೀಡಿ ಕಾರ್ಮಿಕರು ಸಂಘಟಿತರಾಗಿ ನಿಲ್ಲಬೇಕು ಮತ್ತು ಶೋಷಣೆ ಹಾಗೂ ಕಡಿಮೆ ಸಂಬಳದ ವಿರುದ್ಧ ಹೋರಾಡಬೇಕು.

8. ಸಮಾಜ ಸೇವೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಂತೆ ಮಾಡಬೇಕು.

9. ನಿರ್ಮಾಣ ಕಾರ್ಯಗಳಲ್ಲೂ, ಕೃಷಿ ಕ್ಷೇತ್ರದಲ್ಲೂ, ಉದ್ಯೋಗ ಸಾಧ್ಯತೆಯನ್ನು ಮಹಿಳೆಯರು ಉಪಯೋಗಿಸಿಕೊಳ್ಳುವಂತಾಗಬೇಕು.

10. ಸಾಮಾಜಿಕ ಸಮತೆಯನ್ನು ಹೊಂದುವುದರಲ್ಲಿ ಸ್ತ್ರೀ ಸಂಘಟನೆಗಳು ಶಕ್ತರಾಗಿ ಮುಂದೆ ಬರಬೇಕು.

11. ಮಹಿಳಾ ಸಮಾಜಗಳ ಮೂಲಕ ನಡೆಸಲ್ಪಡುವ ಕೈಗಾರಿಕೆಗಳನ್ನು ತಯಾರಿಸುವರೇ ಪ್ರತ್ಯೇಕ ಕಟ್ಟಡಗಳ ನಿರ್ಮಾಣವಾಗಬೇಕು.

With Best Compliments From :

VINAYA MEDICALS

(Alopathic & Ayurvedic Medicines & Veternery Medicines)

BANK ROAD, KASARAGOD

Prop : **Y. Raghurama,** Yethadka. : **520663**

ಸಹಕಾರೀ ರಂಗ

1938ರಲ್ಲಿ ಕುಂಬಡಾಜೆ ಸೇವಾ ಸಹಕಾರಿ ಸಂಘವು ಸ್ಥಾಪನೆಗೊಂಡು ಸುದೀರ್ಘ 59 ವರ್ಷಗಳು ಕಳೆದುಹೋದರೂ ಎರಡನೇ ಸಹಕಾರೀ ಸಂಘದ ಸ್ಥಾಪನೆ ಈ ವರೆಗೆ ಸಾಧ್ಯವಾಗದಿರುವುದು ಖೇದಕರ. ಆದರೆ ಇತ್ತೀಚೆಗೆ ಮಾರ್ಪನಡ್ಕದಲ್ಲಿ ಆರಂಭಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರಿ ಸಂಘವು ಸಂಪೂರ್ಣವಾಗಿ ವಿಫಲವಾಯಿತು. ಇಂದಿಗೂ ಸಹಕಾರೀ ಸಂಸ್ಥೆಗಳ ಬಗ್ಗೆ ಜನರು ತಿಳಿಯದಿರುವುದರಿಂದ ಆ ಬಗ್ಗೆ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡುವುದು ಅತ್ಯಗತ್ಯ.

1938 ಮಾರ್ಚ್ 10ರಂದು ಆರಂಭಗೊಂಡ ಕುಂಬಡಾಜೆ ಸರ್ವೀಸ್ ಕೋಪರೇಟಿವ್ ಸೊಸೈಟಿಯಲ್ಲಿ ಪ್ರಸ್ತುತ 2390 ನೋಂದಾಯಿತ ಸದಸ್ಯರಿದ್ದಾರೆ. ಆದರೂ ಪಂಚಾಯತಿನ ಜನಸಂಖ್ಯೆಗೆ ಹೋಲಿಸಿದಾಗ ಸದಸ್ಯರ ಪ್ರಮಾಣ ತೀರಾ ಕನಿಷ್ಟ ಪ್ರಮಾಣದ್ದಾಗಿದೆ. ಶೇರು ಬಂಡವಾಳವಾಗಿ 9,12,698 ರೂಪಾಯಿ ನಿಕ್ಷೇಪಿಸಲ್ಪಟ್ಟಿದೆ. ಸಂಸ್ಥೆಯಿಂದ (ಕೃಷಿ ಸಾಲವಾಗಿ) ರೂ. 6,981,194ನ್ನು ಕೃಷಿಸಾಲವಾಗಿ ನೀಡವಾಗಿದೆ. ಪ್ರತ್ಯೇಕ ಸಾಲಗಳ ರೂಪದಲ್ಲಿ ರೂ. 6,89,838 ಮತ್ತು ಇತರ ಸಾಲವಾಗಿ ರೂ. 54,25,536ನ್ನೂ ನೀಡಲಾಗಿದೆ. ಇದರಲ್ಲಿ 15,26,535 ರೂಪಾಯಿಗಳು ಮರುಪಾವತಿಯ ಸಮಯವು ಕಳೆದರೂ ಮರುಪಾವತಿಯಾಗದೇ ಬಾಕಿ ಉಳಿದಿರುವ ಹಣವಾಗಿದೆ.

ರೂಪಾಯಿ. 55,31,445ನ್ನು ಸ್ಥಿರವಾದ ನಿಕ್ಷೇಪವಾಗಿಯೂ ರೂಪಾಯಿ 35,13,581ನ್ನು ಅಲ್ಪಾವಧಿ ನಿಕ್ಷೇಪವಾಗಿಯೂ ರೂಪಾಯಿ 65,45,131ನ್ನು ಇತರ ಸಂಸ್ಥೆಗಳಿಂದ ಸಾಲದ ರೂಪದಲ್ಲಿಯೂ ಈ ಸೇವಾ ಸಹಕಾರಿ ಸಂಘವು ಪಡೆದುಕೊಂಡಿದೆ.

ಈ ಸಂಸ್ಥೆಯ ಅಧೀನದಲ್ಲಿ ಒಂದು ಸಾವಯವ ಗೊಬ್ಬರಗಳ ಅಂಗಡಿಯೂ ಐದು ಸಾರ್ವಜನಿಕ ವಿತರಣಾಕೇಂದ್ರಗಳೂ ಕಾರ್ಯನಿರ್ವಹಿಸುತ್ತಿವೆ.

ಸಮಸ್ಯೆಗಳು

1. ಒಂದು ಸಹಕಾರಿ ರಂಗದ ಯಶಸ್ಸು ಸಾಧನೆಗಳ ಬಗ್ಗೆ ಜನರು ಈ ವರೆಗೂ ಸಂಪೂರ್ಣವಾಗಿ ಅರಿತುಕೊಂಡಿಲ್ಲ. ಸಾಧ್ಯತೆಗಳನ್ನು ತಿಳಿಯುವ ಅಗತ್ಯವಿದೆ.

2. ನಮ್ಮ ಪಂಚಾಯತಿನಲ್ಲಿ ಏಕೈಕ ಸಹಕಾರೀ ಸಂಸ್ಥೆ ಇದ್ದು ಇದರಲ್ಲಿ ಕನಿಷ್ಟಮಿತಿಯ ಸದಸ್ಯರು ಮಾತ್ರ ಇದ್ದಾರೆ.

3. ಪಂಚಾಯತಿನ ಹೊರಭಾಗದ ಜನರಿಂದ ಸಂಸ್ಥೆಗೆ ನಿಕ್ಷೇಪಗಳು ಬರುತ್ತಿಲ್ಲ. ಇದಕ್ಕೆ ಕಾರಣ ಪ್ರಾದೇಶಿಕ ಸಂಸ್ಥೆಗಳ ಬಗೆಗಿನ ನಿರ್ಲಕ್ಷ್ಯ.

4. ಇತರ ಖಾಸಗಿ ವ್ಯಕ್ತಿಗಳು ನಡೆಸುವ ಹಣದ ವ್ಯವಹಾರವು ಇಂತಹ ಸಂಸ್ಥೆಗಳಿಗೆ ಪ್ರತಿಕೂಲವಾಗಿದೆ.

5. ಪಂಚಾಯತಿನ ಎಲ್ಲಾ ಕೃಷಿಕರನ್ನೂ ಸದಸ್ಯರನ್ನಾಗಿಸುವ ಕಾರ್ಯಯೋಜನೆ ಜರುಗಿಲ್ಲ.

6. ಸಂಘಗಳ ವಾರ್ಷಿಕ ಮಹಾಸಭೆಯಲ್ಲಿ ಬೆರಳೆಣಿಕೆಯ ಪ್ರತಿನಿಧಿಗಳು ಮಾತ್ರ ಕಂಡುಬರುತ್ತಾರೆ.

7. ಎಲ್ಲಾ ಕೃಷಿಕರ ಆರ್ಥಿಕ ಅಗತ್ಯಗಳನ್ನು ಪೂರೈಸುವಷ್ಟು ಸಾಮರ್ಥ್ಯ ಸಂಸ್ಥೆಗಿಲ್ಲ.

8. ಸಹಕಾರೀ ಬೇಂಕುಗಳಿಗೆ ಸರಕಾರವು ನೀಡುವ ಧನಸಹಾಯ ತುಂಬಾ ತಡವಾಗಿ ತಲಪುತ್ತದೆ.

9. ವಿದ್ಯಾಭ್ಯಾಸ, ಕೈಗಾರಿಕೆ ಮುಂತಾದವುಗಳಿಗೆ ಸಾಲ ದೊರೆಯುವುದಿಲ್ಲ.

10. ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸಹಕಾರೀ ಸಂಘಗಳು ತಯಾರಿಲ್ಲ.

ಸಾಧ್ಯತೆಗಳು

1. ಪಕ್ಷರಾಜಕೀಯ, ಮತ ಜಾತಿ ಬೇಧವಿಲ್ಲದೆ ಅರ್ಹತೆಯಿರುವ ಎಲ್ಲಾ ಜನರಿಗೂ ಸದಸ್ಯತ್ವ ನೀಡಬೇಕು.

2. ನಿಕ್ಷೇಪ ಸಂಗ್ರಹಣೆಯನ್ನು ಇನ್ನಷ್ಟು ತೀವ್ರಗೊಳಿಸಿ ಬೇಂಕಿನ ಕಾರ್ಯಕ್ಷೇತ್ರವನ್ನು ವಿಸ್ತರಿಸಬೇಕು.

3. ಹೆಚ್ಚಿನ ಜನರಿಗೆ ಪ್ರಯೋಜನಗೊಳ್ಳುವ ರೀತಿಯಲ್ಲಿ ಪಂಚಾಯತಿನ ಇತರ ಭಾಗಗಳಲ್ಲೂ ಶಾಖೆಗಳನ್ನು ತೆರೆಯಬೇಕು.

4. ಕೃಷಿ ಸಾಲಗಳ ಮೇಲಿನ ಬಡ್ಡಿದರವನ್ನು ಕಮ್ಮಿಗೊಳಿಸಬೇಕು. ಕೃಷಿ ಅಭಿವೃದ್ಧಿಗಾಗಿ ಸ್ಪಷ್ಟ ಮತ್ತು ತಕ್ಕುದಾದ ಕಾರ್ಯಯೋಜನೆಗಳನ್ನು ರೂಪಿಸಬೇಕು.

5. ಮಹಿಳಾ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಕೆಲವು ತರಬೇತಿ ಮತ್ತು ಸ್ವ - ಉದ್ಯೋಗ ಆರಂಭಿಸಲು ಆರ್ಥಿಕ ಸಹಾಯವನ್ನು ನೀಡಬೇಕು.

6. ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚಾಗಿರುವ ಬೀಡಿಕಾರ್ಮಿಕರ ಅಭಿವೃದ್ಧಿಗಾಗಿ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಬೇಕು. ಇದರಿಂದ ಬೀಡಿ ಕಾರ್ಮಿಕರ ಮೇಲಿನ ಶೋಷಣೆಯನ್ನು ಇಲ್ಲವಾಗಿಸಬಹುದು.

7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಸಹಕಾರೀ ಸಂಘಗಳ ಸ್ಥಾಪನೆಯಾಗಬೇಕು.

8. ಈ ಪಂಚಾಯತು ಕೃಷಿ ಪ್ರಧಾನ ಭೂಪ್ರದೇಶವಾದ ಕಾರಣ ಕೃಷಿ ಸಹಕಾರಿ ಸಂಘವೊಂದರ ಅಗತ್ಯವಿದೆ. ಗೊಬ್ಬರ, ಬೀಜಗಳು, ಕೃಷಿ ಉಪಕರಣಗಳು ಮುಂತಾದುವುಗಳನ್ನು ನ್ಯಾಯಬೆಲೆಗೆ ಕೃಷಿಕರಿಗೆ ದೊರೆಯಲು ಕೃಷಿ ಸಹಕಾರಿ ಸಂಘ ನೆರವಾಗಬಹುದು. ಕೃಷಿ ಉತ್ಪನ್ನಗಳ ಸಂಗ್ರಹಣೆ, ವಿತರಣೆ ಮುಂತಾದ ಜವಾಬ್ದಾರಿಗಳನ್ನು ಈ ಸಂಸ್ಥೆಗಳೇ ವಹಿಸಿಕೊಳ್ಳಬೇಕು.

9. ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಬೆಲೆಯೇರಿಕೆಯನ್ನು ನಿಯಂತ್ರಿಸಬೇಕು.

10. ಆಡು, ಕೋಳಿ, ಮೊಲಸಾಕಣಿಕೆ ಮುಂತಾದುವುಗಳಿಗಿರುವ ಆರ್ಥಿಕ ಸಹಾಯವೂ ಸಹಕಾರಿ ಸಂಸ್ಥೆಗಳ ಮೂಲಕ ಪಡೆಯಬೇಕು.

11. ಸೆಮಿನಾರು ಜನರಿಗೆ ತರಬೇತಿ ನೀಡುವುದರ ಮೂಲಕ ಜನರಿಗೆ ಅರಿವು ಮೂಡಿಸಬೇಕು.

12. ಸಹಕಾರಿ ಬೇಕ್‌ನ ಬ್ರಾಂಚ್‌ಗೆ ಬೇಕಾಗಿ ಸ್ಥಳ ಖಾದಿರಿಸಿದಲ್ಲಿ ಬ್ರಾಂಚುಗಳನ್ನು ಕೂಡಲೇ ಆರಂಭಿಸಬೇಕು.

ಕುಂಬಡಾಜೆ ಸೇವಾ ಸಹಕಾರಿ ಬೇಂಕ್ ಮವ್ವಾರು ವಿತರಿಸಿದ ಸಾಲ ವಿವರ

ಕ್ರ ಸಂ	ಸಾಲ	1993-94	94-95	95-96
1	ಕೃಷಿ	30,19,154	35,28,169	15,86,428
2	ಗೃಹನಿರ್ಮಾಣ	2,13,000	202500	5,60,000
3	ಬಾವಿ	2,86,300	3,94,200	-
4	ಸ್ವೋದ್ಯೋಗ	63,389	76,300	1,08,250
5	ಇತರ	51,23,495	45,20,410	47,69,494
	ಜುಮ್ಲಾ	87,05,338	87,21,579	70,24,172

ಕುಂಬ್ಡಾಜೆ ಸೇವಾ ಸಹಕಾರಿ ಬೇಂಕ್‌ನ ಕುರಿತಾದ ವಿವರಗಳು

ಕಾರ್ಯಕ್ಷೇತ್ರ	ಕುಂಬ್ಡಾಜೆ ಗ್ರಾಮ ಪಂಚಾಯತು
ಕಾರ್ಯಾರಂಭಗೊಂಡ ವರ್ಷ	10-3-1938
ಒಟ್ಟು ಸದಸ್ಯರು	2390
ಶೇರು ಬೆಲೆ	10ರೂ
ಶೇರು ಭಂಡವಾಳ	912698.00ರೂ.
ಸರಕಾರಿ ಶೇರು	99750.00
ನಿರಖು ಠೇವಣಿ (ಜನರಿಂದ)	5531445.60
ಅಲ್ಪಾವಧಿ ಠೇವಣಿ	3513581.58
ಕೊಟ್ಟ ಕೃಷಿ ಸಾಲಗಳು	6981194.00
ಇತರ ಸಾಲಗಳು	5426536.00
ಪ್ರತ್ಯೇಕ ಸಾಲಗಳು	689838.00
ಇತರ ಸಂಸ್ಥೆಗಳಿಂದ ಪಡೆದ ಸಾಲಗಳು	6545131.00
ಮರುಪಾವತಿಗೆ ಬಾಕಿ ಇರುವ ಮೊತ್ತ	1526535.00
ಇತರ ಕಾರ್ಯಗಳು	ಗೊಬ್ಬರದ ಡಿಪೊ ; 5ಸಾರ್ವಜನಿಕ ವಿತರಣಾ ಕೇಂದ್ರಗಳು



ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕಲ್ಯಾಣ:

1991ರ ಖಾನೇಷುಮಾರಿ ಪ್ರಕಾರ ಈ ಪಂಚಾಯತಿನಲ್ಲಿರುವ 350 ಕುಟುಂಬಗಳಲ್ಲಿ 1897ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದಾರೆ. ಇವರಲ್ಲಿ 1313 ಮಂದಿ ಪರಿಶಿಷ್ಟ ಜಾತಿಯವರೂ 584 ಮಂದಿ ಪರಿಶಿಷ್ಟ ಪಂಗಡದವರೂ ಆಗಿದ್ದಾರೆ. ಒಟ್ಟು 20ಕಾಲನಿಗಳಲ್ಲಿ ಇವರು ವಾಸಿಸುತ್ತಾರೆ. ಈ ಪಂಚಾಯತಿನಲ್ಲಿರುವ ಮುಖ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಮಾಯಿಲ, ಕೋಪಾಳ, ಮಲಯರ್, ಮರಾಠಿ ನಾಯಕರು, ಮೊಗೇರ, ಬೈರ ಮುಂತಾದವರಾಗಿರುವರು. ಹೆಚ್ಚಿನವರಿಗೆ ವಿದ್ಯಾಭ್ಯಾಸ ಮಟ್ಟದಲ್ಲಿ ಸಾಮೂಹಿಕ ಮಟ್ಟದಲ್ಲಿ ಉಳಿದವರೊಂದಿಗೆ ಸಮಾನತೆಯನ್ನು ಪಡೆಯಲು ಸಾಧ್ಯವಾಗಿಲ್ಲ. ಇದರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ನಾಯಕ ವರ್ಗದವರು ವಿದ್ಯಾಭ್ಯಾಸದಲ್ಲೂ ಉಳಿದ ಕ್ಷೇತ್ರದಲ್ಲೂ ಮುಂದಿರುವರು. ಸಾಮಾಜಿಕ ಸಮಾನತೆ ಎಂಬ ಆಶಯದಿಂದ ಮೇಲಿನ ಎರಡು ಜಾತಿಯವರು ಇಂದಿಗೂ ಬೇರ್ಪಡಿಸಿರುವಂತೆ ಕಂಡುಬರುತ್ತದೆ. ಚಾಪೆ ಹೆಣೆಯುವುದು, ಗೊರಬೆ ಕಟ್ಟುವುದು, ಮುಟ್ಟಪಾಳೆ ನಿರ್ಮಾಣ, ಭೂತ ಕಟ್ಟುವುದು ಇತ್ಯಾದಿ ಇವರ ಕುಲಕಸುಬು. ಹೀಗಿದ್ದು ಇದರಲ್ಲಿ ಕೆಲವು ಅವರಿಂದ ದೂರವಾಗಿಕೊಂಡಿರುವುದು ಕಂಡುಬರುತ್ತದೆ. ಗತಕಾಲದ ವಿಶ್ವಾಸಕ್ಕೂ ತಲುಪಲು ಸಾಧ್ಯವಾಗದ ಸಂಸ್ಕೃತಿಗೂ ಮಧ್ಯೆ ಈ ಜನರಲ್ಲಿ ಹೆಚ್ಚಿನವರು ಸಿಲುಕಿಕೊಂಡಿರುವರು. ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಈ ಜನರು ಶೋಷಣೆಗೆ ಒಳಪಟ್ಟಿರುವುದು ಖೇದಕರ. ಕೆಲವೊಮ್ಮೆ ಮದ್ಯಪಾನವೂ ಕುಟುಂಬದಲ್ಲಿ ಜಟಿಲ ಸಮಸ್ಯೆಯನ್ನುಂಟುಮಾಡುತ್ತದೆ.

ವಿದ್ಯಾಭ್ಯಾಸ ;-

ವಿದ್ಯಾಭ್ಯಾಸದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಅವಸ್ಥೆ ಶೋಚನೀಯವಾಗಿದೆ. ಶಾಲೆಗೆ ಹೋಗುವವರು ಕೆಲವೆಡೆಗಳಲ್ಲಿ ಕಲಿಯುವಿಕೆಯನ್ನು ಅರ್ಧದಲ್ಲಿ ಮೊಟಕುಗೊಳಿಸುತ್ತಾರೆ. ಮನೆಯ ಜವಾಬ್ದಾರಿಯನ್ನು ಹೊತ್ತು ಕೂಲಿ ಕೆಲಸ ಮಾಡುವ ವಿದ್ಯಾರ್ಥಿಗಳು ಇಲ್ಲದಿಲ್ಲ. ವಿದ್ಯಾಭ್ಯಾಸದ ಮಹತ್ವವಾಗಲೀ ಸರಿಯಾದ ತಿಳುವಳಿಕೆಯಾಗಲೀ ಹೆಚ್ಚಿನವರಲ್ಲಿ ಕಂಡುಬರುವುದಿಲ್ಲ. ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಂತೂ ಕಾಳಜಿ ವಹಿಸುವುದಿಲ್ಲ. 1996-97ನೇ ಶಾಲಾ ವರ್ಷದಲ್ಲಿ 367 ವಿವಿಧ ಶಾಲೆಗಳಲ್ಲಿ ವಿದ್ಯಾರ್ಥಿಗಳಲ್ಲಿ 197 ವಿದ್ಯಾರ್ಥಿಗಳು 170 ವಿದ್ಯಾರ್ಥಿನಿಯರು ಆಗಿರುವರು. ಈ ಶಾಲಾ ವರ್ಷದಲ್ಲಿ ವಿವಿಧ ಶಾಲೆಗಳಿಂದಲೂ ತರಗತಿಗಳಿಂದಲೂ ಸೇರಿ 16 ವಿದ್ಯಾರ್ಥಿಗಳು ಶಾಲೆಗೆ ಹೋಗುವುದನ್ನು ನಿಲ್ಲಿಸುರುವರೆಂಬುದು ಗಮನಿಸಬೇಕಾದ ವಿಷಯವಾಗಿದೆ. ಈ ಕ್ಷೇತ್ರದ ಜನರು ಉನ್ನತ ವಿದ್ಯಾಭ್ಯಾಸಕ್ಕೆ ಹೋಗುವುದು ವಿರಳ.

ಸಾಮಾಜಿಕವೂ ಸಾಂಸ್ಕೃತಿಕವೂ:-

ಉತ್ತಮರೀತಿಯ ಜೀವನ ಕ್ರಮವು ವಿರಳವೆಂದೇ ಹೇಳಬಹುದು. ಸಮಾಜದೊಂದಿಗೆ ಬೆರೆಯುವ ಮಹಿಳೆಯರು ಅತ್ಯಲ್ಪ ಸಂಖ್ಯೆಯಲ್ಲಿ ಮಾತ್ರವಿರುವುದು.

ವಸತಿ:-

ಪರಿಶಿಷ್ಟ ಜಾತಿ - ಪರಿಶಿಷ್ಟ ಪಂಗಡಗಳ - ವಸತಿ ಸಮಸ್ಯೆಯ ಪರಿಹಾರ ಇನ್ನೂ ಬಹಳ ದೂರವಿದೆ. JRYಯಲ್ಲಿ ಒಳಪಡಿಸಿ 1990ರಲ್ಲಿ 12ಮನೆಗಳೂ 91ರಲ್ಲಿ 4ಮನೆಗಳೂ 92ರಲ್ಲಿ 8 ಮನೆಗಳೂ 93ರಲ್ಲಿ 8ಮನೆಗಳೂ 94ರಲ್ಲಿ 9 ಮನೆಗಳೂ 95ರಲ್ಲಿ 12 ಮನೆಗಳೂ 96ರಲ್ಲಿ 10 ಮನೆಗಳೂ ನಿರ್ಮಾಣಗೊಂಡುವು. 97ರಲ್ಲಿ 11 ಮನೆಗಳನ್ನು ನಿರ್ಮಿಸುವ ಉದ್ದೇಶವನ್ನಿಟ್ಟುಕೊಂಡಿದೆ.

ಹೀಗಿದ್ದರೂ ಹೆಚ್ಚಿನ ಕುಟುಂಬಗಳು ಇಂದಿಗೂ ಡೇರೆಗಳಂತಹ ಗುಡಿಸಲುಗಳಲ್ಲಿ ಅನಾರೋಗ್ಯಕರವಾದ ಪರಿಸರದಲ್ಲಿರುವರು. ಒಂದು ಮನೆ ಕಟ್ಟಲು ಬೇಕಾದ ಖರ್ಚಿನ ಸಣ್ಣ ಒಂದು ಪಾಲು ಮಾತ್ರ ಸರಕಾರದಿಂದ ಸಿಗುವುದು ಎಂಬ ಅರಿವು ಇಲ್ಲಿ ಗಮನವಿರಲು ಸಾಧ್ಯವಿಲ್ಲ. ಸ್ವಂತ ಸ್ಥಳವಿಲ್ಲದಿರುವುದು ಸ್ವಂತ ಮನೆ ಕಟ್ಟುವುದಕ್ಕಿರುವ ಒಂದು ತಡೆಯಾಗಿದೆ. ಸರಕಾರದಿಂದ ಸಿಗುವ ಮೊತ್ತ ಫಲಪ್ರದವಾಗಿ ಹೆಚ್ಚಿನವರು ಉಪಯೋಗಿಸುತ್ತಿಲ್ಲ ಎಂಬ ಆರೋಪವು ಚರ್ಚಾ ವಿಷಯವಾಗಿದೆ. ಇದ್ದ ಮನೆಗಳಲ್ಲಾದರೋ ಸಾಕಷ್ಟು ಸೌಕರ್ಯಗಳಿಲ್ಲ. ಬಾವಿ, ಶೌಚಾಲಯ, ವಿದ್ಯುತ್ ಎಂಬಿವುಗಳು ಅಪೂರ್ವವಾಗಿರುವುದು. ಕಾಲನಿಗಳ ವಾಸದ ವಾತಾವರಣವು ಅಷ್ಟೊಂದು ತೃಪ್ತಿಕರವಲ್ಲ.

ಆರೋಗ್ಯ:-

ಕಾಲನಿಗಳ ಮೂಲಭೂತ ಸೌಕರ್ಯಗಳ ಕೊರತೆ ಹಲವು ಆರೋಗ್ಯ ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗಬಹುದು. ಕುಡಿಯುವ ನೀರು, ಶೌಚಾಲಯ ಎಂಬಿವುಗಳ ಸೌಕರ್ಯ ತೃಪ್ತಿಕರವಲ್ಲ. ಇರುವ ಸೌಕರ್ಯವನ್ನೇ ಪರಮಾವಧಿ ಉಪಯೋಗಿಸುತ್ತಿಲ್ಲ. ದಾರಿದ್ರಾವಸ್ಥೆಯಲ್ಲಿರುವ ಕುಟುಂಬದವರು ರೋಗ ಶಮನಕ್ಕೆ ಆಸ್ಪತ್ರೆಗಳನ್ನು ಸಮೀಪಿಸುವುದರಲ್ಲೆ ಹಿಂದೇಟು ಹಾಕುತ್ತಿರುವುದು ಕಂಡು ಬರುತ್ತಿದೆ. ಪೋಷಕಾಹಾರದ ಕೊರತೆಯಿಂದ ರೋಗಕ್ಕೆ ತುತ್ತಾಗುವವರ ಸಂಖ್ಯೆ ಹೆಚ್ಚು. ಪರಿಸರ ಶುಚಿತ್ವದ ಕಡೆಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಪಂಚಾಯತ್ತಿನಲ್ಲಿರುವ ಏಕಮಾತ್ರ ಕೇಂದ್ರವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಕಾಲನಿಯಿಂದ ಬಹಳ ದೂರವೆಂಬುದು ಹಲವು ತೊಂದರೆಗಳಿಗೆ ಕಾರಣವಾಗಿದೆ. ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸಾಕ್ರಮ ಈ ಪಂಚಾಯತ್ತಿನಲ್ಲಿ ಇಲ್ಲ. ಇದಕ್ಕಾಗಿ ಅಧಿಕ ವೆಚ್ಚದ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕಾದ ದುರ್ಗತಿಗೀಡಾಗಬೇಕಾಗಬಹುದು. ಆರೋಗ್ಯ ಇಲಾಖೆಯವರು ತಮ್ಮ ಸೇವೆಯನ್ನು ಹೆಚ್ಚಿನ ಶ್ರದ್ಧೆಯಿಂದ ಫಲಪ್ರದವಾಗುವಂತೆ ಮಾಡಿ ಕಾಲನಿ ಜೀವನವನ್ನು ಉತ್ತಮಮಟ್ಟಕ್ಕೆ ಏರಿಸಬೇಕು.

ಸಮಸ್ಯೆಗಳು:-

1. ಪರಂಪರಾಗತವಾದ ಕಸುಬಿನ ಸಾಧ್ಯತೆ ಕಡಿಮೆಯಾಗುತ್ತಿರುವುದು. ಹೊಸ ಕ್ಷೇತ್ರಕ್ಕೆ ಪ್ರವೇಶಿಸಲು ಬೇಕಾದ ತಿಳಿವು ಇಲ್ಲ.

2. ಹೆಚ್ಚಿನ ಕುಟುಂಬಗಳಿಗೆ ಸ್ವಂತ ಮನೆಗಳಿಲ್ಲ. ಮನೆ ನಿರ್ಮಿಸಲು ಬೇಕಾದ ಸ್ವಂತ ಸ್ಥಳವಿಲ್ಲ. ಇದ್ದವುಗಳಲ್ಲಿ ಕೆಲವು ಸಣ್ಣ ಗುಡಿಸಲುಗಳು.

3. ವಿದ್ಯುತ್ತನ್ನು ಕಾಣದ ಕಾಲನಿಗಳೇ ಹೆಚ್ಚು. ನೀರು ಪೂರೈಕೆಗೆ ಸಾಕಷ್ಟು ವ್ಯವಸ್ಥೆಗಳಿಲ್ಲ.

4. ಮನೆಗಳು ಸೇರಿ ಕಾಲನಿಗಳೆಂದು ಘೋಷಿಸಿ ಹಲವು ಅನುಕೂಲತೆಗಳನ್ನು ಗಿಟ್ಟಿಸಿಕೊಂಡರೂ ಸಮಾಜದಿಂದ ಪ್ರತ್ಯೇಕಿಸಿದಂತಹ ಕೆಟ್ಟವಶವು ಕೂಡ ಕಂಡುಬರುತ್ತಿದೆ.

5. ಸರಕಾರದಿಂದ ಸಿಗುವ ಹಲವು ಆರ್ಥಿಕ ಸಹಾಯದ ಬಗ್ಗೆ ತಿಳುವಳಿಕೆ ಇರುವುದಿಲ್ಲ.

6. ಉದ್ಯೋಗಿಗಳು ಶೋಷಣೆಯಿಂದಲೂ ಬಳಕೆದಾರರ ಹೆಡ್ಡತನದಿಂದಲೂ ವಿವಿಧ ಯೋಜನೆಗಳು ತಲೆಕೆಳಗಾಗುವುದು.

7.ಹೆಚ್ಚಿನ ಕಾಲನಿಗಳಿಗೆ ಸಾರಿಗೆ ಸಂಪರ್ಕವಿಲ್ಲ.

8. ಕೃಷಿ ಮಾಡಲಿಕ್ಕೂ ಮನೆಕಟ್ಟಲಿಕ್ಕೂ ಬೇಕಾದ ಸ್ಥಳವುಳ್ಳವರೂ ಕಡಿಮೆ.

9. ವಿದ್ಯಾಭ್ಯಾಸವನ್ನು ಮೇಲ್ಮಟ್ಟಕ್ಕೆ ತರಲು ಪ್ರತ್ಯೇಕ ಕಾರ್ಯಕ್ರಮವನ್ನು ಅಳವಡಿಸಿಕೊಂಡಿಲ್ಲ.

10. ಸರಕಾರದ ಸಹಾಯವನ್ನು ಉಪಯೋಗಿಸುವಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಒಗ್ಗಟ್ಟಾಗುವುದಿಲ್ಲ. ಯೋಜನೆಗಳನ್ನು ತಯಾರಿಸಿ ಪ್ರಚಾರ ಕಾರ್ಯಗಳನ್ನು ನೆರವೇರಿಸುವುದಿಲ್ಲ.

11. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗಾಗಿ ಪ್ರತ್ಯೇಕ ಸಹಕಾರಿ ಸಂಘವು ಈಗ ಸೂಕ್ತವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಉದ್ಯೋಗ ತರಬೇತಿ ಕೇಂದ್ರಗಳೂ ಇಲ್ಲ.

12. ಸವಲತ್ತುನ್ನು ಯಥಾನುಸಮಯಕ್ಕೆ ತಲುಪಿಸುವುದಕ್ಕೆ ಸರಕಾರದ ಏಜೆನ್ಸಿಗಳಿಂದ ಸಾಧ್ಯವಾಗುತ್ತಿಲ್ಲ.

13. ಬರಗಾಲದ ದಿನಗಳಲ್ಲಿ ಕಷ್ಟ ಅನುಭವಿಸುವವರಿಗೆ ಸಿಗಬೇಕಾದ ಸವಲತ್ತುಗಳೊಂದು ನ್ಯಾಯವಾಗಿ ಸಿಗಬೇಕಾದವರಿಗೆ ಸಿಗುವುದಿಲ್ಲ.

ಸಾಧ್ಯತೆಗಳು

1. ಪರಂಪರಾಗತವಾದ ಕುಲಕಸುಬನ್ನು ಗುಡಿ ಕೈಗಾರಿಕೆಗಳಾಗಿ ಪ್ರೋತ್ಸಾಹಿಸಬೇಕು.

2. ಸವಲತ್ತುಗಳನ್ನು ಅರ್ಹರಾದವರಿಗೆ ಸಾಧ್ಯವಾದಷ್ಟು ಬೇಗನೆ ಸಲುಪಿಸುವ ವ್ಯವಸ್ಥೆಯು ರೂಪೀಕರಣವಾಗಬೇಕು.

3. ಜೌದ್ಯೋಗಿಕ ಮಟ್ಟದಲ್ಲಿನ ಶೋಷಣೆಯನ್ನು ಕೊನೆಗೊಳಿಸುವ ಕಾರ್ಯಕ್ರಮವನ್ನು ಕೊನೆಗೊಳಿಸಬೇಕು.

4. ಯೋಜನೆಗಳು ಫಲಪ್ರದವಾಗಿ ಕಾರ್ಯಗತವಾಗುತ್ತದೋ ಎಂಬುದನ್ನು ದೃಢಪಡಿಸಲಿಕ್ಕಾಗಿ ಪ್ರತ್ಯೇಕ ಸೆಲ್‌ಗಳನ್ನು ರೂಪೀಕರಿಸಬೇಕು.

5. ಕಾಲನಿಗಳನ್ನು ಸಂಪೂರ್ಣವಾಗಿ ವಿದ್ಯುತ್ತೀಕರಿಸಿ ಸಾರಿಗೆ ಸಂಪರ್ಕದ ವ್ಯವಸ್ಥೆಯನ್ನು ಮಾಡಬೆಕು.

6. ನಿರುದ್ಯೋಗಿಗಳಿಗೆ ಅದರಲ್ಲೂ ಸ್ತ್ರೀಯರಿಗೆ ಉದ್ಯೋಗ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು.

7. 'ಎಲ್ಲಾ ಕುಟುಂಬಕ್ಕೂ ಮನೆ' ಎಂಬ ಆಶಯವನ್ನು ಸಾರ್ಥಕಗೊಳಿಸಲು ಬೇಕಾದ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು. ಸ್ಥಳ ಇಲ್ಲದವರಿಗೆ ಸ್ಥಳ ಮನೆ ಇಲ್ಲದವರಿಗೆ ಮನೆ ಕೊಡುವ ವ್ಯವಸ್ಥೆಯಾಗಬೇಕು.

8. ಸಹಕಾರೀ ಸಂಘವನ್ನು ಸ್ಥಾಪಿಸಿ ಫಲಪ್ರದವಾದ ಯೋಜನೆಗಳನ್ನು ತಯಾರಿಸಿ ನಿರ್ದಿಶ್ಟವಾದ ಧ್ಯೇಯ ಧೋರಣೆಗಳಿಂದ ನಡೆಯುವ ವ್ಯವಸ್ಥೆಯಾಗಬೇಕು.

9.ಕಾಲನಿಗಳಲ್ಲಿ ಸಾಕ್ಷರತೆಯ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರಬೇಕು. ವಿದ್ಯಾಭ್ಯಾಸದೆಡೆಗೆ ಅವರ ಮನವೊಲಿಸಲು ಹೊಸ ಯೋಜನೆಗಳನ್ನು ತಯಾರಿಸಿ ಅವರಿಗೆ ಹೆಚ್ಚು ಮನವರಿಕೆಯಾಗುವಂತೆ ತಿಳುವಳಿಕೆ ನೀಡಬೇಕು.

10. ಭೂಮಿಶಾಸ್ತ್ರ ಪರವಾಗಿ ಪ್ರತ್ಯೇಕವಾದ ಕೇಂದ್ರಗಳಲ್ಲಿ ಕಾಲನಿಗಳನ್ನು ಸ್ಥಾಪಿಸಬಾರದು.

11.ಸರಕಾರದ ಸವಲತ್ತು ದುರುಪಯೋಗವಾಗುವುದಿಲ್ಲ ಎಂಬ ದೃಢವಿಶ್ವಾಸ ಮೂಡುವಂತೆ ಮಾಡಬೇಕು.

12. ಕಾಲನಿಗಳಲ್ಲಿ ವಾಚನಾಲಯಗಳ ಸ್ಥಾಪನೆ, ದೂರದರ್ಶನದ ಸೌಕರ್ಯ ವಿದ್ಯಾಭ್ಯಾಸಕ್ಕೆ ಪೂರಕವಾಗುವ ಸಾಧ್ಯತೆಗಳನ್ನು ನೀಡುವುದು.

13. ವಿವಿಧ ಉದ್ಯೋಗಕ್ಕೆ ಅಗತ್ಯವಿರುವ ಸಾಲದ ಮೊತ್ತವನ್ನು ಸರಳ ರೀತಿಯಲ್ಲಿ ವ್ಯಕ್ತಿಗೆ ತಲುಪುವ ಏರ್ಪಾಡಾಗಬೇಕು.

14. ಪಾನ ನಿಷೇದಕ್ಕೆ ಶಕ್ತಿಯುತವಾದ ಪ್ರಚಾರ ಕಾರ್ಯದ ವ್ಯಲಸ್ಥೆಯಾಗಬೇಕು.

15. ಇವರಿಗೆ ಸರಕರಾದಿಂದ ಸಿಗುವ ಸ್ಥಳವನ್ನು ಮಾರಾಟ ಮಾಡದ ರೀತಿಯಲ್ಲಿ ಕಾನೂನು ಜ್ಯಾರಿಗೊಳಿಸಬೇಕು.

J.R.Yಲ್ಲಿ ನಿರ್ಮಿಸಿದ ಮನೆಗಳು

ವರ್ಷ	ಸಂಖ್ಯೆ
1989-90	12
1990-91	4
1991-92	8
1992-93	9
1993-94	9
1994-95	12
1995-96	10

ಸಾಕ್ಷರತೆ

ವಿಭಾಗ	ಶತಮಾನ
ಪರಿಶಿಷ್ಟ ಜಾತಿ	56.85
ಪರಿಶಿಷ್ಟ ವರ್ಗ	64.62

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಸಂಖ್ಯೆ.

ತರಗತಿ	ಗಂಡು	ಹೆಣ್ಣು	ಒಟ್ಟು
I	18	13	31
II	26	22	48
III	29	20	49
IV	12	16	28
V	32	23	55
VI	15	20	35
VII	29	17	46
VIII	13	10	23
IX	19	16	35
X	4	13	17
ಒಟ್ಟು	197	170	367

ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ ಕಾಲನಿಗಳು

ವಾರ್ಡು	ಕಾಲನಿಯ ಹೆಸರು	SC/ST
I	1) ನೀರಡ್ಕ	SC
	2) ಪುತ್ರಕಳ	SC
	3) ಒರುಂಬುಡಿ	SC
	4) ಕೀರಿಕ್ಕಾಡು	SC
II	1) ಗಾಡಿಗುಡ್ಡೆ	SC
	2) ಬೆಳ್ಳಿಗೆ	ST
	3) ಬೈರಮೂಲೆ	SC
III	1) ಕಜೆ	SC
	2) ಪೆರಿಂಜ	SC
IV	1) ಮವ್ವಾರ್	SC
	2) ಕೋಪಾಳಮೂಲೆ	SC
V	1) ಮಾಚಾವು	SC
	2) ಪಾಲಕ್ಕಾರ್	ST
	3) ಸಜಂಕುರಿ	SC
VI	1) ಪಿಲಾಂಕಟ್ಟೆ ರಾಜೀವ್ ಕಾಲನಿ	SC
	2) ಚೋಕೆಮೂಲೆ	SC
VII	1) ಕುದಿಂಗಿಲ	SC
VIII	1) ಜಯನಗರ	SC
	2) ಬೆದ್ರುಕೂಡ್ಲು	SC
	3) ಕೋರಿಕ್ಕಾರ್	SC

ಸಂಪನ್ಮೂಲ

ಕುಂಬ್ಡಾಜೆ ಗ್ರಾಮ ಪಂಚಾಯತು ದ್ವಿತೀಯ ಗ್ರೇಡ್ ಪಂಚಾಯತಾಗಿದೆ. ಪ್ರಧಾನವಾಗಿ ಕೃಷಿ ಕ್ಷೇತ್ರವನ್ನು ಆಧಾರವಾಗಿಟ್ಟುಕೊಂಡು ನಮ್ಮ ಪಂಚಾಯತಿನ ಸಂಪನ್ಮೂಲವನ್ನು ಪರಿಗಣಿಸಬೇಕಾಗಿದೆ. ಕೃಷಿ ಕ್ಷೇತ್ರದಲ್ಲಿ ನಮ್ಮ ಪಂಚಾಯತು ಗಮನಾರ್ಹವಾಗಿ ಅಭಿವೃದ್ಧಿ ಹೊಂದುತ್ತಿದೆ. ಈ ಪಂಚಾಯತಿನಲ್ಲಿ ಧಾರಾಳ ನಿರುದ್ಯೋಗಸ್ಥರ ಸಮಸ್ಯೆಯೂ ಕಂಡು ಬರುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಗಣ್ಯವಾದ ಪುರೋಗತಿ ಕಂಡು ಬಂದಿಲ್ಲ.

ಕಟ್ಟಡ ತೆರಿಗೆ, ಲೈಸೆನ್ಸ್ ಶುಲ್ಕ, ವೃತ್ತಿ ತೆರಿಗೆ, ಆಸ್ತಿ ಮಾರಾಟ ತೆರಿಗೆ (D.T.P) ಎಂಬಿವುಗಳು ನಮ್ಮ ಪಂಚಾಯತಿನ ಪ್ರಧಾನ ಆದಾಯ ಮಾರ್ಗಗಳಾಗಿವೆ. ಕಳೆದ ವರ್ಷ ಕಟ್ಟಡ ತೆರಿಗೆಯಾಗಿ ರೂ. 75,244/-, ಲೈಸೆನ್ಸ್ ಶುಲ್ಕ ರೂಪದಲ್ಲಿ ರೂ. 6138.75, ಆಸ್ತಿಮಾರಾಟ ತೆರಿಗೆಯಾಗಿ ರೂ. 23,141-00, ವೃತ್ತಿತೆರಿಗೆಯ ರೂಪದಲ್ಲಿ ರೂ. 69,815-00ಯೂ ಈ ಪಂಚಾಯತಿಗೆ ಲಭಿಸಿರುತ್ತದೆ.

ಭೂಕಂದಾಯ, ನಿರ್ವಹಣಾ ವೆಚ್ಚಕ್ಕಿರುವ ಸಹಾಯಧನ, ವಿ.ಆರ್.ಎಂ.ಗ್ರಾಂಟ್, (Village Roads Maintanance grant) ವಿ.ಟಿ.ಸಿ. ಗ್ರಾಂಟ್ (Vehicle Tax Compensation grant) ಎಂ.ಐ.ಗ್ರಾಂಟ್ (Minor Irrigation grant), ಅನ್‌ಟೈಡ್ ಫಂಡ್, ಜೆ.ಆರ್,ವೈ (ಜವಾಹರ್ ರೋಜ್‌ಗಾರ್ ಯೋಜನೆ) ಎಂಬಿವುಗಳ ಮೂಲಕ ರೂ. 12,63,950.00ವು ಈ ಪಂಚಾಯತಿಗೆ ಕಳೆದ ವರ್ಷ ಲಭಿಸಿರುತ್ತದೆ.

ಆಢಳಿತ, ಸಾರ್ವಜನಿಕ ಕಾಮಗಾರಿ, ವಿದ್ಯಾಭ್ಯಾಸ, ನೀರಾವರಿ, ಆರೋಗ್ಯ ಮೊದಲಾದವುಗಳು ಪಂಚಾಯತಿನ ಪ್ರಧಾನವಾದ ಖರ್ಚಿನ ವಿಷಯಗಳಾಗಿವೆ. ಸಾರ್ವಜನಿಕ ಕಾಮಗಾರಿಗೆ ರೂ. 11,81,995/ , ಆಢಳಿತಕ್ಕೆ ರೂ. 3,50,220/-, ವಿದ್ಯಾಭ್ಯಾಸಕ್ಕೆ ರೂ. 8561/ , ನೀರು ಸರಬರಾಜು ಮತ್ತು ಆರೋಗ್ಯ ಎಂಬಿವುಗಳಿಗೆ ರೂ. 10463/- ಇತರ ಕ್ಷೇತ್ರಗಳಿಗೆ ರೂ. 15027/-ನ್ನು 1995-96ನೇ ಆರ್ಥಿಕ ವರ್ಷದಲ್ಲಿ ಪಂಚಾಯತು ಖರ್ಚು ಮಾಡಿದೆ.

ಕುಂಬಡಾಜೆ ಸೇವಾ ಸಹಕಾರಿ ಬೇಂಕ್, ನೋರ್ತ್ ಮಲಬಾರ್ ಗ್ರಾಮೀ ಣ ಬೇಂಕ್, ಜಯನಗರ, ಇವುಗಳು 1,34,34,772/- ರೂವನ್ನು ಈ ಪಂಚಾಯತಿನ ಜನರಿಗೆ ಸಾಲ ನೀಡಿರುತ್ತಾರೆ. ಇದಲ್ಲದೆ ಕಾಸರಗೋಡು ಪ್ರೈಮರಿ ಕೊ. ಓಪರೆಟಿವ್ ಎಗ್ರಿಕಲ್ಚರ್ ಎಂಡ್ ರೂರಲ್ ಡೆವಲಪ್‌ಮೆಂಟ್ ಬೇಂಕು, ವಿಜಯಾ ಬೇಂಕು ಬದಿಯಡ್ಕ, ಸಿಂಡಿಕೇಟ್ ಬೇಂಕ್ ಬದಿಯಡ್ಕ, ಜಿಲ್ಲಾ ಬ್ಯಾಂಕ್ ಎಂಬಿವುಗಳು ಪಂಚಾಯತಿನ ಜನರಿಗೆ ಸಾಲ ನೀಡುತ್ತವೆ.

ಪಂಚಾಯತಿನ ಆಶ್ರಯದಲ್ಲಿ ವ್ಯಾಪಾರೀ ಸಂಕೀರ್ಣವಾಗಲೀ, ಮಾರುಕಟ್ಟೆಗಳಾಗಲೀ ಇತರ ಯಾವುದೇ ವ್ಯಾಪಾರೀ ಸಂಸ್ಥೆಗಳಾಗಲೀ ಇಲ್ಲ.

ಸಮಸ್ಯೆಗಳು

1. ಈ ಪಂಚಾಯತಿನಿಂದ ವಿದೇಶಕ್ಕೆ ಹೋದವರಲ್ಲಿ 80% ಜನರು ತಮ್ಮ ಕೆಲಸ ಕಳೆದುಕೊಂಡು ಕಳೆದ ಒಂದು ತಿಂಗಳಿನಲ್ಲಿ ಮರಳಿ ಇಲ್ಲಿಗೆ ಬಂದಿದ್ದಾರೆ. ಇವರು ಸುಮಾರು 400 ಮಂದಿ ಆಗಬಹುದು.

2. ಪಂಚಾಯತು ಮೂಲಧನ ಉಪಯೋಗಿಸಿ ಆದಾಯಗಳಿಸುವ ಯಾವುದೇ ವ್ಯವಸ್ಥೆಗಳಿಲ್ಲ.

3. ಕಟ್ಟಡ ತೆರಿಗೆಯನ್ನು ಕಡಿಮೆ ದರದಲ್ಲಿ ಸಂಗ್ರಹಿಸುತ್ತಿರುವುದು.

4. ಜನರ ಸಮಸ್ಯೆಗಳನ್ನು ಮನಗಂಡು ಪರಿಹರಿಸುವ ಯಾವುದೇ ಸ್ವಯಂ ಸೇವಾ ಸಂಸ್ಥೆಗಳು ನಮ್ಮ ಪಂಚಾಯತಿನಲ್ಲಿ ಇಲ್ಲ.

5. ನಮ್ಮ ಪಂಚಾಯತಿನಲ್ಲಿರುವ ಬೇಂಕ್‌ಗಳಲ್ಲಿ ಠೇವಣಿ ಕಡಿಮೆ.

ಸಾಧ್ಯತೆಗಳು.

1. ಪಂಚಾಯತಿನ ಆದಾಯ ಹೆಚ್ಚಿಸಲು ಕಟ್ಟಡ ತೆರಿಗೆಯನ್ನು ಪರಮಾವಧಿ ಹೆಚ್ಚಿಸುವುದು.

2. ವಾರಸಂತೆಗಳನ್ನು ಏರ್ಪಡಿಸುವುದು ಮತ್ತು ವ್ಯಾಪಾರೀ ಸಂಕೀರ್ಣಗಳನ್ನು ಕಟ್ಟಿ ಆದಾಯವನ್ನು ಹೆಚ್ಚಿಸುವುದು.

3. ಹೊಸ ತೆರಿಗೆಗಳ ಬಗ್ಗೆ ಸಮಾಲೋಚನೆ ಮಾಡುವುದು.

4. ಪಂಚಾಯತಿನ ವಿದೇಶೀ ಉದ್ಯೋಗಸ್ಥರ ಠೇವಣಿಯನ್ನು ಪಂಚಾಯತಿಗೆ ಉಪಕಾರವಾಗುವಂತೆ ನಿಕ್ಷೇಪಿಸಲು ಪ್ರಯತ್ನಿಸುವುದು.

5. ವಿವಿಧ ಸೇವಾ ಸಂಘಗಳ ಸಹಕಾರದಿಂದ ನಡೆಸಬಹುದಾದ ಅಭಿವೃದ್ಧಿ ಯೋಜನೆಗಳ ಪಟ್ಟಿ ತಯಾರಿಸುವುದು ಉತ್ಸಾಹೀ ತರುಣರ

ಚೈತನ್ಯವು ಕ್ರಿಯಾತ್ಮಕವಾಗಿ ಉಪಯೋಗವಾಗುವಂತೆ ಯೋಜನೆಗಳನ್ನು ತಯಾರಿಸುವುದು. ಸಾರ್ವಜನಿಕರಲ್ಲಿ ಈ ರೀತಿಯ ಪ್ರಚಾರ ಮಾಡುವುದು.

6. ನೇಶನಲ್ ಸೇವಿಂಗ್ಸ್ ಸ್ಕೀಂನಲ್ಲಿ ಹೆಚ್ಚು ಉಳಿತಾಯ ಮಾಡುವರೆ ಪ್ರಯತ್ನಿಸುವುದು.

ಖರ್ಚು - 1995-96

ವಿಭಾಗ	ಮೊತ್ತ
ಆಡಳಿತ	350220
ಸಾರ್ವಜನಿಕ ಕಾಮಗಾರಿ	1181995
ವಿದ್ಯಾಭ್ಯಾಸ	8561
ನೀರು ಸರಬರಾಜು, ಆರೋಗ್ಯ	10463
ಇತರ ಕ್ಷೇತ್ರಗಳು	15027
ಒಟ್ಟು	1566266

ಕುಂಬ್ಡಾಜೆ ಗ್ರಾಮ ಪಂಚಾಯತಿನ ಗ್ರಾಂಟು

(ಸಹಾಯ ಧನ - 1995-96)

ವಿಭಾಗ	ಮೊತ್ತ
ಮೂಲ ತೆರಿಗೆ	54057
ಎಸ್ಟಾಬ್ಲಿಷ್‌ಮೆಂಟ್ ಗ್ರಾಂಟ್	66812
ವಿ. ಆರ್. ಎಂ. ಗ್ರಾಂಟ್	2506
ವಿ. ಟಿ. ಸಿ. ಗ್ರಾಂಟ್	217986
ಎಂ. ಐ. ಗ್ರಾಂಟ್	752
ಅನ್‌ಟೈಡ್ ಫಂಡ್	398740
ಸಾರ್ವಜನಿಕ ಧನ ಸಹಾಯ	25000
ಜೆ. ಆರ್. ವೈ.	52310
ಮೊತ್ತ	1288950

ಕುಂಬ್ಡಾಜೆ ಗ್ರಾಮ ಪಂಚಾಯತಿನ ಆದಾಯ - 1995-96 (ಗ್ರಾಂಟು ಹೊರತುಪಡಿಸಿ)

ವಿಭಾಗ	ತಗಾದೆ	ಸಂಗ್ರಹಿಸಿದ ಮೊತ್ತ	ಬಾಕಿ
ಕಟ್ಟಡ ತೆರಿಗೆ	75244.40	75244.40	-
ಸರ್ವೀಸ್ ಚಾರ್ಜು	-	-	-
ವೃತ್ತಿ ತೆರಿಗೆ	69815.00	69815.00	-
ವಾಹನ ತೆರಿಗೆ	-	-	-
ವಿನೋದ ತೆರಿಗೆ	75.00	75.00	-
ಹೆಚ್ಚುವರಿ ವಿನೋದ ತೆರಿಗೆ	22.50	22.50	-
ಪ್ರದರ್ಶನ ತೆರಿಗೆ	90.00	90.00	-
ಪ್ರದರ್ಶನ ತೆರಿಗೆ ಸರ್‌ಛಾರ್ಜು	-	-	-
ಸಂತೆ ತೆರಿಗೆ	-	-	-
ಭೂತೆರಿಗೆ	-	-	-
ಪರವಾನಿಗೆ ತೆರಿಗೆ	6138.75	6138.75	-
ಕಟ್ಟಡ ತೆರಿಗೆ - ಸರ್‌ಛಾರ್ಜು	-	-	-
D.T.P. (75%)	23141.00	23141.00	-
D.T.P. (25%)	-	-	-
ಸರಕಾರ ಧನ ಸಹಾಯರಹಿತ ಇತರ ಆದಾಯ	-	-	-
ಧನಸಹಾಯ	-	-	-
ನಿಕ್ಷೇಪ	1390.00	1390.00	-
ಇನ್ನಿತರ	13795.04	13795.04	-
ಮೊತ್ತ	189711.69	189711.69	-

ಕುಂಬಡಾಜೆ ಪಂಚಾಯತಿನ ಅಧ್ಯಕ್ಷರಾಗಿದ್ದ ಶ್ರೀ ಪೈಕೆ ನಾರಾಯಣ ಭಟ್ಟರು ದಿನಾಂಕ 1-9-1967ರಂದು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದುದರಿಂದಾಗಿ ಆ ಸ್ಥಾನಕ್ಕೆ ಉಪಾಧ್ಯಕ್ಷರಾಗಿದ್ದ ಶ್ರೀ ಯು. ಗೋಪಾಲಕೃಷ್ಣ ಕುಣಿಕುಳ್ಳಾಯರನ್ನು ಆಯ್ಕೆ ಮಾಡಲಾಯಿತು. 1-9-1967ರಿಂದ 7-7-1979ರ ತನಕ ಶ್ರೀ ಗೋಪಾಲಕೃಷ್ಣ ಕುಣಿಕುಳ್ಳಾಯರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಅಧ್ಯಕ್ಷರು : ಶ್ರೀ ಯು. ಗೋಪಾಲಕೃಷ್ಣ ಕುಣಿಕುಳ್ಳಾಯ

ಉಪಾಧ್ಯಕ್ಷರು : ಶ್ರೀ ಬಲೆಕ್ಕಳ ಪುರುಷೋತ್ತಮ ಭಟ್ಟ

ಸದಸ್ಯರು :

1. ಶ್ರೀ ಪಿ. ನಾರಾಯಣ ಭಟ್ಟ
2. ಶ್ರೀ ಬಿ. ತಿಮ್ಮಣ್ಣ ಆಳ್ವ
3. ಎ. ಅಬ್ದುಲ್ ರಹಿಮಾನ್
4. ಶ್ರೀ ಯು. ಶ್ಯಾಮ ಭಟ್ಟ
5. ಶ್ರೀ ವೈ. ಐತ್ತ
6. ಶ್ರೀಮತಿ ಸರೋಜಿನಿ ದೇವಿ (ಮಹಿಳಾ ಸದಸ್ಯೆ)

ದಿನಾಂಕ 8-12-1996ನೇ ಆದಿತ್ಯವಾರ ಅಗಲ್ಪಾಡಿ ಹೈಸ್ಕೂಲಿನಲ್ಲಿ ಜರಗಿದ ಕುಂಬಡಾಜೆ ಗ್ರಾಮ ಪಂಚಾಯತಿನ ವಿಕಸನ ಸೆಮಿನಾರ್‌ನಲ್ಲಿ - ಪಂಚಾಯತಿನ ಅಭಿವೃದ್ಧಿ ವರದಿಗೆ ಸೇರಿಸಲಾದ - ಭಾಗಗಳು.

79 - 1989

ಅಧ್ಯಕ್ಷರು :- ಶ್ರೀ. ಕೆ. ತಿಮ್ಮಪ್ಪ ರೈ.
ಉಪಾಧ್ಯಕ್ಷರು :- ಡಾ. ವೈ. ಕೆ. ಕೇಶವ ಭಟ್ಟ
ಸದಸ್ಯರು

1. ಶ್ರೀ ಬಿ. ಗಣಪತಿ ಭಟ್ಟ.
2. ಶ್ರೀ ಪಿ. ಯನ್. ಆರ್. ಅಮ್ಮಣ್ಣಾಯ.
3. ಶ್ರೀ ಕೆ. ಪದ್ಮನಾಭ ಭಟ್ಟ
4. ಶ್ರೀ ಯಂ. ಅಯಿತ್ತಪ್ಪ
5. ಶ್ರೀ ಅಬ್ದುಲ್ಲ ಮೊಯಿದ್ ಕುಞ್ಞಿ
6. ಶ್ರೀಮತಿ ಯಂ. ಇಂದಿರಾ ರೈ.

1988 - 1995

ಅಧ್ಯಕ್ಷರು :- ಶ್ರೀ ಡಾ. ವೈ. ಕೆ. ಕೇಶವ ಭಟ್ಟ
ಉಪಾಧ್ಯಕ್ಷರು :- ಶ್ರೀ ಜಿ. ಹಸನಾರ್
ಸದಸ್ಯರು

1. ಶ್ರೀ ಕೆ. ಶಾಮ ಭಟ್ಟ
2. ಶ್ರೀ ಯಂ. ಸಂಜೀವ ಶೆಟ್ಟಿ
3. ಶ್ರೀ ಪಿ. ಯನ್. ಆರ್. ಅಮ್ಮಣ್ಣಾಯ
4. ಶ್ರೀ ಯಂ. ಅಯಿತ್ತಪ್ಪ.
5. ಶ್ರೀಮತಿ ಗೀತ.
6. ಶ್ರೀಮತಿ ಜೈನಬಿ.

ಂತಾ

ಷಿಯೂ ನೀರಾವರಿಯೂ

ಕಲಿಮಾಡಿದ ಹಣ್ಣು ಹಂಪಲುಗಳ ಬೆಳೆಗೆ ಪ್ರೋತ್ಸಾಹ ಸಿಗಬೇಕು.

2. ಒಣಭೂಮಿಯಲ್ಲಿ ಕಂಪೋಸ್ಟ್ ಗೊಬ್ಬರ ವೈಯಕ್ತಿಕವಾಗಿ ತಯಾರಿಸುವರೇ ಪ್ರತಿವಾರ್ಡಿನ ಕೃಷಿಕರಿಗೆ ಪ್ರೋತ್ಸಾಹ ಕೊಡಬೇಕು.
3. ಸರಕಾರೀ ಭೂಮಿಯಲ್ಲಿ ಕೃಷಿಮಾಡಿ ಸ್ವಂತ ಸ್ವಾಧೀನದಲ್ಲಿ ಅನುಭವಿಸುತ್ತಿರುವ ಎಲ್ಲರಿಗೂ ಆ ಜಾಗೆಯ ಪಟ್ಟೆಯನ್ನು ಕೊಡಬೇಕು.
4. ಕೃಷಿಯಿಲ್ಲದ ಸರಕಾರಿ ಭೂಮಿಯನ್ನು ಭೂರಹಿತರಿಗೆ ಕೃಷಿಗೋಸ್ಕರ ಕೊಡಬೇಕು.
5. ಭತ್ತದ ಕೃಷಿಗೆ ಈಗಿರುವ ಗ್ರೂಫ್ ಫಾರ್ಮಿಂಗ್ ವ್ಯವಸ್ಥೆಯನ್ನು ಇತರ ಕೃಷಿಗಳಿಗೂ ವಿಸ್ತರಿಸಬೇಕು.
6. ಕಾಸರಗೋಡು ಜಿಲ್ಲೆಗೆ ಬೇಕಾದಷ್ಟು ನೀರು ಮತ್ತುವಿದ್ಯುತ್ ಲಭ್ಯವಾಗಲು ಪಯಸ್ವಿನಿ ಹೊಳೆಗೆ ಅಣೆಕಟ್ಟು ನಿರ್ಮಿಸಬೇಕು.

ಮೀನುಗಾರಿಕೆ - ಮೃಗಸಂರಕ್ಷಣೆ

1. 'ಇಂಟೆನ್ಸಿವ್ ಕೇಟ್ಲ್‌ಫೀಡಿಂಗ್' ವ್ಯವಸ್ಥೆಯನ್ನು ಇಡೀ ಪಂಚಾಯತಿನಲ್ಲಿ ಜಾರಿಗೆ ತರಬೇಕು.
2. ವಿತಡ್ಕ ಮೃಗಾಸ್ಪತ್ರೆಗೆ ಶಾಶ್ವತ ಕಟ್ಟಡ ನಿರ್ಮಿಸಬೇಕು.
3. ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿಯೂ ಮೀನು ಮಾರುಕಟ್ಟೆ ಬೇಕು.
4. ಪಂಚಾಯತಿನಲ್ಲಿ ಒಂದು ಮೀನುಮರಿ ಸಾಕಣಾ ಕೇಂದ್ರ ತೆರೆಯಬೇಕು.

ವಿದ್ಯಾಭ್ಯಾಸ

1. ಎ. ಯು. ಪಿ. ಶಾಲೆ ಮವ್ವಾರನ್ನು ಹೈಸ್ಕೂಲಾಗಿ ಭಡ್ತಿಗೊಳಿಸಬೇಕು.
2. ವಿದ್ಯಾರ್ಥಿಗಳಲ್ಲಿ ವಿದ್ಯಾಮಟ್ಟವು ಸುಧಾರಿಸಲು ಏಳನೇ ಕ್ಲಾಸಿಗೆ ಜಿಲ್ಲಾ ಮಟ್ಟದ ಪರೀಕ್ಷೆಯನ್ನು (Pub;ic Examination) ನಡೆಸಬೇಕು.
3. ಶಾಲೆಯ ಅಧ್ಯಾಪಕರುಗಳನ್ನು ಇತರ ಕೆಲಸಗಳಿಗೆ ಸರಕಾರ ನೇಮಿಸುವಾಗ ಆ ಶಾಲೆಯ ವಿದ್ಯಾರ್ಥಿಗಳ ಪಠನದ ವಿಚಾರವು ಅವಗಣಿಸಲ್ಪಡಬಾರದು.
4. ಜಿ. ಜೆ. ಬಿ. ಎಸ್. ಕುಂಬ್ಡಾಜೆಯ ಹಳೆಕಟ್ಟಡವನ್ನು ದುರಸ್ತಿಗೊಳಿಸಬೆಕು.

5. ಏಳನೇ ತರಗತಿಯ ವರೆಗೆ ಎಲ್ಲಾ ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಊಟವನ್ನು ವಿತರಿಸಬೇಕು.
6. ಪಂಚಾಯತಿನಲ್ಲ ಒಂದು ಮಲಯಾಳ ಮಾಧ್ಯಮದ ಹೈಸ್ಕೂಲನ್ನು ಸ್ಥಾಪಿಸಬೇಕು.
7. ಪಂಚಾಯತಿನ ಎಲ್ಲಾ ಸರಕಾರೀ ಶಾಲೆಗಳಿಗೂ ಆವರಣ (Compound wall) ನಿರ್ಮಿಸಬೇಕು.
8. ಎಲ್ಲಾ ಶಾಲೆಗಳಿಗೂ ವಿದ್ಯುತ್ ಸೌಕರ್ಯ ಒದಗಿಸಬೇಕು.
9. 5ನೇ ಕ್ಲಾಸಿನ ಹಾಗೂ ಇತರ ಎಲ್ಲಾ ಕ್ಲಾಸುಗಳಿಗೆ ಕನ್ನಡ ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ವಿತರಿಸಿ ಈಗಿನ ಕನ್ನಡದ ಮಲತಾಯಿ ಧೋರಣೆಯನ್ನು ನಿವಾರಿಸಬೇಕು.

ಸಾರ್ವಜನಿಕ ಆರೋಗ್ಯ

1. ಕುಟುಂಬ ಕಲ್ಯಾಣ ಯೋಜನೆಯನ್ನು ಫಲಪ್ರದ ರೀತಿಯಲ್ಲಿ ಜನರಿಗೆ ಮನವರಿಕೆ ಮಾಡಿಕೊಡಬೇಕು.
2. ಮವ್ವಾರಿನಲ್ಲಿ ಶುದ್ಧನೀರಿನ ಟ್ಯಾಂಕೊಂದನ್ನು ನಿರ್ಮಿಸಿ ಮವ್ವಾರು ಶಾಲೆಯ ವರೆಗೆ ಮತ್ತು ಎ. ಪಿ. ಸರ್ಕಲ್‌ನ ವರೆಗೆ ನಳ್ಳಿ ನೀರಿನ ವ್ಯವಸ್ಥೆ ಮಾಡಬೇಕು.
3. ಇದೇ ರೀತಿ ಪಂಚಾಯತಿನ ಇತರ ನೀರಿನ ಅಭಾವದ ಸ್ಥಳಗಳಲ್ಲಿ ನಳ್ಳಿ ನೀರು ಸರಬರಾಜಿನ ವ್ಯವಸ್ಥೆ ಮಾಡಬೇಕು.

ಕೈಗಾರಿಕೆ

1. ಕೈಗಾರಿಕೆಗಳ ಸಾಲಸೌಲಭ್ಯದ ವಿಧಾನಗಳನ್ನು ಹಾಗೂ ಭದ್ರತೆಯ ಕ್ರಮಗಳನ್ನು ಸರಳಗೊಳಿಸಬೇಕು.
2. ಸರಕಾರದ ವತಿಯಿಂದ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಬೇಕು.

ಸಾರಿಗೆ ಚೈತನ್ಯ

1. ಬೆಳಿಂಜೆ - ಬಾಕತ್ತಿಮಾರ್ - ಗಾಡಿಗುಡ್ಡೆ ರೋಡನ್ನು P. W. D. ವಹಿಸಿಕೊಳ್ಳಬೇಕು.
2. ಕಡಾರು - ಓಡಂಗಲ್ಲು ರೋಡಿಗೆ ಅಜ್ಜಿಮೂಲೆ ಎಂಬಲ್ಲಿ ಸಂಕವನ್ನು ನಿರ್ಮಿಸಬೇಕು.
3. ಗಾಡಿಗುಡ್ಡೆ - ಪಿಲಿಂಬಳ - ತಲೆಬೈಲು - ಆಲಿಂಜ ರೋಡು ನಿರ್ಮಿಸಬೇಕು.
4. ಗಾಡಿಗುಡ್ಡೆ -ಬಲೆಕ್ಕಳ- ಎಡಪ್ಪಾಡಿ ಬಯಲು ಮುಖಾಂತರ ಬೆಳ್ಳಿಗೆ ರೋಡಿಗೆ ಜೋಡಿಸಬೇಕು.
5. ನಡುಮಜಲು - ಗುಂಡಿಲ - ಕಜೆ ಕೋಲನಿಯಿಂದ ಗಾಡಿಗುಡ್ಡೆ ರೋಡಿಗೆ ಜೊ[illegible]ಬೇಕು.
6. ಪಾಲಗ ಪರಿಶಿಷ್ಟ ಜಾತಿ ವರ್ಗ ಕಾಲನಿಯಾಗಿ ಕಜೆ - ಕಾರೆಕ್ಕಾಡು ದಾರಿಯಾಗಿ ಗಾಡಿಗುಡ್ಡೆ ರೋಡಿಗೆ ಸಂಪರ್ಕ ಕಲ್ಪಿಸಬೇಕು.
7. ಗಂಡಿತ್ತಡ್ಕದಿಂದ ಕಾರೆಕ್ಕಾಡು ಕಾಲನಿಗೆ ರೋಡು ನಿರ್ಮಿಸಬೇಕು.
8. ಪಾತೇರಿ - ಮಾಚಾವು - ಕುದಿಂಗಿಲ ರೋಡಿಗ ಮಾಚಾವು ಎಂಬಲ್ಲಿ ಸಂಕ ನಿರ್ಮಿಸಬೇಕು.
9. ಮಠದಮೂಲೆ ಮಾರ್ಗವನ್ನು ಗೋಸಾಡ ಮಾರ್ಗಕ್ಕೆ ಮಲ್ಲಮೂಲೆಯಲ್ಲಾಗಿ ಸಂಪರ್ಕಿಸುವಂತೆ ಮಾಡಬೇಕು.
10. ಪೊನ್ನಂಗುರಿ - ಮಠದಮೂಲೆ ಹೊಸ ರೋಡು ನಿರ್ಮಾಣವಾಗಬೇಕು.
11. ಮವ್ವಾರು - ಮಠದಮೂಲೆ ಮಾರ್ಗವನ್ನು ಪುನರ್ ನಿರ್ಮಿಸುವುದರೊಂದಿಗೆ ಗೋಸಾಡದ ವರೆಗಿನ ಕಾಲುದಾರಿಯನ್ನು ದುರಸ್ತಿಗೊಳಿಸಬೇಕು.
12. ಅನ್ನಡ್ಕ - ಮರಿಕ್ಕಾನ ರೋಡು ನಿರ್ಮಿಸುವುದು.
13. ಬಾಳ್ಚೇರ - ಮುಗುಳಿಮೂಲೆ ರೋಡುಗಳನ್ನು ತಮ್ಮೊಳಗೆ ಜೋಡಿಸಬೇಕು.
14. ಚೆಕ್ಕೂಡಲ್- ಸೀತಾಂಗೋಳಿ ರೋಡು ಬಾರಡ್ಕ ರೋಡಿಗೆ ಜೋಡಣೆಯಾಗಬೇಕು.
15. ಪಿಲಾಂಗಟ್ಟೆ - ಉಬ್ರಂಗಳ - ಚುಳ್ಳಿಕ್ಕಾನ ಮಾರ್ಗವನ್ನು ಕುಂಡೆಪ್ಪಾಡಿ ಮಾರ್ಗಕ್ಕೆ ಜೋಡಿಸಬೇಕು.
16. ಪು ತ್ರೋಡಿಯಿಂದ ಕುರುಮಜಲು ದಾರಿಯಾಗಿ ಪಿ. ಜಿ. ಸರ್ಕಲ್‌ಗೆ ಹೊಸ ಮಾರ್ಗದ ನಿರ್ಮಾಣವಾಗಬೇಕು.
17. ಬೆಳಿಂಜ- ಬಾಳೆಗದ್ದೆ - ಆನೆಪಳ್ಳಕ್ಕೆ ನೂತನ ಮಾರ್ಗದ ನಿರ್ಮಾಣ.
18. ಪರಪ್ಪೆ - ಗೋಸಾಡ ಹೊಸಮಾರ್ಗದ ನಿರ್ಮಾಣ.
19. ಶಾಲೆಗಳಿರುವಲ್ಲಿ ಮತ್ತು ಜನ ಸೇರುವಲ್ಲಿ ಮಾರ್ಗಗಳ ಸೂಚನಾ ಫಲಕವಿರಬೇಕು.
20. ಈ ಕೆಳಗಿನ ಸ್ಥಳಗಳಲ್ಲಿ ವಿದ್ಯುತ್ ಟ್ರಾನ್ಸ್‌ಫೋರ್ಮರ್‌ಗಳನ್ನು ಹೊಸತಾಗಿ ಅಳವಡಿಸಬೇಕು - 1. ಪುತ್ರಕ್ಕಳ, 2. ನೀರಡ್ಕ, 3. ಗೋಸಾಡ -2, 4. ಶಾಂತಿಪಳ್ಳ, 5. ತಲೆಬೈಲು, 6.ಮುಕ್ಕೂರು ಮಜಲು, 7. ಬೇಂದ್ರೋಡು, 8. ಪಿಲಿಂಬಳ , 9. ಗಾಡಿಗುಡ್ಡೆ ಪರಿಶಿಷ್ಟ ಜಾತಿ ವರ್ಗ ಕಾಲನಿ, 10. ಒಡಂಬಳೆ, 11. ಉಬ್ರಂಗಳ, 12. ಕಾರೆಕ್ಕಾಡು ಕಾಲನಿ, 13. ಕೀರಿಕ್ಕಾಡು, 14. ಬೈರಮೂಲೆ.
21. ಬೆಳಿಂಜ, ಗಾಡಿಗುಡ್ಡೆ ಎಂಬ ಸ್ಥಳಗಳಲ್ಲಿ ಹೊಸತಾಗಿ ಅಂಚೆ ಕಚೇರಿ ಪ್ರಾರಂಭಿಸಬೇಕು.
22. ಬೆಳಿಂಜ, ಕುದಿಂಗಿಲ, ಕುಂಬ್ಡಾಜೆ, ಜಯನಗರ ಎಂಬ ಸ್ಥಳಗಳಲ್ಲಿ ದೂರವಾಣಿ ಕೇಂದ್ರಗಳನ್ನು ತೆರೆಯಬೆಕು.

23. ಅರ್ಜಿಹಾಕಿದ ಎಲ್ಲಾ ಗ್ರಾಹಕರಿಗೂ ದೂರವಾಣಿ ಸಂಪರ್ಕವನ್ನು ಕೂಡಲೇ ಕಲ್ಪಿಸಬೇಕು.
24. ಗಾಳಿಯಿಂದ ವಿದ್ಯುತ್ತನ್ನುತ್ಪಾದಿಸಿ ನೀರೆತ್ತುವ ಘಟಕಗಳನ್ನು ಪಂಚಾಯತಿನ ಎಲ್ಲಾ ಕಡೆಗಳಲ್ಲೂ ಸ್ಥಾಪಿಸಬೇಕು.
25. ಸಾರ್ವಜನಿಕ ಮೂರುಕಟ್ಟೆ ವ್ಯವಸ್ಥೆಗಳನ್ನು ಬೆಳಿಂಜ, ಗಾಡಿಗುಡ್ಡೆ, ಗೋಸಾಡಗಳಲ್ಲಿ ಸ್ಥಾಪಿಸಬೇಕು.

ಭವನ ನಿರ್ಮಾಣ ಕ್ಷೇಮ ಕಾರ್ಯಕ್ರಮಗಳು

1.ಪರಿಶಿಷ್ಟ ವರ್ಗ, ಜಾತಿ ಮತ್ತು ಇತರ ದಾರಿದ್ರ. ರೇಖೆಯಿಂದ ಕೆಳಗೆ ಇರುವವರಿಗೆ ಮನೆತೆರಿಗೆಯನ್ನು ನಿಲ್ಲಿಸಬೇಕು.
2. ಸಹಕಾರಿ ಗೃಹನಿರ್ಮಾಣ ಸಂಘವನ್ನು ಪಂಚಾಯತಿನಲ್ಲಿ ಸ್ಥಾಪಿಸಬೇಕು.

ಸಂಸ್ಕೃತಿ

1. ಪಂಚಾಯತಿನ ಗಿರಿಜನ ಹಾಗೂ ಗಿರಿವರ್ಗ ಜನಾಂಗದವರ ಜಾನಪದ ಕಲೆ ಹಾಗೂ ಅವರ ವೃತ್ತಿಗಳಿಗೆ ಸಾಕಷ್ಟು ಆರ್ಥಿಕ ಸಹಾಯ ಒದಗಿಸಬೇಕು . [ಮುಟ್ಟಿಪಾಳೆ ನಿರ್ಮಾಣ, ಭೂತಕಟ್ಟುವ ವೃತ್ತಿ ಮುಂತಾದುವುಗಳು]
2. ಜಾನಪದ ಹಾಡುಗಳನ್ನು ಪುಸ್ತಕರೂಪದಲ್ಲಿ ಮತ್ತು ರೆಕಾರ್ಡು ಮಾಡಿ ಶಾಶ್ವತವಾಗಿ ಉಳಿಯುವಂತೆ ಮಾಡಬೇಕು.
3. ಸಾಂಸ್ಕೃತಿಕ ಕಲೆಗಳ ಪರಿಣತರ ಒಂದು ಕಮಿಟಿಯನ್ನು ನಿರ್ಮಿಸಿ ಆ ಮುಖಾಂತರ ಇತರರಿಗೂ ತಿಳಿಯಪಡುವಂತೆ ತಕ್ಕ ತರಬೇತಿ ಕ್ರಮಗಳನ್ನು ಏರ್ಪಡಿಸಬೇಕು.

ವನಿತಾ

1. ಈ ಪಂಚಾಯತಿನ ಮಹಿಳೆಯರು ವಿದ್ಯಾಭ್ಯಾಸ ಹಾಗೂ ಇತರ ವೃತ್ತಿಗಳಲ್ಲಿ ಹಿಂದುಳಿದವರಾಗಿರುವರು. ಅದರಲ್ಲಿ ಮುಖ್ಯವಾಗಿ ಮುಸಲ್ಮಾನ ಸಹೋದರಿಯರು ಒಳಪಡುತ್ತಾರೆ. ಇದನ್ನು ಪರಿಹರಿಸಲು ಮೇಧಾವಿತ್ವ ಪಡೆದ ಗಂಡಸರು ಸರಿಯಾದ ತಿಳುವಳಿಕೆಯನ್ನು ಕೊಟ್ಟು ಮುಂದುವರಿಯಲು ಅವಕಾಶವನ್ನೀಯಬೇಕು.
2. ಬಹುಪತ್ನಿತ್ವವನ್ನು ಕಾನೂನಿನ ಮೂಲಕ ಪ್ರತಿಬಂಧಿಸಬೇಕು. ಮತ್ತು ಮಕ್ಕಳ ಸಂಖ್ಯೆಗಳನ್ನು ಪರಿಮಿತಗೊಳಿಸಬೇಕು.
3. ಪಂಚಾಯತಿನ ಎಲ್ಲಾ ಜನರು ತಮ್ಮ ಮದುವೆಯ ನಂತರ ಮದುವೆಯನ್ನು ಕಡ್ಡಾಯವಾಗಿ ಪಂಚಾಯತಿನಲ್ಲಿ ರೆಡಿಸ್ಟರ್ ಮಾಡಬೇಕು.
4. ಮಹಿಳೆಯರಿಗ ಉತ್ತಮ ಸಲಹೆಗಳನ್ನು ಕೊಟ್ಟು ಮುಂದುವರಿಯಲು ಪ್ರೋತ್ಸಾಹ ನೀಡಿ ಮಹಿಳಾ ಕಲ್ಯಾಣ ಸಮಿತಿಗಳನ್ನು ನಿರ್ಮಿಸಬೇಕು.
5. ಮಹಿಳೆಯರಿಗೆ ಕಲಿಯುವಿಕೆಯ ಎಲ್ಲಾ ಹಂತಗಳಲ್ಲೂ ಪ್ರೋತ್ಸಾಹಕ ಧನಸಹಾಯ ಸರಕಾರದಿಂದ ಲಭಿಸಬೇಕು.

ಸಹಕಾರಿ ರಂಗ

1. ಕಡಿಮೆ ಬಡ್ಡಿಗೆ ಮನೆ ನಿರ್ಮಾಣಕ್ಕೋಸ್ಕರ ಸಾಲಗಳ ಸೌಲಭ್ಯ ಒದಗಿಸಬೇಕು.
2. SC -ST ಮತ್ತು ಬಡತನ ರೇಖೆಗಿಂತ ಕೆಳಗಿನವರಿಗೆ ಮನೆಕಟ್ಟಲು ಬಡ್ಡಿರಹಿತ ಸಾಲದ ವ್ಯವಸ್ಥೆಯಾಗಬೇಕು.
3. ಕನ್ಸ್ಯೂಮರ್ ಸಹಕಾರಿ ಸಂಸ್ಥೆಗಳನ್ನು ನಿರ್ಮಿಸಬೇಕು.
4. ಹೌಸಿಂಗ್ ಸೊಸೈಟಿಯ ನಿರ್ಮಾಣವನ್ನು ಮಾಡಬೇಕು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ

1. ಪರಿಶಿಷ್ಟ ಜಾತಿಯಲ್ಲಿ ವರ್ಣಾನ್ ವರ್ಗದವರನ್ನು ಸೇರ್ಪಡೆಗೊಳಿಸಬೇಕು.
2. ಪರಿಶಿಷ್ಟ ಜಾತಿ /ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ [Uniform] ಒದಗಿಸಬೇಕು.
3. ಗುಡ್ಡ ಪ್ರದೇಶಗಳಲ್ಲಿ ಮಳೆಯನ್ನಾಶ್ರಯಿಸಿ ಭತ್ತದ ಕೃಷಿಯನ್ನು ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು.
4. ಮೇನೇಜ್‌ಮೆಂಟ್ ಶಾಲೆಗಳಲ್ಲೂ ಉದ್ಯೋಗದಲ್ಲಿ SC - STಯವರಿಗೆ ಕಾದಿರಿಸುವಿಕೆ [Reserve]ನೀಡಬೇಕು.
5. SC-STಯವರಿಗೆ ಮೀಸಲಿರಿಸಿದ ಸ್ಥಳಗಳನ್ನು ಇತರ ವರ್ಗದವರಿಗೆ ವಿತರಿಸಬಾರದು.
6. SC-STಯವರಿಗೆ ಮನೆತೆರಿಗೆ ಮತ್ತು ಇತರ ತೆರಿಗೆಗಳನ್ನು ರದ್ದುಗೊಳಿಸಬೇಕು.
7. ಎಲ್ಲಾ ಕಾಲನಿಗಳಿಗೂ ಪ್ರತ್ಯೇಕ ರುದ್ರಭೂಮಿ ಒದಗಿಸಬೇಕು.
8. ಪಂಪ್‌ಸೆಟ್ ನೀಡಿದ ಕಾಲನಿವಾಸಿಗಳಿಗೆ ಸೀಮೆಎಣ್ಣೆ ಪರ್ಮಿಟನ್ನು ಕೊಡಬೇಕು.
9. ಮೇನೇಜ್‌ಮೆಂಟ್ ಶಾಲೆಗಳಲ್ಲಿ P. T. A. ಶುಲ್ಕಗಳು SC - STಯವರಿಗೆ ವಿನಾಯಿತಿಗೊಳಿಸಬೇಕು.

ಸಂಪನ್ಮೂಲ

1. ಪಂಚಾಯತ್ ಪೊರಂಬೋಕು ಸ್ಥಳಗಳನ್ನು ಸ್ವಾಧೀನವಿರಿಸಿಕೊಳ್ಳುವವರಿಂದ ನಿಶ್ಚಿತ ಶುಲ್ಕವನ್ನು ಪ್ರತಿವರ್ಷವೂ ಸಂಗ್ರಹಿಸಬೇಕು.

2. ಪಂಚಾಯತಿನಲ್ಲಿ ನಡೆಯುವ ಮನೋರಂಜನಾ ಕಾರ್ಯಕ್ರಮಗಳಿಗೆ ಮತ್ತು ಇತರ ಪ್ರಚಾರಗಳಿಗೆ ಪ್ರತ್ಯ ಪ್ರತ್ಯೇಕ ಒಪ್ಪಿಗೆ ಪತ್ರವನ್ನು ಪಂಚಾಯತಿನಿಂದ ಪಡೆಯಬೇಕೆಂತಲೂ ಅದಕ್ಕೆ ನಿಶ್ಚಿತ ಹಣವನ್ನು ತೆರಬೇಕೆಂತಲೂ ವ್ಯವಸ್ಥೆ ಮಾಡಬೇಕು.
3. ಕಟ್ಟಡ ನಿರ್ಮಾಣಗಳಿಗೆ ಈಗಿರುವ ರೆವೆನ್ಯೂ ಟೇಕ್ಸನ್ನು ಪಂಚಾಯತಿಗೇ ಸಿಗುವಂತೆ ಮಾಡುವುದು.
4. ಸೀಮೆಯೆಣ್ಣೆ ಪರ್ಮಿಟನ್ನು ಪಂಚಾಯತಿನಿಂದಲೇ ವಿತರಿಸುವಂತೆಯೂ ಸದ್ರಿ ಪರ್ಮಿಟುಗಳಲ್ಲಿ ಆಯಾಯ ವ್ಯಕ್ತಿಗಳು ಸಂದಾಯ ಮಾಡುವ ವೃತ್ತಿ ತೆರಿಗೆಯ ಪ್ರಮಾಣಕ್ಕನುಸರಿಸಿ ಸೀಮೆಯೆಣ್ಣೆ ಪ್ರಮಾಣವನ್ನು ನಿರ್ಧರಿಸುವ ವ್ಯವಸ್ಥೆಯನ್ನು ಮಾಡಬೇಕು.

ಪಂಚಾಯತಿನ ಸಾಂಸ್ಕೃತಿಕ ಸಾಮಾಜಿಕ ಚರಿತ್ರೆ

ಕುಂಬ್ಡಾಜೆ ಪಂಚಾಯತಿನಲ್ಲಿ ಉದ್ಭವಿಸುವ ಹೆಚ್ಚಿನ ಎಲ್ಲಾ ವಿವಾದಗಳಿಗೂ ಸೂಕ್ತ ಪರಿಹಾರ ನೀಡಿ ತೀರ್ಪು ನೀಡುತ್ತಿದ್ದ ಮಹನೀಯರುಗಳಲ್ಲಿ ಕುಂಬ್ಡಾಜೆ ಶ್ರೀ ಶಾಂತ ಆಳ್ವರು, ಶ್ರೀಕೃಷ್ಣ ಶಾಸ್ತ್ರಿಗಳು ಪ್ರಮುಖರಾಗಿದ್ದರು.
ಈ ಪಂಚಾಯತಿನ ಎಂ. ರಾಮಣ್ಣ ರೈಗಳು ಸುಮಾರು 12 ವರ್ಷದ ವರೆಗೆ ಎಂ. ಪಿ. ಗಳಾಗಿಯೂ, ಹತ್ತು ವರ್ಷಕ್ಕಿಂತ ಹೆಚ್ಚು ಕಾಸರಗೋಡು ಮುನ್ಸಿಪಲ್ ಅಧ್ಯಕ್ಷರಾಗಿಯೂ ಉತ್ತಮ ಸೇವೆಗೈದ ಜನ ಪ್ರತಿನಿಧಿಗಳಾಗಿದ್ದಾರೆ. ಹಾಗೆಯೇ ಶ್ರೀಯುತ ಯು. ಪದ್ಮನಾಭ ಕುಣಿಕುಳ್ಳಾಯರು ಕೇರಳ ಎಸೆಂಬ್ಲಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವರು. ವೈದ್ಯರುಗಳ ಸಾಲಿನಲ್ಲಿ ಚೆಂಬರಮಜಲು ಮಮ್ಮು ಇ ವೈದ್ಯರು, ಗೋಸಾಡ ರಾಮುಣ್ಣಿ ವೈದ್ಯರು, ಕುಂಞಿರಾಮ ವೈದ್ಯರು, ಬಡಕ್ಕಾಜೆ ಮಾನ ವೈದ್ಯರುಗಳು ಖ್ಯಾತರಾಗಿರುವರು. ಶ್ರೀಯುತು ಮಠದಮೂಲೆ ಬಟ್ಯಪ್ಪ ರೈಗಳು, ಉಬ್ರಂಗಳ ಅಪ್ಪಕುಂಞಿ ಬೆಳ್ಚಪ್ಪಾಡರು ಖ್ಯಾತ ಪಶುವೈದ್ಯರುಗಳಾಗಿ ಈಗಲೂ ಸೇವೆ ಸಲ್ಲಿಸುತ್ತಿರುವರು. ಜೀವಂತ ಹುಲಿಯೊಡನೆ ಹೋರಾಡಿದ ಹುಲಿ ವೆಂಕಪ್ಪಭಟ್ಟರೆಂದೇ ಖ್ಯಾತರಾದ ಧೀರ ವ್ಯಕ್ತಿಯೂ ಈ ಪಂಚಾಯತಿನವರೇ ಆಗಿದ್ದಾರೆ.
ಹಾಗೆಯೇ ಕುಟ್ಟಿ ಬೆಳ್ಚಪ್ಪಾಡ, ಕಣ್ಣ ಬೆಳ್ಚಪ್ಪಾಡ, ಶಂಕರ ಪೂಜಾರಿ ಇವರೆಲ್ಲರೂ ಕುಂಬ್ಡಾಜೆಯ ವೈದ್ಯರ ಸಾಲಿನಲ್ಲಿ ಹೆಸರುವಾಸಿಗಳಾಗಿದ್ದರು.
ಸಿದ್ಧ ಪುರುಷರುಗಳಿಂದ ಸ್ಥಾಪಿಸಲ್ಪಟ್ಟ ಪುರಾತನ ದೇವಾಲಯಗಳ ಪೈಕಿ ಅಲಿಂಜ ಶ್ರೀ ಮಹಾವಿಷ್ಣು ದೇವಸ್ಥಾನವೂ ಒಂದಾಗಿದ್ದು ಅದರ ಜೀರ್ಣೋದ್ಧಾರ ಕಾರ್ಯಗಳು ಈಗ ಭರದಿಂದ ಸಾಗುತ್ತಿದೆ. ಕುಂಬಳೆ ಸೀಮೆಯ ನಾಲ್ಕು ಪುರಾತನ ಪಡೆಪ್ಪುರೆಗಳಲ್ಲಿ ಅಗಲ್ಪಾಡಿ ನಡುಮನೆ [ಮಿತ್ತನಾಡು ಪಡಿಪ್ಪುರೆ] ಇದು ಒಂದಾಗಿದೆ.

ಉಪಸಂಹಾರ

ಕುಂಬ್ಡಾಜೆಯ ಜನತೆ ಒಂಭತ್ತನೆಯ ಪಂಚವಾರ್ಷಿಕ ಯೋಜನೆಯನ್ನು ಸಾಕ್ಷಾತ್ಕಾರವಾಗುವುದಕ್ಕಿಂತಲೂ ಮುಂದಿನ ನಿರೀಕ್ಷೆಯಲ್ಲಿದೆ ಎಂಬುದು ಗ್ರಾಮಸಭೆಯ ವರದಿಯಿಂದ ನಮಗೆ ತಿಳಿಯಬಹುದಾಗಿದೆ. ಪರಿಮಿತವಾದ ಸಂಪನ್ಮೂಲಕ್ಕೂ ಅನಂತವಾದ ಅಭಿವೃದ್ಧಿ ಕೆಲಸಗಳಿಗೂ ಹೊಂದಾಣಿಕೆ ಇರಲಾರದು. ಹೀಗಿದ್ದೂ ತಮ್ಮ ಆವಶ್ಯಕತೆಗಳನ್ನು ಬಹಿರಂಗಪಡಿಸಲು ಜನತೆ ಮುಂದೆ ಬಂದಿರುವುದು ಸ್ವಾಗತಾರ್ಹವಾಗಿದೆ. ನಿರೀಕ್ಷೆಗಳು ಅಸ್ತಮಿಸುವುದಕ್ಕಿಂತಲೂ ಆಶಾವಾದಿಗಳಾಗಿರುವುದು ಉತ್ತಮವಲ್ಲವೇ? ತಮ್ಮ ಆವಶ್ಯಕತೆಗಳನ್ನು ಮುಂದಿಡುವುದರೊಂದಿಗೆ ಸಹಕರಿಸಿದ್ದಾರೆ. ತಮ್ಮಿಂದ ಏನಾಗಬೇಕು ಎಂಬ ಉತ್ಸುಕತೆ ಜನತೆಯಲ್ಲಿ ಮೂಡಿಬಂದಿರುವುದು ಅಭಿನಂದನಾರ್ಹವಾಗಿದೆ. ಅತ್ಯುತ್ಸಾಹ, ಸಾಮಾಜಿಕ, ಭಾವೈಕ್ಯ ಕಳೆದ ಕೆಲವೇ ದಿನಗಳಲ್ಲಿ ನಮ್ಮ ಗ್ರಾಮದ ಜನರಲ್ಲಿ ಕಂಡುಬಂದಿದೆ. ವಾದಸಂವಾದಗಳಿಂದ ಜಾತಿ ಮತ ಭೇದ ಮರೆತು ರಾಜಕೀಯದಿಂದ ದೂರವಿದ್ದು ಮುಂದೆ ಬಂದುದು ಜನತೆಯ ಒಗ್ಗಟ್ಟಿಗೆ ಸವಾಲು ಎಂಬುದನ್ನು ಹೆಮ್ಮೆಯಿಂದ ಸ್ಮರಿಸಬಹುದು.

'ಆದಾಯಕ್ಕಿಂತ ಹೆಚ್ಚಿನ ಖರ್ಚು' ಎಂಬ ಸಾಧಾರಣ ಮಾತಿನಿಂದ ನಮ್ಮ ಪಂಚಾಯತೂ ಹೊರತಲ್ಲ. ಈ ರೀತಿಯ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರಕಾರವನ್ನು ಮಾತ್ರ ಆಶ್ರಯಿಸಬೇಕಾದ ಸ್ಥಿತಿ ನಮಗಿದೆ. ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನಪರವಾಗಿ ವಹಿಸಿಕೊಂಡು ನಡೆಸಲಿರುವ ಒಂದು ಅಭಿವೃದ್ಧಿ ಸಂಸ್ಕೃತಿಯನ್ನು ಜನರಲ್ಲಿ ಬೆಳೆಸಬೇರಾಗಿದೆ. ಜನಪರವಾದ ಐಕ್ಯತೆಯ ಮೂಲಕ ಮಾತ್ರವೇ ಇದು ಸಾಧ್ಯವಾಗಬಹುದು. ಅಭಿವೃದ್ಧಿಗಾಗಿ ಜಾತಕ ಪಕ್ಷಿಯಂತೆ ಕಾದುಕುಳಿತುಕೊಳ್ಳುವ ಒಂದು ಜನತೆ ನಮಗೆ ಇನ್ನು ಕಂಡುಬರಬಾರದು.

ಖರ್ಚುಮಾಡುವ ಪ್ರತಿ ರೂಪಾಯಿಗೂ ಗರಿಷ್ಠ ಸಾಧನೆಯನ್ನು ಗಳಿಸಲು ಸಾಧ್ಯವಿರುವ ಯೋಜನೆಗೆ ಪ್ರಥಮ ಪ್ರಾಧಾನ್ಯವನ್ನು ನೀಡಬೇಕು. ಬಡತನ, ನಿರುದ್ಯೋಗ, ಅನಾರೋಗ್ಯ ಎಂಬಿವುಗಳಿಗೆ ಅಭಿವೃದ್ಧಿ ಸಮಸ್ಯೆಗಳಲ್ಲಿ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ.

ಕುಂಬ್ಡಾಜೆಯಂತಹ ಒಂದು ಹಿಂದುಳಿದ ಪಂಚಾಯತಿನ ಜನರು ಅಭಿವೃದ್ಧಿ ಬೋಧನೆಯನ್ನು ಪ್ರಾಥಮಿಕ ಹಂತದಿದಂಲೇ ತಿಳಿಯಬೇಕಾಗಿದೆ. ವಿದ್ಯಾಭ್ಯಾಸ, ಪರಿಸರ ಶುಚೀಕರಣ, ಕುಟುಂಬ ಯೋಜನೆ, ಸ್ವಯಂಸೇವೆ ಎಂಬಿವುಗಳ ಕುರಿತಾದ ನಮ್ಮ ಧೋರಣೆಗಳನ್ನು ಇನ್ನೂ ಉತ್ತಮಗೊಳಿಸಬೇಕಾಗಿದೆ.

ಸ್ವಂತವಾದ ಮನೆಯೊಂದನ್ನು ಹೊಂದಿರದ, ತಮ್ಮ ಮಕ್ಕಳಿಗೆ ಗಂಜಿ ಬೇಯಿಸಿಕೊಡಲು ಕೂಡಾ ಸಾಧ್ಯವಾಗದ ಅಸಹಾಯಕ ಪರಿಸ್ಥಿತಿಯ ತಾಯಂದಿರ ,ಅಶಕ್ತವಾದ ರೋಗಿಗಳ, ನಿರಕ್ಷರಿಗಳ, ನಿರುದ್ಯೋಗಿಗಳ ಕಣ್ಣೀರನ್ನು ತೊಡೆದು ಹಾಕಲು ಈ ಯೋಜನೆಯಿಂದ ನಮಗೆ ಸಾಧ್ಯವಾಗಬಹುದು.

ಸಾಂಸ್ಕೃತಿಕ ಹಾಗೂ ಬೌದ್ಧಿಕವಾದ ಉನ್ನತಿಯನ್ನು ಹೊಂದಲಿರುವ ಒಂದು ಸಮಾಜವನ್ನು ಬೆಳೆಸಲು ಪೂರಕವಾದ ಪರಿಸ್ಥಿತಿಯನ್ನು ರೂಪಿಸಬೇಕಾಗಿದೆ. ಜಾತಿ-ಮತ್ತು ರಾಜಕೀಯಗಳಿಗೆ ಅತೀತವಾಗಿ ಸಾರ್ವಜನಿಕ ಸಮಸ್ಯೆಗಳನ್ನು ಎದುರಿಸಲಿರುವ ಒಂದು ಜನರ ಗುಂಪಾಗಿ ನಾವು ಬದಲಾಗಬೇಕಾಗಿದೆ.

ನಮ್ಮ ಪಂಚಾಯತಿನ ಸಮಸ್ಯೆಗಳನ್ನು ಇರತು, ಅವುಗಳಿಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯಲು ನಮ್ಮ ಪಂಚಾಯತಿನ ಜನರಿಗೇ ಅವಕಾಶ ದೊರೆತಿದೆ. ಹಿಂದಿನ ದೂರುಗಳಿಗೆ ಪ್ರಾಮುಖ್ಯತೆಯಿಲ್ಲವಾದರೂ ನಮ್ಮ ಕನಸುಗಳಿಗೆ ಸರಿಯಾದ ಯೋಜನೆಗಳನ್ನು ರೂಪೀಕರಿಸಲಿರುವ ಈ ಅವಕಾಶ ಪರಿಪೂರ್ಣವಾದ ಪ್ರಾಮಾಣಿಕತೆಯೊಂದಿಗೆ ವಿನಿಯೋಗಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ನಮ್ಮ ಭಾಗದಿಂದ ಸಂಭವಿಸಬಹುದಾದ ಒಂದೊಂದು ಕೊರತೆಯೂ, ಅದು ಮುಂದಿನ ತಲೆಮಾರುಗಳಿಗೆ ನಾವು ಕೊಡುವ ಶಿಕ್ಷೆಯಾದೀತು.

ಪರಿಮಿತವಾದ ಸಮಯ ಹಾಗೂ ಜಟಿಲವಾದ ಸಮಸ್ಯೆಗಳ ಮಧ್ಯೆ ಅಭಿವೃದ್ಧಿ ವರದಿಯನ್ನು ಸಮಗ್ರವಾಗಿಸುವಲ್ಲಿ ನಾವು ಹೆಚ್ಚಿನ ಶ್ರಮ ವಹಿಸಿದ್ದೇವೆ. ಅಭಿವೃದ್ಧಿ ಸಮಸ್ಯೆಗಳನ್ನು ಹೇಗೆ ಎದುರಿಸಬಹುದು ಎಂಬುದನ್ನು ಚರ್ಚಿಸಲಿಕ್ಕಾಗಿ ಈ ಅಭಿವೃದ್ಧಿ ವರದಿಯನ್ನು ನಾವು ವಿನಯಪೂರ್ವಕವಾಗಿ ನಿಮ್ಮ ಮುಂದೆ ಅರ್ಪಿಸುತ್ತಿದ್ದೇವೆ.

ಏನು ಮಾಡಬೇಕು? ಹೇಗೆ ಮಾಡಬೇಕು? ಎಂಬ ಪ್ರಶ್ನೆಗಳಿಗಿರುವ ಉತ್ತರವನ್ನು ಈ ಅಭಿವೃದ್ಧಿ ವರದಿಯ ತಳಹದಿಯಲ್ಲಿ ನಾವೇ ಕಂಡುಹಿಡಿಯಬೇಕು. ಅಭಿವೃದ್ಧಿ ಯೋಜನೆಗಳನ್ನು ರೂಪೀಕರಿಸುವಾಗ ಈ ವರದಿ ಒಂದು ಕೈಪಿಡಿಯಾಗಿ ನಮಗೆ ಸಹಾಯಕವಾಗಿರುತ್ತದೆ. ಯಾಕೆ ಎಂದು ಹೇಳುವುದಾದರೆ ಈ ಪುಸ್ತಕದಲ್ಲಿರುವುದು ಕುಂಬ್ಡಾಜೆ ಪಂಚಾಯತಿನ ಜನರ ಅಂತರಂಗದ ಅಭಿಮತವಾಗಿದೆ. ವಿವಿಧ ಮೂಲಗಳಿಂದ ದೊರಕಿದ ಮಾಹಿತಿಗಳನ್ನು ಕ್ರೋಢೀಕರಿಸಿ ತಯಾರಿಸಿದ ಯೋಜನಾ ವರದಿಯನ್ನು ವಿಕಸನ ಸೆಮಿನಾರಿನಲ್ಲಿಟ್ಟ ಸ್ಕೀಂಗಳನ್ನು ತಯಾರು ಮಾಡಲು ಅವಕಾಶವನ್ನು ಕೊಟ್ಟು ಜ್ಯಾರಿಗೊಳಿಸಿದಾಗ ಪಂಚಾಯತಿನ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗಬಹುದೆಂದು ಆಶಿಸುತ್ತೇನೆ.

ಕುಂಬಡಾಜೆ ಗ್ರಾಮ ಪಂಚಾಯತಿನ ಸರ್ವತೋಮುಖ ಅಭಿವೃದ್ಧಿಯನ್ನು ಲಕ್ಷ್ಯವಾಗಿರಿಸಿಕೊಂಡು ತಯಾರಿಸಲಾದ ಈ ಅಭಿವೃದ್ಧಿ ವರದಿಯನ್ನು ನಿಮ್ಮ ಮುಂದಿರಿಸಲು ಸಂತೋಷಪಡುತ್ತೇನೆ.

With Best Compliments From

PRAKASH

Automobiles

Old Bus Stand Cross Road,
KASARAGOD - 671 121

ಸಮಗ್ರ ಗ್ರಾಮ ವಿಕಸನ

ಸಮಗ್ರ ಗ್ರಾಮ ವಿಕಸನ ನಮ್ಮ ಗುರಿ

ಗ್ರಾಮ ವಿಕಸನಕ್ಕೆ ಸಂಪನ್ಮೂಲ ಅವಶ್ಯ

ಸಂಪನ್ಮೂಲವಿಲ್ಲದೆ ವಿಕಸನ ಸಾಧ್ಯವಿಲ್ಲ

ಗ್ರಾಮ ವಿಕಸನದ ಚಾಲಕ ಶಕ್ತಿ

ಪಂಚಾಯತ್‌ಗಳ ಸಂಪತ್ತಾಗಿದೆ

ಸಂಪನ್ಮೂಲ ಸಂಗ್ರಹಣೆಗೆ ಪಂಚಾಯತುಗಳೊಂದಿಗೆ ಸಹಕರಿಸಿರಿ.
ಪಂಚಾಯತುಗಳಿಗೆ ಕೊಡಬೇಕಾದ ವಿವಿಧ ರೀತಿಯ ತೆರಿಗೆಗಳನ್ನೂ,
ಫೀಸುಗಳನ್ನೂ ಸಮಯಕ್ಕೆ ಸರಿಯಾಗಿ ಕೊಡಿರಿ.
ಇದರಿಂದ ಗ್ರಾಮ ವಿಕಸನದಲ್ಲಿ ಭಾಗಿಯಾಗಿರಿ

ಜಪ್ತಿ, ಶಿಕ್ಷೆ ಮುಂತಾದ ಕಾರ್ಯಕ್ರಮಗಳನ್ನು ಇಲ್ಲದೆ ಮಾಡಲು
ಪಂಚಾಯತುಗಳೊಂದಿಗೆ ಸಹಕರಿಸಿರಿ.

ಪಬ್ಲಿಸಿಟಿ ವಿಭಾಗ

ಪಂಚಾಯತ್ ಇಲಾಖೆ

Sirigannada Offset Printers, Kasaragod - 671121